ಅಖಿಲ ಭಾರತ ಪತ್ರಿಕೆ
ಆಗಸ್ಟ್ 2017



# ದೈವೀ ಕರುಣೆ

ಬೆಲೆ : 15/–



*Lord, deliver us from falsehood,*
*make us emerge in Thy truth*
*pure and worthy of Thy victory.*

\- The Mother

# ಅಖಿಲ ಭಾರತ ಪತ್ರಿಕೆ


**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

## "ದೈವೀ ಕರುಣೆ"


**ಅನು : ಡಾ. ಕೆ.ಎಸ್. ಆಮೂರ**

ದೈವೀ ಕರುಣೆ 3

ಎಂದೆಂದಿಗೂ ಕರುಣೆ ತೋರುವ ದೈವೀ ಪ್ರಭು 29

**ಅನು : ಡಾ. ಬಿ.ಆರ್.ಭೀಡ**

ದೈವೀಕೃಪೆಯ ಕಾಣಿಕೆಗಳು 43

**ಅನು : ಶ್ರೀ ಪುರುಷೋತ್ತಮ ಗಲಗಲಿ**

ಸ್ಮರಣೆಗಳು ಹಾಗೂ ಚಿಂತನಗಳು 53

**ವಾರ್ತಾಪತ್ರ** 59

## (All India Magazine) ಸಂಪಾದಕೀಯ:

ಶ್ರೀಮಾತೆಯವರು, ಯಾವಾಗಲೂ, ನಮಗೆ ಶ್ರೀ ಅರವಿಂದರ ಕರುಣೆಯನ್ನು ನೆನಪಿಗೆ ತಂದುಕೊಡುತ್ತಿದ್ದರು. ವಾಸ್ತವದಲ್ಲಿ ಅಲ್ಲಿ ಒಂದು ಮುಖವಿದೆ, ಶ್ರೀ ಅರವಿಂದರು ಮೈವೆತ್ತ ಅಸಂಖ್ಯಾತ ಗುಣಲಕ್ಷಣಗಳಲ್ಲಿ ಅದು ಒಂದು ದೈವೀ ಗುಣ ಲಕ್ಷಣ, ಈ ಒಂದು ಲಕ್ಷಣ ಅನನ್ಯವಾಗಿ ಎದ್ದು ಕಾಣುತ್ತದೆ. ಅನನ್ಯ ಏಕೆಂದರೆ ಅದು ಅವರ ಎಲ್ಲ ಬರಹಗಳು ಹಾಗೂ ಕೃತಿಗಳ ಹಿನ್ನೆಲೆಯಲ್ಲಿ ಸೌಮ್ಯವಾಗಿ ಉಳಿದುಕೊಳ್ಳುತ್ತದೆ. ಆದಾಗ್ಯೂ ಅದರಲ್ಲಿ ಅತಿ ಸ್ಪಷ್ಟವಾದದ್ದೇನೆಂದರೆ ಶ್ರೀ ಅರವಿಂದರು ಅತ್ಯಂತ ಗಾಢವಾದ ಅಂಧಕಾರದಲ್ಲಿ ಮುಳುಗುವಂತೆ ಮತ್ತು ಅಲ್ಲಿಂದ ಮನುಷ್ಯನಿಗೆ ಹಾಗೂ ಪೃಥ್ವಿಗೆ ದೈವೀ ಪ್ರಕಾಶ ಹಾಗೂ ದೈವೀ ಭರವಸೆ ತಂದುಕೊಡುವಂತೆ ಅದು ಮಾಡಿತು. ಶ್ರೀ ಅರವಿಂದರ 145ನೆಯ ಜನ್ಮದಿನಾಚರಣೆಯ ಈ ಸಂದರ್ಭದಲ್ಲಿ ಈ ಸಂಚಿಕೆಯನ್ನು ಅವರ ದೈವೀ ಕರುಣೆಯ, ಆಳಾತಿಆಳದ ತಿಳಿವಳಿಕೆ ಹಾಗೂ ಇಣುಕು ನೋಟ ಇವುಗಳಿಗಾಗಿ ಮೀಸಲಾಗಿರಿಸಲಾಗಿದೆ.

*



ಶ್ರೀ ಅರವಿಂದರು ಅವರ ದೈವೀ ಕರುಣೆಯೊಂದಿಗೆ–
ಅವರ ದೈವೀಕರುಣೆ ಅವರಿಗೆ ಸೇವೆ ಸಲ್ಲಿಸಲು ನಮಗೆ ಒಂದು
ಅವಕಾಶವನ್ನು ಒದಗಿಸುತ್ತದೆ.

**ಅನುಯಾಯಿಯೊಂದಿಗೆ ಮಾತುಕತೆ, ಎಪ್ರಿಲ್ 25, 1961** **– ಶ್ರೀಮಾತೆ**

*

# ದೈವೀ ಕರುಣೆ

## ವಿಶ್ವವ್ಯಾಪಿ ನಿಯಮ, ದೈವೀ ಕರುಣೆ ಹಾಗೂ ದೈವೀ ಕೃಪೆ

ದೈವೀ ಕೃಪೆ ಕುರಿತು ನಾನು ಸ್ವಲ್ಪ ವಿಶೇಷವಾದದ್ದನ್ನು ಹೇಳಲು ಬಯಸುತ್ತೇನೆ.– ಏಕೆಂದರೆ ಅದು ದೈವೀ ತರ್ಕದ ಹಾಗೆ ಏನೋ ಒಂದಾಗಿರಬೇಕೆಂದು ನೀನು ಯೋಚಿಸುತ್ತಿರುವ ಹಾಗಿದೆ. ಆದರೆ ಅದು ಅದಲ್ಲ. ಹಾಗೆಯೇ ಅದು ತನ್ನನ್ನು

ಸಮೀಪಿಸಿದ ಎಲ್ಲರ ಮೇಲೆ ಪಕ್ಷಪಾತವಿಲ್ಲದೆ ಕ್ರಿಯೆಕೈಕೊಳ್ಳುವ ಮತ್ತು ಅವರ ಎಲ್ಲ ಪ್ರಾರ್ಥನೆಗಳನ್ನು ಒಪ್ಪಿಕೊಳ್ಳುವ ವಿಶ್ವಂಭರ ಕರುಣೆಯ ಹಾಗೂ ಅಲ್ಲ. ಅದು ಪುಣ್ಯವಂತರನ್ನು ಆಯ್ದುಕೊಂಡು ಪಾಪಿಷ್ಠರನ್ನು ತಿರಸ್ಕರಿಸುವುದಿಲ್ಲ. ದೈವೀ ಕೃಪೆ ಪೀಡಕ (Saul of Tarsus)ನಿಗೆ, ಸ್ವೇಚ್ಛಾಚಾರಿ ಸೇಂಟ ಅಗಸ್ಟನ್‌ನಿಗೆ, ಕುಖ್ಯಾತರೆಂದು ಪ್ರಸಿದ್ಧರಾಗಿದ್ದ ಜಗಾಯಿ ಮತ್ತು ಮಧಾಯಿ ಇವರಿಗೆ, ಬಿಲ್ವಮಂಗಲನಿಗೆ ಮತ್ತು ಇತರ ಅನೇಕ ಜನರಿಗೆ ಸಹಾಯ ಮಾಡಲು ಬಂದಿತು. ಅವರನ್ನು ಪರಿವರ್ತನೆಗೆ ಒಳಪಡಿಸಿದ್ದುದು ಮಾನವ ನೈತಿಕ ಬುದ್ಧಿಮತ್ತೆಯ ಅತಿಮಡಿವಂತಿಗೆಗೆ ಕಳಂಕ ತರಬಹುದು. ಅದು ಸದ್ಗುಣದಿಂದ ಕೂಡಿದ ಜನರ ಬಳಿಗೂ ಬರಬಹುದು, ಅವರ ಸ್ವ–ಸದಾಚಾರದ ನಡತೆಗೆ ಚಿಕಿತ್ಸೆ ಒದಗಿಸಿ ಅವರನ್ನು ಇವೆಲ್ಲದರಾಚೆಗಿರುವ ಹೆಚ್ಚು ಪರಿಶುದ್ಧವಾದ ಪ್ರಜ್ಞೆಯತ್ತ ಕರೆದೊಯ್ಯಬಹುದು. ಅದು ಯಾವುದೇ ನಿಯಮಕ್ಕಿಂತ, ವಿಶ್ವವ್ಯಾಪಿ ನಿಯಮಕ್ಕಿಂತಲೂ ಕೂಡ ಪರಮೋಚ್ಚವಾದ ಸಾಮರ್ಥ್ಯ– ಏಕೆಂದರೆ ಆಧ್ಯಾತ್ಮಿಕ ಋಷಿಗಳು ದೈವೀ ನಿಯಮ ಮತ್ತು ದೈವೀ ಕೃಪೆ ಇವುಗಳ ನಡುವಿರುವ ಭೇದವನ್ನು ಗುರುತಿಸಿದ್ದಾರೆ. ಆದಾಗ್ಯೂ ಅದು ವಿವೇಚನಾರಹಿತವಾದದ್ದಲ್ಲ, ಕೇವಲ ಅದರದೇ ಭೇದಭಾವ ಗುರುತಿಸುವಿಕೆ ಇದೆ, ಅದು ವಿಷಯಗಳನ್ನು, ಜನರನ್ನು, ಅವರಿಗಾಗಿ ಸರಿಯಾದ ಸಮಯವನ್ನು, ಋತುಗಳನ್ನು ಬೇರೆ ದೃಷ್ಟಿಯಿಂದ ನೋಡುತ್ತದೆ, ಅ ದೃಷ್ಟಿ ಮನಸ್ಸಿನದಕ್ಕಿಂತ ಇಲ್ಲವೆ ಬೇರೆ ಯಾವುದೇ ಸಾಮಾನ್ಯ ಸಾಮರ್ಥ್ಯದಕ್ಕಿಂತ ಭಿನ್ನವಾಗಿರುತ್ತದೆ. ವ್ಯಕ್ತಿಯಲ್ಲಿ ದೈವೀಕೃಪೆಯ ಒಂದು ಸ್ಥಿತಿಯನ್ನು, ಬಹಳಷ್ಟು ಸಲ, ದಟ್ಟ ಪರದೆಗಳ ಹಿಂದೆ ತಯಾರು ಮಾಡಲಾಗಿರುತ್ತದೆ, ಅದಕ್ಕೆ ಬೇಕಾದ ಸಾಧನ ಕುರಿತು ಮನಸ್ಸಿನಿಂದ ಲೆಕ್ಕಾಚಾರ ಮಾಡಲಿಕ್ಕಾಗುವುದಿಲ್ಲ ಮತ್ತು ದೈವೀಕೃಪೆಯ ಸ್ಥಿತಿ ಬಂದಾಗ ಆ ಕೃಪೆಯೇ ಸ್ವತಃ ಕಾರ್ಯಕೈಕೊಳ್ಳುತ್ತದೆ. ಅಲ್ಲಿ ಈ ಮೂರು ಸಾಮರ್ಥ್ಯಗಳಿವೆ. (1) ಕರ್ಮದ ಇಲ್ಲವೆ ಬೇರೆ ಯಾವುದರದೋ ವಿಶ್ವವ್ಯಾಪಿ ನಿಯಮ. (2) ದೈವೀ ಕರುಣೆ ದೈವೀ ನಿಯಮದ ಬಲೆಗಳೊಳಗಿಂದ ತಲುಪಬಹುದಾದಷ್ಟು ಜನರ ಮೇಲೆ ಕಾರ್ಯ ಮಾಡುವುದು ಮತ್ತು ಅವರಿಗೆ ಅವರ ಅವಕಾಶವನ್ನು ಕೊಡುವುದು. (3) ದೈವೀ ಕೃಪೆ ಹೆಚ್ಚಿನ ರೀತಿಯಲ್ಲಿ ಲೆಕ್ಕಾಚಾರ ಮಾಡದೆ ಕಾರ್ಯಕೈಕೊಳ್ಳುತ್ತದೆ, ಅದರೆ ಬೇರೆಯವುಗಳಿಗಿಂತ ಪ್ರಬಲವಾಗಿ ಕಾರ್ಯಮಾಡುತ್ತದೆ. ಇರುವ ಕೇವಲ ಒಂದು ಪ್ರಶ್ನೆಯೆಂದರೆ ಜೀವನದ ಎಲ್ಲ ಅಸಂಗತಿಗಳ ಹಿಂದೆ ತೊಂದರೆಯೇನೇ ಇರಲಿ ಕರೆಗೆ

ಪ್ರತಿಸ್ಪಂದಿಸುವ ಹಾಗೂ ತೆರೆದುಕೊಳ್ಳುವ ಏನಾದರೊಂದಿದೆಯೆ, ಅದು ದೈವೀಕೃಪೆಯ ಜ್ಞಾನೋದಯ ಪಡೆಯುವವರೆಗೆ ತಯಾರಿ ಮಾಡಿಕೊಳ್ಳುತ್ತಿರಬೇಕು– ಮತ್ತು ಆ ಏನೋ ಒಂದು ಮಾನಸಿಕವಾಗಲಿ ಇಲ್ಲವೆ ಪ್ರಾಣಿಕವಾಗಲಿ ಆಗಿರಬಾರದು, ಆದರೆ ಆಂತರಿಕವಾದ ಏನೋ ಒಂದಾಗಿದ್ದು, ಅದನ್ನು ಒಳಗಣ್ಣಿನಿಂದ ಸರಿಯಾಗಿ ನೋಡುವಂತಿರಬೇಕು. ಅದು ಅಲ್ಲಿದ್ದರೆ ಮತ್ತು ಮುಂಚೂಣಿಯಲ್ಲಿ ಕ್ರಿಯಾಶೀಲವಾದರೆ, ಆಗ ದೈವೀ ಕರುಣೆ ಕಾರ್ಯ– ಕೈಕೊಳ್ಳಬಲ್ಲದು, ಆದಾಗ್ಯೂ ದೈವೀಕೃಪೆಯ ಪೂರ್ಣಕ್ರಿಯೆ ನಿರ್ಣಾಯಕ ನಿರ್ಣಯ ಇಲ್ಲವೆ ಬದಲಾವಣೆಗಳಿಗೆ ಸೇವೆ ಸಲ್ಲಿಸುತ್ತ ಕಾದುಕೊಂಡಿರಬಹುದು; ಏಕೆಂದರೆ ಇದನ್ನು ಭವಿಷ್ಯತ್ತಿನ ಒಂದು ಗಳಿಗೆಯವರೆಗೆ ಮುಂದೂಡಲಾಗಬಹುದು, ಏಕೆಂದರೆ ಸ್ವಲ್ಪ ಭಾಗ ಇಲ್ಲವೆ ಅಂಶ ಇನ್ನೂ ಅಡ್ಡಬರಬಹುದು, ಅದು ಸ್ವೀಕರಿಸಲು ಇನ್ನೂ ತಯಾರಾಗಿರದ ಏನೋ ಒಂದಾಗಿರುತ್ತದೆ.

**CWSA, 29/168–69** **– ಶ್ರೀ ಅರವಿಂದರು**

*

## ದೈವೀ ಕರುಣೆ ಹಾಗೂ ದೈವೀ ಕೃಪೆ

ಓಹ್, ಆ ಇನ್ನೊಂದು ದಿನ ನವ್ಹೆಂಬರ 24ರ ದರ್ಶನಕ್ಕಾಗಿ ಸಂದೇಶ ನೀಡಿರೆಂದು ಯಾರೋ ಒಬ್ಬರು ಒಂದು ಪ್ರಶ್ನೆ ಕೇಳಿದರು. ನಾನು ಏನೋ ಒಂದನ್ನು ಹಠಾತ್ತಾಗಿ ನೋಡಿದೆ. ಅವನು ಮಾತನಾಡುತ್ತಿರುವಾಗ ಅದು ಪರಿಪೂರ್ಣವಾಗಿ ಅದ್ಭುತವಾಗಿತ್ತು. ನಾನು ದೈವೀ ಕರುಣೆಯನ್ನು ಹಾಗೂ ದೈವೀ ಕೃಪೆಯನ್ನು ನೋಡಿದೆ, ಆ ‘ನಿಯಮ’ ಮತ್ತು ದೈವೀ ಕರುಣೆಗಳನ್ನು ನೋಡಿದೆ ಮತ್ತು ದೈವೀ ಕರುಣೆ ಪ್ರತಿಯೊಬ್ಬರ ಮೇಲೆ, ಪ್ರತಿಯೊಂದರ ಮೇಲೆ, ಭೇದಭಾವ ಮಾಡದೆ, ಷರತ್ತನ್ನಿರಿಸದೆ ಕಾರ್ಯಮಾಡುತ್ತದೆ ಎಂಬುದನ್ನು ಮತ್ತು ಅವರು ದೈವೀ ಕೃಪೆಯನ್ನು ಸ್ವೀಕರಿಸುವ ಸ್ಥಿತಿಗೆ ತರುವುದನ್ನು ದೈವೀ ಕರುಣೆ ಹೇಗೆ ಒಳಗೊಳ್ಳುತ್ತದೆ ಎಂಬುದನ್ನು ನೋಡಿದೆ.

ಅದು ಅದ್ಭುತವಾಗಿತ್ತೆಂಬುದನ್ನು ನಾನು ಕಂಡುಕೊಂಡೆ.

ಅನುಭವ ಅದಾಗಿತ್ತು: ಈ ದೈವೀಕರುಣೆ ಬಲೆಯ ಜಾಲರಿಗಳ ಮೂಲಕ ಕಾರ್ಯಕೈಕೊಳ್ಳುತ್ತಿರುವುದನ್ನು ನಾನು ನೋಡಿದೆ ಹಾಗೂ ಭಾವನೆಗೆ ತಂದುಕೊಂಡೆ

ಮತ್ತು ಹೇಗೆ ದೈವೀಕೃಪೆ ಸರ್ವಸಮರ್ಥವಾಗಿದೆ, ಅದರರ್ಥ 'ದೈವೀ ನಿಯಮ' ಇನ್ನು ಮುಂದೆ ಅಡೆತಡೆ ಒಡ್ಡುವುದಿಲ್ಲ ಎಂಬುದನ್ನು ತಿಳಿದುಕೊಂಡೆ. ಈ ದೈವೀ ಕರುಣೆ ಪ್ರತಿಯೊಬ್ಬನನ್ನು ಸ್ಪರ್ಶಿಸುವುದನ್ನು ಮತ್ತು ಪ್ರತಿಯೊಬ್ಬನಿಗೆ ಅವನ ಅವಕಾಶವನ್ನು ಕೊಡುತ್ತಿರುವುದನ್ನು ನೋಡಿದೆ; ಅವರು 'ಪ್ರತಿಯೊಬ್ಬನಿಗೆ ಅವನ ಅವಕಾಶವನ್ನು ಕೊಡುತ್ತದೆ' ಎಂದು ಹೇಳಿದಾಗ ಅದರ ಅರ್ಥ ನಿಜವಾಗಿ ಏನಿದೆ ಎಂಬುದನ್ನು ತಿಳಿದುಕೊಂಡೆ. ಅದೇ ಅವಕಾಶವನ್ನು ಸಮನಾಗಿ, ಮಹತ್ವ ಇಲ್ಲವೆ ಷರತ್ತು ಇಲ್ಲವೆ ಸ್ಥಿತಿಯನ್ನು ಕುರಿತು ಅಲ್ಪಮಾತ್ರಕ್ಕೂ ಭೇದಭಾವ ಮಾಡದೆ ನಿಖರವಾಗಿ ಎಲ್ಲರಿಗೂ ಕೊಡುತ್ತದೆ. ಹಾಗಾಗಿ ಈ ದೈವೀ ಕರುಣೆಯ ಪರಿಣಾಮ ದೈವೀ ಕೃಪೆಯ ಅಸ್ತಿತ್ವ ಕುರಿತು ಅವರು ಎಚ್ಚರಗೊಳ್ಳುವಂತೆ ಮಾಡುವುದಾಗಿತ್ತು ಮತ್ತು ವಿಶ್ವದಲ್ಲಿ ದೈವೀ ಕೃಪೆಯ ಹಾಗಿರುವ ಏನೋ ಒಂದಿದೆ ಎಂಬ ಭಾವನೆ ತಂದುಕೊಳ್ಳುವಂತೆ ಮಾಡುವುದಾಗಿತ್ತು. ಅಭೀಪ್ಸೆಪಡುವವರಿಗೆ, ವಿಶ್ವಾಸವಿದ್ದವರಿಗೆ ದೈವೀ ಕೃಪೆ ಕೂಡಲೆ ಕಾರ್ಯಮಾಡುತ್ತದೆ– ಅದು ಯಾವಾಗಲೂ ಕಾರ್ಯ ಮಾಡುತ್ತದೆ, ಆದರೆ ವಿಶ್ವಾಸವಿದ್ದವರಿಗೆ ಅದು ಪೂರ್ತಿಯಾಗಿ ಪರಿಣಾಮಕಾರಿ–ಯಾಗುತ್ತದೆ.

ಇದೆಲ್ಲವೂ ಎಷ್ಟೊಂದು ಸ್ಪಷ್ಟವಾಗಿತ್ತು! ಅದು ನಿಜವಾಗಿ ಒಂದು ಹೊಸ ಅನುಭವದ ಹಾಗಿತ್ತು, ಜ್ಞಾನಪ್ರಕಾಶನದ ಹಾಗಿತ್ತು. ಶ್ರೀ ಅರವಿಂದರು ಈ ದೈವೀ ಕರುಣೆಯ ಅಭಿವ್ಯಕ್ತಿಯಾಗಿದ್ದರು. ... ಅದನ್ನು ಅವರ ಕಣ್ಣುಗಳಲ್ಲಿ ನೋಡಬಹು–ದಾಗಿತ್ತು, ಸಹಜವಾಗಿ ಅವರ ಕಣ್ಣುಗಳು ದೈವೀ ಕರುಣೆಯಿಂದ ತುಂಬಿ–ಕೊಂಡಿದ್ದವು.

ಅವರು ಒಂದೆಡೆ ಬರೆದದ್ದು ಹೀಗಿದೆ: "ದೈವೀ ಕೃಪೆ ಯಾರಿಂದಾದರೂ ಹೊರಳಿಕೊಳ್ಳುವುದು ಅಪರೂಪಕ್ಕೆ ಕಂಡುಬರುತ್ತದೆ, ಬಹಳಷ್ಟು ಜನರು ದೈವೀ ಕೃಪೆಯಿಂದ ಹೊರಳಿಕೊಳ್ಳುತ್ತಾರೆ– ಪುರುಷರು ದೈವೀ ಕೃಪೆಯಿಂದ ಹೊರಳಿಕೊಳ್ಳು–ತ್ತಾರೆ." ನಿಖರವಾದ ಶಬ್ದಗಳು ನನ್ನ ನೆನಪಿಗೆ ಬರುತ್ತಿಲ್ಲ, ಆದರೆ ಅವರು ವಿಕೃತ ಶಬ್ದವನ್ನು ಉಪಯೋಗಿಸಿದ್ದರೆಂದು ನನಗನಿಸುತ್ತದೆ. ಅದು ಎಷ್ಟೊಂದು ಜೀವಂತ–ವಾಗಿತ್ತು: ತನ್ನ ಕ್ರಿಯೆಯನ್ನು ದೈವೀ ಕೃಪೆ ಹಿಂತೆಗೆದುಕೊಳ್ಳುತ್ತಿರಲಿಲ್ಲ, ಎಳ್ಳಷ್ಟೂ ಇಲ್ಲ (ದೈವೀ ಕೃಪೆ ತನ್ನ ಕಾರ್ಯಮಾಡುತ್ತ ಸಾಗಿತು), ಆದರೆ ಪುರುಷರು, ಹೌದು, ವಿಕೃತರಾಗಿದ್ದರು, ತಿರುಚಿಕೊಂಡಿದ್ದರು.

ಒಮ್ಮೆ ಮತ್ತು ಎಲ್ಲ ಕಾಲಕ್ಕೆ ಮನುಷ್ಯ ವಕ್ರಗೊಂಡಿರುತ್ತಾನೆ ಎಂದಲ್ಲ, ಅದಲ್ಲ. ಜನರ ಶಕ್ತಿ ಮತ್ತು ಕ್ರಿಯೆ ಸರಳವಾಗಿ, ನೇರವಾಗಿ ಹೋಗುವುದರ ಬದಲಾಗಿ ಅದನ್ನು ಅದರ ಮೇಲೆ ಹೊರಳಿಸಲಾಗಿರುತ್ತದೆ ಮತ್ತು ಎಲ್ಲ ಬಗೆಯ ಸುತ್ತು ಹೊಡೆಯುವಿಕೆಗಳಿರುತ್ತವೆ, ಜಟಿಲತೆಗಳಿರುತ್ತವೆ, ಅವು ಕಂಪನಗಳನ್ನು ವಿಕೃತ–ಗೊಳಿಸುತ್ತವೆ, ಅವರದೇ ರೀತಿಯಲ್ಲಿ ಇದ್ದುಕೊಂಡಿರುವುದು ವಿಕೃತಗೊಳಿಸುತ್ತದೆ (ವಿಕೃತ ಶಬ್ದ ನನ್ನೆಡೆಗೆ ಬರುತ್ತಲೇ ಇದೆ). ಅದು ಸರಳವಾಗಿರುವುದರ ಬದಲಾಗಿ ತಿರುಚಿಕೊಂಡಿರುತ್ತದೆ. ಹಾಗಾಗಿ ಇನ್ನು ಮುಂದೆ ದೈವೀ ಕೃಪೆಯ ಯಾವ ಪರಿಣಾಮವೂ ಇರುವುದಿಲ್ಲ. ಅದು ಯಾವ ಪರಿಣಾಮವನ್ನೂ ಬೀರಲಾರದು.

**ಅನುಯಾಯಿಯೊಡನೆ ಮಾತುಕತೆ, ಡಿಸೆಂಬರ 7, 1966** **– ಶ್ರೀಮಾತೆ**

*

## ಆಧ್ಯಾತ್ಮಿಕ ಬಲ, ನಿಷ್ಕಾಪಟ್ಯ ಮತ್ತು ದೈವೀ ಕೃಪೆ

ನಾನು ಬಲ ಹಾಗೂ ದೈವೀ ಕೃಪೆ ಕುರಿತು ಹೇಳುವುದರಲ್ಲಿ ಬುದ್ಧಿಗೆ ಹೊಳೆಯದಂತಹದೇನೂ ಇಲ್ಲ. ಆಧ್ಯಾತ್ಮಿಕ ಸಿದ್ಧಿಗಾಗಿ ಬಲಕ್ಕೆ ಒಂದು ಮೌಲ್ಯವಿದೆ, ಆದರೆ ಆ ಸಿದ್ಧಿಯನ್ನು ಕೇವಲ ಬಲದಿಂದ, ಬೇರೆ ಯಾವ ಸಾಧನವೂ ಇಲ್ಲದೆ ಕೈಕೊಳ್ಳಬಹುದು ಎಂದು ಹೇಳುವುದು ಪ್ರಚಂಡ ಉತ್ಪ್ರೇಕ್ಷೆಯಾಗುತ್ತದೆ. ದೈವೀ ಕೃಪೆ ಒಂದು ಅನ್ವೇಷಣೆಯಲ್ಲ, ಅದು ಆಧ್ಯಾತ್ಮಿಕ ಅನುಭವದ ಒಂದು ವಾಸ್ತವ ಸಂಗತಿ. ಜಾಣರೂ, ಬಲಿಷ್ಠರೂ ಆದ ಜನರಿಂದ ಏನೂ ಇಲ್ಲದವರು ಎಂಬ ಪರಿಗಣನೆಗೊಳಗಾದ ಜನರು ದೈವೀ ಕೃಪೆಯಿಂದ ಸಿದ್ಧಿಸಿಕೊಂಡಿದ್ದಾರೆ; ಅಶಿಕ್ಷಿತರು, ಮಾನಸಿಕ ಸಾಮರ್ಥ್ಯವಿಲ್ಲದವರು ಇಲ್ಲವೆ ಯಾವುದೇ ತರಬೇತು ಪಡೆಯದವರು, ಚಾರಿತ್ರ್ಯದ ಇಲ್ಲವೆ ಸಂಕಲ್ಪದ ಬಲವಿಲ್ಲದವರು ಆಗಿದ್ದಾಗ್ಯೂ ಅಭೀಪ್ಸೆಪಟ್ಟಿದ್ದಾರೆ ಮತ್ತು ಹಠಾತ್ತನೆ ಇಲ್ಲವೆ ತೀವ್ರ ಗತಿಯಿಂದ ಆಧ್ಯಾತ್ಮಿಕ ಸಿದ್ಧಿಯಲ್ಲಿ ಬೆಳೆದಿದ್ದಾರೆ, ಏಕೆಂದರೆ ಅವರಲ್ಲಿ ನಂಬಿಕೆಯಿತ್ತು ಇಲ್ಲವೆ ಏಕೆಂದರೆ ಅವರು ನಿಷ್ಕಪಟರಾಗಿದ್ದರು. ಆಧ್ಯಾತ್ಮಿಕ ಇತಿಹಾಸದಲ್ಲಿರುವ ಹಾಗೂ ಬಹಳ ಸರ್ವಸಾಧಾರಣ ಆಧ್ಯಾತ್ಮಿಕ ಅನುಭವವಿರುವ ಈ ವಾಸ್ತವ ಸಂಗತಿಗಳನ್ನು ಕುರಿತು ಚರ್ಚೆ ಮಾಡುವುದೇಕೆ, ನಿರಾಕರಿಸುವುದೇಕೆ ಮತ್ತು ಕೇವಲ ಊಹಾತ್ಮಕ ವಿಷಯಗಳಾಗಿವೆಯೆಂದು ವಾದ ಮಾಡುವುದೇಕೆ ಎಂಬುದು ನನಗೆ ತಿಳಿದು ಬರುತ್ತಿಲ್ಲ. ಬಲ ಅದು ಆಧ್ಯಾತ್ಮಿಕವಾಗಿದ್ದರೆ

ಆಧ್ಯಾತ್ಮಿಕ ಸಿದ್ಧಿಗಾಗಿ ಒಂದು ಸಾಮರ್ಥ್ಯವಾಗಿರುತ್ತದೆ, ನಿಷ್ಕಾಪಟ್ಯ ಶ್ರೇಷ್ಠತರ ಸಾಮರ್ಥ್ಯವಾಗಿರುತ್ತದೆ, ಎಲ್ಲದಕ್ಕಿಂತಲೂ ಅತ್ಯಂತ ಶ್ರೇಷ್ಠವಾದದ್ದು ದೈವೀ ಕೃಪೆ. ಗೀತೆಯಲ್ಲಿರುವ "ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ" ಸಾಲನ್ನು ಹಲವಾರು ಸಲ ಉಲ್ಲೇಖಿಸಿದ್ದೇನೆ. "ನಾನು ನಿನ್ನನ್ನು ಎಲ್ಲ ಪಾಪದಿಂದ ಮತ್ತು ಅನಿಷ್ಟದಿಂದ ಮುಕ್ತಗೊಳಿಸುತ್ತೇನೆ, ಶೋಕಿಸದಿರು."

**CWSA, 29/172** – ಶ್ರೀ ಅರವಿಂದರು

*

**ಆಂತರಿಕ ದೇವ ಪ್ರಮುಖಳು ತೀರ್ಮಾನ ಮಾಡುವುದಿಲ್ಲ ಇಲ್ಲವೆ ನಿಂದಿಸುವುದಿಲ್ಲ**

ನಮ್ಮ ಪ್ರಚೋದನೆಗಳು, ಆಸೆಗಳು, ತಳಮಳ ಮತ್ತು ಹಿಂಸೆ, ನಮ್ಮ ವೇದನೆಗಳು ಹಾಗೂ ಹೋರಾಟಗಳು ಇವೆಲ್ಲ ಆಂತರಿಕ ವ್ಯತ್ಯಾಸಗಳನ್ನು ನಮ್ಮ ನಿಯಂತ್ರಣದಲ್ಲಿಡಲಾಗದ ಕಲ್ಪನೆಯ ಮೂಲಕ ಅನುಚಿತವಾಗಿ ನಾಟಕೀಕರಣ–ಗೊಳಿಸುವುದಕ್ಕೆ ಯಾವ ಮೌಲ್ಯವಿದೆ– ಇವುಗಳಿಗೆ, ನಮ್ಮ ಸತ್ತೆಯ ಅತ್ಯಂತ ಆಂತರಿಕ ಆಳಗಳಿಂದ ನಮ್ಮ ಮೇಲೆ ಬಾಗುವ, ನಮ್ಮ ದೌರ್ಬಲ್ಯಗಳನ್ನು ಸಹಿಸಿಕೊಳ್ಳುವ, ನಮ್ಮ ದೋಷಗಳನ್ನು ಸರಿಪಡಿಸುವ, ನಮ್ಮ ಗಾಯಗಳನ್ನು ವಾಸಿಮಾಡುವ ಮತ್ತು ಅದರ ಪುನರುಜ್ಜೀವನಗೊಳಿಸುವ ಪ್ರವಾಹಗಳಿಂದ ನಮ್ಮ ಇಡೀ ಸತ್ತೆಯನ್ನು ಸ್ನಾನ ಮಾಡಿಸುವ ಈ ಶ್ರೇಷ್ಠ, ಘನತೆವೆತ್ತ, ದೈವೀ ಪ್ರೇಮದ ಎದುರಿಗೆ ಯಾವ ಮೌಲ್ಯವಿದೆ? ಏಕೆಂದರೆ ಆಂತರಿಕ ದೇವಪ್ರಮುಖಳು ತನ್ನನ್ನು ಹೇರುವುದಿಲ್ಲ, ಒತ್ತಾಯದಿಂದ ಬೇಡುವುದಿಲ್ಲ ಇಲ್ಲವೆ ಬೆದರಿಸುವುದಿಲ್ಲ, ಅವಳು ಅರ್ಪಿಸುತ್ತಾಳೆ, ತನ್ನನ್ನು ಕೊಟ್ಟುಕೊಳ್ಳುತ್ತಾಳೆ ಮರೆಯಲ್ಲಿರಿಸುತ್ತಾಳೆ ಮತ್ತು ಎಲ್ಲ ಸತ್ತೆಗಳ ಹಾಗೂ ವಸ್ತು–ವಿಷಯಗಳ ಹೃದಯದಲ್ಲಿ ತನ್ನನ್ನು ಮರೆಯುತ್ತಾಳೆ; ಅವಳು ಎಂದಿಗೂ ದೂಷಿಸುವುದಿಲ್ಲ, ಅವಳು ತೀರ್ಮಾನಕ್ಕೊಳಪಡಿಸುವುದಿಲ್ಲ, ಶಾಪ ಕೊಡುವುದಿಲ್ಲ, ನಿಂದಿಸುವುದಿಲ್ಲ, ಆದರೆ ಬಿಟ್ಟೂಬಿಡದೆ ಒತ್ತಾಯ ತರದೆ ಪರಿಪೂರ್ಣಗೊಳಿಸುವುದಕ್ಕಾಗಿ, ನಿಂದಿಸದೆ ಸರಿಪಡಿಸುವುದಕ್ಕಾಗಿ, ತಾಳ್ಮೆಕಳೆದು–ಕೊಳ್ಳದೆ ಪ್ರೋತ್ಸಾಹಿಸುವುದಕ್ಕಾಗಿ, ಪ್ರತಿಯೊಬ್ಬನನ್ನು ಅವನು ಸ್ವೀಕರಿಸಬಲ್ಲಷ್ಟು ಶ್ರೀಮಂತಗೊಳಿಸುವುದಕ್ಕಾಗಿ ಕಾರ್ಯಮಾಡುತ್ತಾಳೆ; ಮಾತೆಯಾಗಿರುವ ಅವಳ ಪ್ರೇಮ ಫಲ ನೀಡುತ್ತದೆ ಮತ್ತು ಪೋಷಿಸುತ್ತದೆ, ಕಾಪಿಡುತ್ತದೆ, ರಕ್ಷಿಸುತ್ತದೆ,

ಸಲಹೆ ನೀಡುತ್ತದೆ ಮತ್ತು ಸಮಾಧಾನಪಡಿಸುತ್ತದೆ; ಅವಳು ಪ್ರತಿಯೊಂದನ್ನು ಅರ್ಥಮಾಡಿಕೊಳ್ಳುತ್ತಾಳೆ ಎಂಬ ಕಾರಣದಿಂದಾಗಿ ಅವಳು ಪ್ರತಿಯೊಂದನ್ನು ಸಹಿಸಿಕೊಳ್ಳಬಲ್ಲಳು, ಪ್ರತಿಯೊಂದನ್ನು ಕ್ಷಮಿಸಬಲ್ಲಳು, ಪ್ರತಿಯೊಂದಕ್ಕಾಗಿ ಭರವಸೆ ತಾಳಬಲ್ಲಳು ಮತ್ತು ತಯಾರು ಮಾಡಬಲ್ಲಳು; ತನ್ನಲ್ಲಿಯೇ ಎಲ್ಲವನ್ನು ಹೊತ್ತುಕೊಂಡಿರುವ ಅವಳು ಎಲ್ಲರಿಗೂ ಸೇರಿರದೆ ಇದ್ದ ಯಾವುದನ್ನೂ ತನ್ನ ಒಡೆತನದಲ್ಲಿ ಇಟ್ಟುಕೊಂಡಿರುವುದಿಲ್ಲ ಮತ್ತು ಅವಳು ಎಲ್ಲರ ಮೇಲೆ ಆಳಿಕೆ ನಡೆಸುತ್ತಿರುವುದರಿಂದ, ಎಲ್ಲರ ಸೇವಕಿಯೂ ಆಗಿರುವಳು; ಆ ಕಾರಣದಿಂದಾಗಿ ಅವಳೊಡನೆ ರಾಜರಾಗಬೇಕೆನ್ನುವ, ಅವಳಲ್ಲಿ ದೇವರುಗಳಾಗಬೇಕೆನ್ನುವ ದೊಡ್ಡವರು ಹಾಗೂ ಚಿಕ್ಕವರು ಅವಳ ನಿರಂಕುಶ ಪ್ರಭುಗಳಾಗುವುದಿಲ್ಲ ಆದರೆ ಸಹೋದರರ ನಡುವೆ ಸೇವೆ ಸಲ್ಲಿಸುವವರಾಗುತ್ತಾರೆ.

**CWM, 2/42–43** **– ಶ್ರೀಮಾತೆ**

*

**ಪಾಪಿಯತ್ತ ಬರುತ್ತಿರುವ ದೈವೀ ಕೃಪೆ**

**ಪ್ರಶ್ನೆ:** *ಪಾಪಿಗೆ ಸಹಾಯ ಮಾಡುವುದಕ್ಕೆ ದೈವೀ ಕೃಪೆ ಹೇಗೆ ಬರಬಲ್ಲದು?*

**ಶ್ರೀಮಾತೆ:** ಪಾಪಿಗೆ ಪಾಪಿಯಾಗಲು ಅದು ಸಹಾಯ ಮಾಡುವುದಿಲ್ಲ! ಪಾಪಿ ತನ್ನ ಪಾಪವನ್ನು ಬಿಟ್ಟುಕೊಡಲು ಅದು ಸಹಾಯ ಮಾಡುತ್ತದೆ, ಎಂದರೆ ಅವನಿಗೆ "ನಿನಗಾಗಿ ನಾನೇನನ್ನೂ ಕೈಕೊಳ್ಳಲಾರೆ" ಎಂದು ಹೇಳುತ್ತ ಅದು ಪಾಪಿಯನ್ನು ದೂರದೂಡಿಬಿಡುವುದಿಲ್ಲ, ಅದು ಅವನು ಪಾಪ ಮಾಡುತ್ತಿರುವಾಗಲೂ ಕೂಡ, ಅವನು ಅದರಿಂದ ಹೊರಬರಲು ಸಹಾಯ ಮಾಡುವುದಕ್ಕಾಗಿ, ಯಾವಾಗಲೂ, ಅಲ್ಲಿರುತ್ತದೆ; ಆದರೆ ಪಾಪ ಮಾಡುವುದನ್ನು ಮುಂದುವರಿಸಿಕೊಂಡು ಹೋಗುವುದಕ್ಕಾಗಿ ಅಲ್ಲ.

ಈ ವಿಚಾರ ಮತ್ತು ನೀನು ಕೆಟ್ಟವನಾಗಿರುವಿ ಮತ್ತು ಹಾಗಾಗಿ "ನಾನು ನಿನ್ನ ರಕ್ಷಣೆ ಮಾಡುವುದಿಲ್ಲ, ನಿನ್ನನ್ನು ನನ್ನಿಂದ ದೂರ ಚೆಲ್ಲಿಕೊಡುತ್ತೇನೆ ಮತ್ತು ಏನು ಸಂಭವಿಸಲಿದೆಯೋ ಅದು ಸಂಭವಿಸುತ್ತದೆ, ನನಗೆ ಅದರ ಸಂಬಂಧವಿಲ್ಲ" ಎಂದು ಹೇಳುವ ವಿಚಾರ ಇವುಗಳ ನಡುವೆ ಬಹಳ ದೊಡ್ಡ ವ್ಯತ್ಯಾಸವಿದೆ. ಇದು

ಸಾಮಾನ್ಯ ರೀತಿಯ ವಿಚಾರ. ಮನುಷ್ಯ “ದೇವ ನನ್ನನ್ನು ತಿರಸ್ಕರಿಸಿದ್ದಾನೆ” ಎಂದು ಹೇಳುತ್ತಾನೆ, ಇದು ನಿಮಗೆ ತಿಳಿದಿದೆ. ಅದು ಅದಲ್ಲ. ನಿಮಗೆ ದೈವೀ ಕೃಪೆಯಿರುವ ಅನುಭವವಾಗದೆ ಇರಬಹುದು, ಆದರೆ ಅದು ಅಲ್ಲಿ ಯಾವಾಗಲೂ ಇರುತ್ತದೆ, ಅತ್ಯಂತ ಕೆಟ್ಟ ಪಾಪಿಗಳೊಂದಿಗೆ, ಅತ್ಯಂತ ಕೆಟ್ಟ ಅಪರಾಧಿಗಳೊಂದಿಗೆ ಇದ್ದು ಬದಲಾಗಲು ಸಹಾಯ ಮಾಡುತ್ತದೆ, ಅವನು ಬಯಸಿದರೆ ಅವನ ಅಪರಾಧದಿಂದ ಹಾಗೂ ಪಾಪದಿಂದ ಚಿಕಿತ್ಸೆ ಪಡೆಯಲು ಅದು ಸಹಾಯ ಮಾಡುತ್ತದೆ. ಅದು ಅವನನ್ನು ತಿರಸ್ಕರಿಸುವುದಿಲ್ಲ. ಆದರೆ ಅದು ಅನಿಷ್ಟವಾದದ್ದನ್ನು ಕೈಕೊಳ್ಳಲು ಸಹಾಯ ಮಾಡುವುದಿಲ್ಲ. ಹಾಗೇನಾದರೂ ಅದು ಮಾಡಿದರೆ ಆಗ ಅದು ದೈವೀ ಕೃಪೆಯಾಗಿರುವುದಿಲ್ಲ.

**CWM, 6/216–17** **– ಶ್ರೀಮಾತೆ**

*

**ತನ್ನನ್ನು ಸಮರ್ಥಿಸಿಕೊಳ್ಳದೆ ಇರುವ ಅನಂತ ದೈವೀ ಕರುಣೆ**

ತಮ್ಮಲ್ಲಿ ನಂಬಿಕೆ ಇದೆ ಎಂದು ಯೋಚಿಸುವವರೂ ಕೂಡ ಪ್ರತಿಯೊಂದನ್ನು ತಮಗಾಗಿ ಮಾಡುವಂತಾಗಲಿ ಎಂದು ಬಯಸುತ್ತಾರೆ, ತಮ್ಮಲ್ಲಿ ಅಪನಂಬಿಕೆ, ಹೆಡ್ಡತನ, ಕ್ಷಮತೆ ಇಲ್ಲದಿರುವಿಕೆ ಇವೆಲ್ಲ ಇದ್ದಾಗ್ಯೂ ಪರಮೋಚ್ಚವಾದುದು ತಮಗಾಗಿ ಎಲ್ಲವನ್ನೂ ಮಾಡಲಿ ಎಂದು ಬಯಸುತ್ತಾರೆ. ಅದನ್ನು ಅವರು ಸರ್ವಸಾಮರ್ಥ್ಯ ಎಂದು ಕರೆಯುತ್ತಾರೆ. ಈ ದೈವೀ ಸತ್ಯದ ಕಂಪನ ತನ್ನನ್ನು ಹೇರಿದರೆ ಆಗ ಎಲ್ಲವೂ ನಾಶವಾಗಿಬಿಡುವುದು ಎಂಬುದನ್ನು ಕೂಡ ಅವರು ತಿಳಿದುಕೊಂಡಿರುವುದಿಲ್ಲ, ಅದೆಲ್ಲದರ ನಾಶ ಅಲ್ಲಿರುತ್ತದೆ, ಅದರರ್ಥ ಅದು ಅವರದೇ ನಾಶವಾಗುವುದಾಗಿರುತ್ತದೆ. ತಾವು ಎಂದು ಕರೆದುಕೊಳ್ಳುತ್ತಿರುವುದರ ನಾಶ ಅದಾಗಿರುತ್ತದೆ.

ಈ ಅನಂತ ದೈವೀ ಕರುಣೆ ಅದ್ಭುತವಾಗಿರುತ್ತದೆ, ಅದು ಏನನ್ನೂ ಹಾಳು ಮಾಡುವುದಿಲ್ಲ, ಅದಕ್ಕೆ ಧನ್ಯವಾದಗಳು. ಅದು ಅಲ್ಲಿದೆ, ತನ್ನ ಪೂರ್ತಿ ಸಾಮರ್ಥ್ಯದಿಂದ ಹಾಗೂ ಪೂರ್ತಿ ಶಕ್ತಿಯಿಂದ ಕಾದುಕೊಂಡಿದೆ, ಅದು ಸರಳವಾಗಿ ತನ್ನ ಸಾನ್ನಿಧ್ಯವನ್ನು ದೃಢೀಕರಿಸುತ್ತದೆ, ಅದನ್ನು ಹೇರುವುದಿಲ್ಲ, ಅದರಿಂದಾಗಿ ಹಾಳಾಗುವುದನ್ನು ಕನಿಷ್ಠ ಮಟ್ಟಕ್ಕೆ ಇಳಿಸುವಂತಾಗುತ್ತದೆ.

ಅದು ಅತ್ಯಂತ ಅದ್ಭುತವಾದ ದೈವೀ ಕರುಣೆ!
ಆ ಎಲ್ಲ ಮೂರ್ಖರು ಅದನ್ನು ದುರ್ಬಲತೆ ಎಂದು ಕರೆಯುತ್ತಾರೆ.

**ಅನುಯಾಯಿಯೊಡನೆ ಮಾತುಕತೆ, ಸಪ್ಟಂಬರ 17, 1966** **– ಶ್ರೀಮಾತೆ**

*

## ಜಗತ್ತಿನಲ್ಲಿ ದೈವೀ ಕರುಣೆ ಹಾಗೂ ದೈವೀ ವೇದನೆ

ಆಳವಾದ ಕರುಣೆಯ ಸ್ಥಿತಿಯಿಂದ ಭಗವಂತ ಭೌತದ್ರವ್ಯದಲ್ಲಿ ಕಾರ್ಯ–ಕೈಕೊಳ್ಳುತ್ತಾನೆ ಮತ್ತು ಈ ಆಳವಾದ ಕರುಣೆ ಭೌತದ್ರವ್ಯದಲ್ಲಿ, ನಿಖರವಾಗಿ, ಚೈತ್ಯಾತ್ಮಿಕ ವೇದನೆಯಾಗಿ ಪರಿವರ್ತನೆಗೊಳ್ಳುತ್ತದೆ, ಅದನ್ನು ಕುರಿತು ಇಲ್ಲಿ ಹೇಳಲಾಗಿದೆ.[1] ಅದನ್ನು ಈ ದಿನ ಸಾಯಂಕಾಲ ಓದಿದೆವು. ಅದು ಏನೋ ಒಂದು ಹಿಮ್ಮೊಗವಾದ ರೀತಿಯಲ್ಲಿದೆ, ಅದು ಅದೇ ವಿಷಯವಾಗಿತ್ತು, ಆದರೆ ಈ ರೀತಿಯಲ್ಲಿ ಹಿಮ್ಮೊಗವಾಗಿದೆ (ಶ್ರೀಮಾತೆಯವರು ಕೈಗಳನ್ನು ಜೋಡಿಸುತ್ತಾರೆ, ನಂತರ ಅರ್ಪಣೆ ಮಾಡುವ ರೀತಿಯಲ್ಲಿ ಕೈಗಳನ್ನು ತೆರೆದು ತೋರಿಸುತ್ತಾರೆ.) ಸರಿ, ಭಗವಂತನ ಕರುಣೆಯ ಸ್ಥಿತಿ ಚೈತ್ಯಾತ್ಮಿಕ ಪ್ರಜ್ಞೆಯಾಗಿ ಪರಿವರ್ತನೆ–ಗೊಂಡಿದೆ, ಹಾಗಾದುದು ಅಹಂಕಾರವಿಲ್ಲದ ಒಂದು ವೇದನೆಯಿಂದ ಹಾಗೂ ವಿಶ್ವಂಭರ ವೇದನೆಯೊಂದಿಗೆ ಸಹಾನುಭೂತಿಯೊಂದಿಗೆ ಗುರುತಿಸಿಕೊಳ್ಳುವುದರ ಮೂಲಕ ಅಭಿವ್ಯಕ್ತಗೊಂಡಿದುದರಿಂದಾಗಿ. 'ಪ್ರಾರ್ಥನೆಗಳು ಹಾಗೂ ಚಿಂತನಗಳು'[2] ಪುಸ್ತಕವೊಂದರಲ್ಲಿ ನಾನಿದನ್ನು ಹೇಳಿದ್ದೇನೆ (ಕೊನೆಗೆ ಪ್ರಕಟವಾದವುಗಳಲ್ಲಿಯ ಒಂದರಲ್ಲಿ), ನಾನು ಒಂದು ಅನುಭವವನ್ನು ದೀರ್ಘವಾಗಿ ವರ್ಣಿಸಿ ಹೇಳಿದ್ದೇನೆ, ಅದರಲ್ಲಿ ಹೇಳಿದ್ದು ಹೀಗಿದೆ: "ನನ್ನ ಜೀವನದ ಅತ್ಯಂತ ಮಧುರ

---

1. **ಪ್ರಶ್ನೆ:** *ಈ ದಿನಗಳಲ್ಲಿ ನಾನು ಬಹಳ ಗಾಢವಾಗಿ ವೇದನೆಯೊಂದನ್ನು ತಂದುಕೊಳ್ಳುತ್ತಿದ್ದೇನೆ, ಅದು ನನ್ನ ಕಣ್ಣುಗಳಲ್ಲಿ ನೀರಿನ ಪ್ರವಾಹವನ್ನು ತರುತ್ತದೆ. ಅದರಲ್ಲಿ ತಳಮಳವಿಲ್ಲ ಇಲ್ಲವೆ ಕ್ಷೋಭೆಯಿಲ್ಲ, ಅದಕ್ಕೂ ಹೆಚ್ಚಾಗಿ ಅಲ್ಲಿ ಸ್ಥಿರತೆ ಹಾಗೂ ಪರಿಶುದ್ಧತೆ ಮತ್ತು ಅವುಗಳಿಗೆ ಸಂಬಂಧಿಸಿದ ಗುರುತ್ವಾಕರ್ಷಣೆ ಇವೆಲ್ಲ ಇವೆ. ಇದನ್ನೇ ಚೈತ್ಯಾತ್ಮಿಕ ವೇದನೆಯೆಂದು ಕರೆಯಲಾಗಿದೆಯೆ?*

**ಶ್ರೀಮಾತೆ:** ಹೌದು, ವೇದನೆಯೆಂದು ಚೈತ್ಯಾತ್ಮಿಕ ವೇದನೆಯಿದೆ, ಆದರೆ ಚೈತ್ಯಾತ್ಮಿಕ ಕಣ್ಣೀರುಗಳು ವೇದನೆಯಿಂದ ಕೂಡಿರಬೇಕಾಗಿಲ್ಲ. ಸಂತೋಷದ ಹಾಗೂ ಭಾವನಾತ್ಮಕ ಕಣ್ಣೀರುಗಳೂ ಇವೆ.

2. ಪ್ರಾರ್ಥನೆಗಳು ಹಾಗೂ ಚಿಂತನಗಳು, ಮೇ 12, 1918

ಕಣ್ಣೀರುಗಳೊಂದಿಗೆ ನಾನು ರೋದಿಸಿದೆ", ಏಕೆಂದರೆ ನನ್ನನ್ನು ಕುರಿತಾಗಿಯೇ ನಾನು ರೋದಿಸಿರಲಿಲ್ಲ, ತಿಳಿಯಿತೆ? ಸರಿ, ಅದೇ ಅದು. ಉದಾಹರಣೆಗೆ (ನಾನಿದನ್ನು ಬಹಳಷ್ಟು ಸಲ ವಿವರಿಸಿ ಹೇಳಿದ್ದೇನೆ) ಅವರು ಪ್ರೀತಿಸಿದ್ದ ಯಾರನ್ನಾದರೂ ಕಳೆದುಕೊಂಡು ವೇದನೆಗೊಳಗಾದರೆ ಹಾಗೂ ರೋದಿಸಿದರೆ ಕಳೆದು ಹೋದ ವ್ಯಕ್ತಿಯ ಸ್ಥಿತಿಯನ್ನು ಕುರಿತು ರೋದಿಸುವುದಾಗಿರುವುದಿಲ್ಲ ಏಕೆಂದರೆ ಬಹಳಷ್ಟು ಸಲ, ನೂರರಲ್ಲಿ ತೊಂಬತ್ತೊಂಬತ್ತು ಸಲ ಆ ವ್ಯಕ್ತಿಯ ಸ್ಥಿತಿಯನ್ನು ಅರಿತುಕೊಂಡಿರುವುದಿಲ್ಲ, ಆ ವ್ಯಕ್ತಿ ಸಂತೋಷದಿಂದಿದ್ದಾನೋ, ದುಃಖದಲ್ಲಿದ್ದಾನೋ, ವೇದನೆಯನ್ನು ಅನುಭವಿಸುತ್ತಿದ್ದಾನೆಯೋ, ಶಾಂತಿಯಿಂದ ಇರುವನೋ ಎಂಬುದನ್ನು ಅವರು ಎಂದಿಗೂ ತಿಳಿದುಕೊಳ್ಳಲಾರರು. ಆದರೆ ಅವರು ಆ ವ್ಯಕ್ತಿಯಿಂದ ಪ್ರತ್ಯೇಕಗೊಂಡಿರುವಿಕೆಯ ಭಾವನೆಯ ಕಾರಣದಿಂದಾಗಿ ರೋದಿಸುತ್ತಾರೆ, ಆ ವ್ಯಕ್ತಿ ತಮ್ಮ ಬಳಿ ಇರುವುದನ್ನು ಪ್ರೀತಿಸುತ್ತಿದ್ದರು ಮತ್ತು ಈಗ ಅವನು ಹೋಗಿಬಿಟ್ಟಿರುತ್ತಾನೆ. ಹಾಗಾಗಿ ಯಾವಾಗಲೂ ಮಾನವರ ವೇದನೆಯ ಬೇರಿನಲ್ಲಿ ಮನುಷ್ಯ ತನ್ನ ಮೇಲೆಯೇ ಹೊರಳಿಕೊಳ್ಳುವುದಾಗಿರುತ್ತದೆ, ಅದನ್ನು ಹೆಚ್ಚು ಕಡಿಮೆ ಪ್ರಜ್ಞಾಪೂರ್ವಕವಾಗಿ ಮಾಡಲಾಗುತ್ತದೆ. ಅದನ್ನು ಹೇಳುವುದು ಹೇಗೆ? –ಒಪ್ಪಿಕೊಳ್ಳಲಾಗಿರುತ್ತದೆ, ಆದರೆ, ಯಾವಾಗಲೂ, ಅದೇ ಅದು. ಮನುಷ್ಯ ಇನ್ನೊಬ್ಬರ ದುಃಖವನ್ನು ಕಂಡು ರೋದಿಸಿದಾಗಲೂ ಅಲ್ಲಿ ಮಿಶ್ರಣವಿರುತ್ತದೆ. ಅಲ್ಲಿ ಮಿಶ್ರಣವಿದೆ, ಆದರೆ ಆ ವೇದನೆಯಲ್ಲಿ ಚೈತ್ಯಸತ್ತೆ ಬೆರೆತುಕೊಂಡಾಗ ಅಲ್ಲಿ "ಹಿಮ್ಮೊಗವಾಗಿರುವ ದೈವೀಕರುಣೆಯ ಅಂಶವಿರುತ್ತದೆ (ಅದನ್ನೇ ನಾನು ಒಂದು ಕ್ಷಣದ ಹಿಂದೆ ವಿವರಿಸಲು ಪ್ರಯತ್ನಿಸುತ್ತಿದ್ದೆ) ಅದು ಅಸ್ತಿತ್ವದಲ್ಲಿ ಬರುತ್ತದೆ ಮತ್ತು ಮನುಷ್ಯ ಅವೆರಡನ್ನೂ ಬೇರ್ಪಡಿಸಲು ಶಕ್ತನಾದರೆ, ಅದರ ಮೇಲೆ ಏಕಾಗ್ರತೆ ವಹಿಸಿದರೆ, ತನ್ನ ಅಹಂಕಾರದಿಂದ ಹೊರಗೆ ಬಂದರೆ ಮತ್ತು ಹಿಮ್ಮೊಗವಾಗಿರುವ ದೈವೀ ಕರುಣೆಯೊಂದಿಗೆ ಏಕವಾದರೆ, ಇದರ ಮೂಲಕ ಶ್ರೇಷ್ಠ ವಿಶ್ವಂಭರ ದೈವೀ ಕರುಣೆಯ ಸಂಪರ್ಕದಲ್ಲಿ ಬರಬಹುದು, ಆ ಕರುಣೆ ಭವ್ಯವಾದ ಏನೋ ಒಂದು, ವಿಶಾಲವಾದದ್ದು ಸ್ಥಿರವಾದದ್ದು ಸಾಮರ್ಥ್ಯಪೂರ್ಣವಾದದ್ದು, ಆಳವಾದದ್ದು, ಪರಿಪೂರ್ಣ ಶಾಂತಿಯಿಂದ ಹಾಗೂ ಅನಂತ ಮಾಧುರ್ಯದಿಂದ ತುಂಬಿ–ಕೊಂಡದ್ದು.

**CWM, 6/144** **– ಶ್ರೀಮಾತೆ**

*

## ದೈವೀ ಕರುಣೆಯನ್ನು ಚೈತ್ಯದ ದ್ವಾರದಿಂದ ಪ್ರವೇಶಿಸುವುದು

ತನ್ನ ವೇದನೆ ಆಳವಾದದ್ದಾಗುವಂತೆ ಹೇಗೆ ಮಾಡಬೇಕು, ಅದರ ಹೃದಯದಲ್ಲಿಯೇ ಹೇಗೆ ಸಾಗಿ ಹೋಗಬೇಕು, ಅಹಂಕಾರದ ಹಾಗೂ ವೈಯಕ್ತಿಕ ಭಾಗದಿಂದ ಮೇಲ್ಗಡೆ ಹೇಗೆ ಹೋಗಬೇಕು ಮತ್ತು ಆಳಾತಿಆಳದಲ್ಲಿ ಹೇಗೆ ಸಾಗಿ ಹೋಗಬೇಕು ಎಂಬುದನ್ನು ತಿಳಿದುಕೊಂಡಿದ್ದರೆ ಮನುಷ್ಯ ಜ್ಞಾನ ಪ್ರಕಾಶನದ ದ್ವಾರವನ್ನು ತೆರೆದಿರಿಸಬಲ್ಲನು ಎಂಬುದು ನಾನು ಹೇಳಿದ್ದರ ಅರ್ಥವಾಗಿತ್ತು. ಇದರರ್ಥ ನೀವು ವೇದನೆಯ ಸಲುವಾಗಿಯೇ ವೇದನೆಯನ್ನು ಅರಸಬೇಕೆಂದಿಲ್ಲ. ಅದು ಇದ್ದಾಗ, ನಿಮ್ಮ ಮೇಲೆ ಬಂದಾಗ, ನೀವು ಯಾವಾಗಲೂ, ನಿಮ್ಮ ವೇದನೆಯ ಅಹಂಮನ್ಯತೆಯ ಮೇಲೇರಿ ಹೋಗುವಂತೆ ನೋಡಿಕೊಂಡರೆ– ಮೊದಲು ಅಹಂಮನ್ಯತೆಯ ಭಾಗ ಯಾವುದು, ನಿಮ್ಮನ್ನು ವೇದನೆಗೆ ಒಳಪಡಿಸುತ್ತಿರುವುದು ಯಾವುದು, ನಿಮ್ಮ ವೇದನೆಗಾಗಿ ಇರುವ ಅಹಂಮನ್ಯತೆಯ ಕಾರಣ ಯಾವುದು ಎಂಬುದನ್ನು ನೋಡಿಕೊಂಡು, ಆಗ ಅದರ ಮೇಲೇರಿ ಹೋಗಿ, ಅದರಾಚೆಗೆ ವಿಶ್ವಂಭರವಾದ ಏನೋ ಒಂದರತ್ತ, ಆಳವಾದ ಮೂಲಭೂತ ಸತ್ಯದತ್ತ ಹೋದಾಗ ನೀವು ಅನಂತ ದೈವೀ ಕರುಣೆಯಲ್ಲಿ ಪ್ರವೇಶಿಸುತ್ತೀರಿ ಮತ್ತು ಅಲ್ಲಿ ನಿಜವಾಗಿ ಅದು ತೆರೆದುಕೊಳ್ಳುವ ಚೈತ್ಯಾತ್ಮಿಕ ದ್ವಾರ. ಹಾಗಾಗಿ ಯಾರಾದರೂ ನಾನು ಕಣ್ಣೀರು ಸುರಿಸುವುದನ್ನು ನೋಡಿದರೆ ಮತ್ತು ಆ ಕ್ಷಣದಲ್ಲಿ ಅದರೊಡನೆ ಸಂಪೂರ್ಣವಾಗಿ ಏಕವಾಗಲು ಪ್ರಯತ್ನಿಸಿದರೆ– ಈ ಕಣ್ಣೀರುಗಳಲ್ಲಿ ಪ್ರವೇಶಿಸುವುದು, ಅವುಗಳಲ್ಲಿ ಕರಗಿ ಹೋಗುವುದು, ತಿಳಿಯಿತೆ– ಇದು ಆ ದ್ವಾರವನ್ನು ತೆರೆದಿರಿಸಬಲ್ಲದು. ಮನುಷ್ಯ ಆ ದ್ವಾರವನ್ನು ತೆರೆದಿರಿಸಬಲ್ಲನು ಮತ್ತು ಪೂರ್ತಿ ಅನುಭವ ಪಡೆಯಬಲ್ಲನು, ಅದು ಬಹಳ ಅಸಾಧಾರಣವಾದ ಅನುಭವವಾಗಿರುತ್ತದೆ, ಅದು ನಿಮ್ಮ ಪ್ರಜ್ಞೆಯ ಮೇಲೆ ಗುರುತೊಂದನ್ನು ಉಳಿಸುತ್ತದೆ. ಸಾಮಾನ್ಯವಾಗಿ ಅದು ಅಳಿಸಿಹೋಗುವುದಿಲ್ಲ. ಆದರೆ ಆ ದ್ವಾರ ಮತ್ತೆ ಮುಚ್ಚಿಕೊಂಡರೆ, ನೀವು ಮತ್ತೊಮ್ಮೆ ನಿಮ್ಮ ಸರ್ವಸಾಧಾರಣ ಚಲನೆಗಳಲ್ಲಿ ನೀವಿರುವಂತಾದರೆ, ಅದು ಎಲ್ಲಿಯೋ ಹಿನ್ನೆಲೆಯಲ್ಲಿ ಉಳಿದುಕೊಂಡಿರುತ್ತದೆ, ನಿಮ್ಮ ಗಾಢ ಏಕಾಗ್ರತೆಯ ಗಳಿಗೆಗಳಲ್ಲಿ ಅದರತ್ತ ನೀವು ಹಿಂದಿರುಗಿ ಹೋಗಬಹುದು. ನೀವು ಅದರತ್ತ ಮರಳಿ ಹೋಗಿ ಮತ್ತೆ ಆ ಅನಂತ ಮಾಧುರ್ಯದ ಭವ್ಯತೆಯನ್ನು ಮತ್ತೊಮ್ಮೆ ಭಾವನೆಗೆ ತಂದು–

ಕೊಳ್ಳಬಹುದು, ಅಲ್ಲಿ ಶ್ರೇಷ್ಠಮಟ್ಟದ ಶಾಂತಿಯಿರುತ್ತದೆ, ಅದು ಪ್ರತಿಯೊಂದನ್ನು ಅರ್ಥಮಾಡಿಕೊಳ್ಳುತ್ತದೆ, ಆದರೆ ಬೌದ್ಧಿಕವಾಗಿ ಅಲ್ಲ, ಎಲ್ಲ ವಸ್ತು–ವಿಷಯಗಳ ಬಗ್ಗೆ ಅದಕ್ಕೆ ಕರುಣೆ ಇರುತ್ತದೆ, ಅದು ಎಲ್ಲ ವಸ್ತು–ವಿಷಯಗಳನ್ನು ಅಪ್ಪಿಕೊಳ್ಳಬಲ್ಲದು, ಹಾಗಾಗಿ ಅವುಗಳನ್ನು ವಾಸಿಮಾಡಬಲ್ಲದು.

**CWM, 6/145–46** **– ಶ್ರೀಮಾತೆ**

*

**ದೈವೀ ಕರುಣೆ ಹಾಗೂ ದೈವೀ ಜುಗುಪ್ಸೆ**

**ಪ್ರಶ್ನೆ:** *ಮಧುರ ಮಾತೆಯವರೆ, ದೈವೀ ಜುಗುಪ್ಸೆ ಎಂದರೇನು?*

**ಶ್ರೀಮಾತೆ:** ಅದು ಇಡಿಯಾದ ಕರುಣೆಯಿಂದ ತುಂಬಿಕೊಂಡಿರುವ ಜುಗುಪ್ಸೆ.

ಅದು ಕೆಟ್ಟಕಂಪನವನ್ನು ತನ್ನ ಮೇಲೆಯೇ ತೆಗೆದುಕೊಳ್ಳುತ್ತದೆ, ಅದರಿಂದಾಗಿ ಉಳಿದವರನ್ನು ಅದರಿಂದ ದೂರವಿರಿಸುವಂತಾಗುತ್ತದೆ. ಒಂದು ತಪ್ಪಾದ ಮತ್ತು ಕೆಳಮಟ್ಟದ ಚಲನೆಯ ಪರಿಣಾಮಗಳು...

(ಮೌನ)

ಅದನ್ನು ತಪ್ಪು ಮಾಡಿದವನ ಮೇಲೆ ತಿರುಗಿ ನಿಷ್ಠುರ ನ್ಯಾಯಬುದ್ಧಿಯಿಂದ ಚೆಲ್ಲಿಕೊಡುವುದರ ಬದಲಾಗಿ, ಹೀರಿಕೊಳ್ಳುತ್ತದೆ, ಅದರಿಂದಾಗಿ ಅದನ್ನು ತನ್ನೊಳಗೆ ಪರಿವರ್ತನೆಗೆ ಒಳಪಡಿಸುವಂತಾಗುತ್ತದೆ, ತಪ್ಪು ಮಾಡಿದ್ದರ ಪ್ರಾಪಂಚಿಕ ಪರಿಣಾಮಗಳನ್ನು ಸಾಧ್ಯವಿದ್ದಷ್ಟು ಕಡಿಮೆ ಮಾಡುತ್ತದೆ.

ತನ್ನ ಶಿರದಲ್ಲಿ ಕಪ್ಪುಕಲೆಯನ್ನು ಹೊತ್ತಿರುವ ಶಿವನನ್ನು ಕುರಿತು ಇರುವ ಹಳೆಯ ಕತೆಯೊಂದು ನನ್ನ ನೆನಪಿಗೆ ಬರುತ್ತದೆ, ಅವನು ಜಗತ್ತಿನಲ್ಲಿರುವ ಕೆಟ್ಟದಾದ ಎಲ್ಲವನ್ನೂ ನುಂಗಿದ್ದ, ಕಾಲ್ಪನಿಕವಾದ ರೀತಿಯಲ್ಲಿ ಇದು ದೈವೀ ಜುಗುಪ್ಸೆಯನ್ನು ಅಭಿವ್ಯಕ್ತಪಡಿಸುವ ರೀತಿ. ಅದು ಅವನ ಶಿರದ ಮೇಲೆ ಕಪ್ಪುಕಲೆಯನ್ನು ಉಂಟು ಮಾಡಿತು.

**CWM, 6/286** **– ಶ್ರೀಮಾತೆ**

*

## ದೈವೀ ಕರುಣೆ ಹಾಗೂ ದೈವೀ ಕೃಪೆ

ದೈವೀ ಕೃಪೆ Mis'ericorde ಶಬ್ದಕ್ಕೆ ಸಮನಾಗಿದೆ. ಅದು ಬಲ ಹಾಗೂ ಕರುಣೆಗಳಿಂದ ತುಂಬಿಕೊಂಡ ಮರುಕ, ಕ್ಷಮಿಸುವ ಹಾಗೂ ತಿದ್ದುವ ಮರುಕ, ಎಲ್ಲ ಅಪರಾಧಗಳನ್ನು ಮರೆತುಬಿಡುತ್ತದೆ, ಪ್ರತಿಯೊಬ್ಬನಿಗೂ ಒಳ್ಳೆಯದನ್ನು ಬಯಸುತ್ತದೆ.

**CWM, 17/10** **– ಶ್ರೀಮಾತೆ**

*

ದೈವೀ ಕರುಣೆ ಎಲ್ಲರ ವೇದನೆಯನ್ನು, ಅವರು ಅರ್ಹರಾಗಿರಲಿ ಇಲ್ಲದೆ ಆಗಿರದೆ ಇರಲಿ, ನಿವಾರಣೆ ಮಾಡಲು ಬಯಸುತ್ತದೆ.

ದೈವೀ ಕೃಪೆ ವೇದನೆ ಅಸ್ತಿತ್ವದಲ್ಲಿರುವುದರ ಹಕ್ಕನ್ನು ಗುರುತಿಸುವುದಿಲ್ಲ, ಅದನ್ನು ಅಂತ್ಯಗೊಳಿಸುತ್ತದೆ.

**CWM, 16/345** **– ಶ್ರೀಮಾತೆ**

*

## ಜಗತ್ತಿನ ಭಾರವನ್ನು ಹೊತ್ತುಕೊಳ್ಳುವುದು

**ಪ್ರಶ್ನೆ:** *ಭಗವಂತ ಮಾನವ ವೇದನೆಯನ್ನು ತನ್ನ ಮೇಲೆ ತೆಗೆದುಕೊಂಡಾಗ, ಈ ವೇದನೆ ನಮ್ಮ ಮೇಲಾಗುವಷ್ಟು ಪರಿಣಾಮವನ್ನು ಉಂಟುಮಾಡುವುದೆ, ಎಂದರೆ ನಾವು ಭಾವನೆಗೆ ತಂದುಕೊಂಡ ಹಾಗೆ ಅವನಲ್ಲಿ ನೋವು ಮತ್ತು ವೇದನೆಗಳ ಭಾವನೆ ಇರುತ್ತದೆಯೆ?*

**ಶ್ರೀಮಾತೆ:** ಇಲ್ಲ ಎಂದು ನಾನು ಹೇಳಬಲ್ಲೆ. ಇಲ್ಲ! ಏಕೆಂದರೆ ಸ್ಪಷ್ಟವಾಗಿ ಅಜ್ಞಾನದ ಸ್ಥಿತಿ ಹಾಗೂ ಜ್ಞಾನವಿರುವ ಸ್ಥಿತಿ ಇವುಗಳ ನಡುವೆ ಸಾರಭೂತ ವ್ಯತ್ಯಾಸವಿದೆ. ನೋವು ಕೊಡುವ ಏನೋ ಒಂದು ನಿಮಗೆ ಸಂಭವಿಸುತ್ತದೆ ಎಂದು ತಿಳಿಯೋಣ, ಅಜ್ಞಾನವಿರುವಾಗ ಈ ನೋವು ನೀಡುವ ವಿಷಯ ಒಂದು ವಿಶಿಷ್ಟ ಲಕ್ಷಣದ್ದಾಗಿರುತ್ತದೆ, ಆದರೆ ಈ ನೋವನ್ನು ಜ್ಞಾನವಿರುವ ಸ್ಥಿತಿಯಲ್ಲಿ ಸ್ವೀಕರಿಸಿದಾಗ ಅದರ ಪರಿಣಾಮ ಅದೇ ಆಗಿರುವುದಿಲ್ಲ. ಒಂದು ಭೌತಿಕ ವಿಷಯವನ್ನೂ ಕೂಡ ತೆಗೆದುಕೊಳ್ಳೋಣ. ಒಂದು ಬಹಳ ಭೌತಿಕವಾದ

ಹೊಡೆತ (ಹೊಡೆತದ ಸಂಜ್ಞೆ). ಸರಿ, ಮನುಷ್ಯ ಸರ್ವ ಸಾಧಾರಣ ಪ್ರಜ್ಞೆಯಿರುವ ಸ್ಥಿತಿಯಲ್ಲಿದ್ದಾಗ ಆ ಹೊಡೆತಕ್ಕೆ ಅದರ ಪೂರ್ತಿ ಪರಿಣಾಮವಿರುತ್ತದೆ. ಅದು ಪ್ರತ್ಯೇಕವಾಗಿ ಅದರ ಬಿರುಸಿನ ಮೇಲೆ ಹಾಗೂ ಯಾವುದು ಹೊಡೆತ ಕೊಟ್ಟಿತೋ ಮತ್ತು ಯಾರು ಅದನ್ನು ಸ್ವೀಕರಿಸಿದರೋ ಅವರ ಮೇಲೆ ಅವಲಂಬಿಸಿರುತ್ತದೆ. ಆದರೆ ಆ ಹೊಡೆತವನ್ನು, ಅದೇ ರೀತಿಯಲ್ಲಿ, ಅಜ್ಞಾನದ ಬದಲಾಗಿ ಜ್ಞಾನವಿರುವವನಿಗೆ ಕೊಟ್ಟಾಗ ತತ್ಕ್ಷಣ ದೇಹದ ಪ್ರತಿಕ್ರಿಯೆ ಪರಿಣಾಮವನ್ನು ಕನಿಷ್ಠಮಟ್ಟಕ್ಕಿಳಿಸುವಂತೆ ಕುಗ್ಗಿಸುತ್ತದೆ. ಇದು ಮೂರ್ತರೂಪದ ವಾಸ್ತವ ಸಂಗತಿ. ಇದು ಕೆಲವೊಮ್ಮೆ ಪರಿಣಾಮವನ್ನು ಒಟ್ಟಿನಲ್ಲಿ ತೊಡೆದು ಹಾಕುವಷ್ಟರ ಮಟ್ಟಕ್ಕೆ ಸಾಗಿ ಹೋಗಬಲ್ಲದು. ಅದು ಅಷ್ಟು ದೂರ ಹೋಗಬಲ್ಲದು, ಎಂದರೆ ಅದು ಪರಿಣಾಮಗಳನ್ನು ಅಂತ್ಯಗೊಳಿಸಬಲ್ಲದು, ಏಕೆಂದರೆ ಪ್ರತಿಕ್ರಿಯೆ ಅಜ್ಞಾನಕ್ಕೆ ಸೇರಿದ ಒಂದು ವಿಷಯವಾಗಿರದೆ ಜ್ಞಾನಕ್ಕೆ ಸೇರಿದ ವಿಷಯವಾಗಿರುತ್ತದೆ. ಹಾಗಾಗಿ ಮನುಷ್ಯ ವಿಷಯ ಅದೇ ಆಗಿರುತ್ತದೆಂದು ಹೇಳಲಾರ. ಉದಾಹರಣೆಗೆ ನೈತಿಕ ವಿಷಯಗಳಲ್ಲಿ ಇದು ಸ್ಪಷ್ಟವಾಗಿರುತ್ತದೆ, ಉದ್ವೇಗದ ಒಂದು ಆಘಾತವನ್ನು ಅದರ ಎಲ್ಲ ಸಾಧಾರಣ ಉದ್ವೇಗದ ಅಹಂಮನ್ಯತೆಯ ಕುರುಡುತನದಿಂದ ಸ್ವೀಕರಿಸುವುದರ ಬದಲಾಗಿ ಮನುಷ್ಯ ಅದನ್ನು ವಸ್ತುನಿಷ್ಠವಾಗಿರಿಸುತ್ತಾನೆ, ಅದೇನಿದೆ ಎಂಬುದನ್ನು ನೋಡುತ್ತಾನೆ, ಆ ಕಂಪನದಲ್ಲಿರುವ ಜೋಡಣೆಯನ್ನು ನೋಡುತ್ತಾನೆ ಮತ್ತು ಕೂಡಲೆ ಅದರ ಮೇಲೆ ಪ್ರಕಾಶ, ಜ್ಞಾನ ಹಾಗೂ ಸತ್ಯ ಇವುಗಳನ್ನು ಚೆಲ್ಲಿಕೊಡುತ್ತಾನೆ ಮತ್ತು ಎಲ್ಲ ವಿಷಯಗಳನ್ನು ಅವುಗಳ ಸ್ಥಾನದಲ್ಲಿ ಇರಿಸಲಾಗುತ್ತದೆ. ಅದು ತತ್ಕ್ಷಣ ಸಂಭವಿಸುತ್ತದೆ. ಆದರೆ ಅತ್ಯಂತ ಭೌತಿಕವಾಗಿರುವ ದೇಹದ ಮೇಲೂ ಕೂಡ ಅತ್ಯಂತ ಭೌತಿಕ ರೀತಿಯಲ್ಲಿ ಪರಿಣಾಮ ಒಂದೇ ಆಗಿರುವುದಿಲ್ಲ ಎಂಬುದನ್ನು ಒತ್ತಿ ಹೇಳುತ್ತೇನೆ, ಅಲ್ಲದೆ ಅದು ತಿಳಿದುಕೊಳ್ಳಲು ಬಹಳ ಸುಲಭವಾದದ್ದು. ಏಕೆಂದರೆ ಪರಿಣಾಮಗಳು ಒಂದೇ ಆಗಿದ್ದರೆ ಅದು ಭಗವಂತ ತನ್ನ ಮೇಲೆ ಕೆಟ್ಟ ವಿಷಯಗಳನ್ನು ಎತ್ತಿಕೊಳ್ಳುವುದಕ್ಕೆ ಯಾವುದೇ ಬಗೆಯ ಸಂತೋಷಕಾರಕ ಪರಿಣಾಮಗಳನ್ನು ಕೊಡುತ್ತಿರಲಿಲ್ಲ! ಏಕೆಂದರೆ ಅವು ಏನಾಗಿವೆಯೋ ಹಾಗೆಯೇ ಉಳಿದುಕೊಳ್ಳುತ್ತಿದ್ದವು ಮತ್ತು ವಿಶ್ವ ತಾನಿದ್ದ ಹಾಗೆ ಮುಂದುವರಿದುಕೊಂಡು ಹೋಗುತ್ತಿತ್ತು. ತನ್ನ ಮೇಲೆ ಕೆಟ್ಟ ವಿಷಯಗಳನ್ನು ಎತ್ತಿಕೊಳ್ಳುವುದಕ್ಕೆ ಅವನಲ್ಲಿ ಈ ಮಬ್ಬಾದ ಕಂಪನಗಳನ್ನು ಪ್ರಕಾಶದ ಕಂಪನಗಳನ್ನಾಗಿ ಪರಿವರ್ತಿಸುವ ಸಾಮರ್ಥ್ಯವಿರುವುದರಿಂದ ಅವನು ಪ್ರತಿಯೊಂದನ್ನು ತನ್ನ

ಮೇಲೆ ತೆಗೆದುಕೊಳ್ಳಬಲ್ಲನು. ಹಾಗಿಲ್ಲದಿದ್ದರೆ ಇದು ನಿರುಪಯುಕ್ತವಾಗುತ್ತಿತ್ತಲ್ಲದೆ, ಅಸಾಧ್ಯವಾಗುತ್ತಿತ್ತು, ಅದೊಂದು ಅಸಂಗತತೆಯಾಗುತ್ತಿತ್ತು.

**CWM, 6/286–88** **– ಶ್ರೀಮಾತೆ**

*

**ವ್ಯವಹರಿಸುವ ದೈವೀ ರೀತಿ**

ಪ್ರತಿಯೊಬ್ಬರೊಡನೆ ಒಂದೇ ರೀತಿಯಲ್ಲಿ ನಡೆದುಕೊಳ್ಳಬೇಕೆಂಬುದು ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಟ್ಟದ್ದಾದ ಗೊಂದಲವಾಗಿರುತ್ತದೆ! ಭಗವಂತ ಪ್ರತಿಯೊಬ್ಬನೊಡನೆ ಒಂದೇ ರೀತಿಯಲ್ಲಿ ನಡೆದುಕೊಳ್ಳಬೇಕು ಎಂದು ಮನುಷ್ಯ ಹೇಳಿದಾಗ ಅದು ಅವನು ಉಂಟುಮಾಡುವ ಗೊಂದಲವಾಗಿರುತ್ತದೆ. ಹಾಗಾಗಿ ಜಗತ್ತಿನಲ್ಲಿ ವೈವಿಧ್ಯ ಇರುವಂತೆ ಮಾಡಲು ತೊಂದರೆ ತೆಗೆದುಕೊಳ್ಳುವುದು ಯೋಗ್ಯವಾಗಿರುವುದಿಲ್ಲ, ಒಂದೇ ಬಗೆಯ ಇಬ್ಬರು ವ್ಯಕ್ತಿಗಳನ್ನು ಹೊಂದದೆ ಇರುವುದು ಯೋಗ್ಯವಾಗಿರುವುದಿಲ್ಲ, ಏಕೆಂದರೆ ಇದು ವೈವಿಧ್ಯದ ತತ್ವವನ್ನೇ ವಿರೋಧಿಸುತ್ತದೆ. ವಿಶ್ವದಲ್ಲಿ ಇರುವುದೆಲ್ಲದಕ್ಕೆ ಒಂದೇ ಬಗೆಯ ತಿಳಿವಳಿಕೆಯ ಮನೋಭಾವ, ಏಕತೆ, ಪ್ರೇಮ, ಪರಿಪೂರ್ಣ ಕರುಣೆ ಇವೆಲ್ಲವನ್ನು ಹೊಂದಲು ನೀವು ಅಭೀಪ್ಸೆಪಡಬಹುದು– ಅದು ಸಾಧ್ಯವಾಗದಿದ್ದರೆ ಅಭೀಪ್ಸೆಪಡಲು ಪ್ರಯತ್ನ ಮಾಡಬೇಕು, ಆದರೆ ಇದೇ ಮನೋಭಾವವನ್ನು ಪ್ರತಿಯೊಂದು ಸಂದರ್ಭದಲ್ಲಿ ಭಿನ್ನ ರೀತಿಯಲ್ಲಿ ಅನ್ವಯಿಸಲಾಗುವುದು, ಅದು ಆ ಸಂದರ್ಭದ ಸತ್ಯ ಹಾಗೂ ಆವಶ್ಯಕತೆ ಇವುಗಳಿಗೆ ಅನುಗುಣವಾಗಿರುತ್ತದೆ. ಕ್ರಿಯೆಯ ಉದ್ದೇಶ ಇಲ್ಲವೆ ಅದಕ್ಕೂ ಹೆಚ್ಚಾಗಿ ಅದರ ಮೂಲ ಎಂದು ಕರೆಯಬಹುದಾದುದು ಒಂದೇ ಆಗಿರುತ್ತದೆ, ಆದರೆ ಕ್ರಿಯೆ ಇಡಿಯಾಗಿ, ಸಂದರ್ಭಕ್ಕನುಗುಣವಾಗಿ ಹಾಗೂ ಅದರ ಆಳಾತಿ ಆಳದ ಸತ್ಯಕ್ಕನುಗುಣವಾಗಿ ಪರಸ್ಪರ ವಿರುದ್ಧ ದಿಶೆಯಲ್ಲಿರಬಹುದು. ಆದರೆ ಅದಕ್ಕಾಗಿ, ನಿಖರವಾಗಿ, ಮನುಷ್ಯ ಅತ್ಯುಚ್ಚ ಮನೋಭಾವವನ್ನು, ಅತ್ಯಂತ ಗಾಢವಾದ, ಸಾರಭೂತವಾಗಿ ಅತ್ಯಂತ ನಿಜವಾದದ್ದನ್ನು ಹೊಂದಿರಬೇಕು, ಅದು ಎಲ್ಲ ಬಾಹ್ಯ ಅನಿಶ್ಚಯತೆಯಿಂದ ಮುಕ್ತವಾಗಿರಬೇಕು. ಆಗ ಮನುಷ್ಯ ಪ್ರತಿನಿಮಿಷ ಕೇವಲ ಸಾರಭೂತವಾದದ್ದನ್ನಷ್ಟೇ ಅಲ್ಲ, ಆದರೆ ಕ್ರಿಯೆಯ ಸತ್ಯವನ್ನೂ ಕೂಡ ನೋಡಬಲ್ಲನು, ಅದು ಪ್ರತಿಯೊಂದು ಸಂದರ್ಭದಲ್ಲಿ ಭಿನ್ನವಾಗಿರುತ್ತದೆ ಮತ್ತು ಆದಾಗ್ಯೂ ನಾವು "ಭಾವನೆ" ಎಂದು ಕರೆಯಬಹುದಾದುದು– ಇದು ಅಷ್ಟೊಂದು

ಸರಿಯಾದ ಶಬ್ದವಲ್ಲ– ಇಲ್ಲವೆ ಮನುಷ್ಯ ಕಾರ್ಯಕೈಕೊಳ್ಳುವಾಗಿನ ಪ್ರಜ್ಞೆಯ ಸ್ಥಿತಿ ಸಾರಭೂತವಾಗಿ ಒಂದೇ ಆಗಿರುತ್ತದೆ.

ಆದರೆ ಮನುಷ್ಯ ವಸ್ತು–ವಿಷಯಗಳ ಸಾರಭೂತ ಆಳದಲ್ಲಿ ಪ್ರವೇಶಿಸುವವರೆಗೆ, ಅವುಗಳನ್ನು ಅತ್ಯುಚ್ಚ ಶಿಖರಗಳಿಂದ ನೋಡುವವರೆಗೆ ಇದನ್ನು ಅರ್ಥಮಾಡಿ–ಕೊಳ್ಳಲಾರ. ನಂತರ ಅದು ಸಾಕಷ್ಟು ಉಚ್ಚವಾದ, ಸಾಕಷ್ಟು ಆಳವಾದ ಪ್ರಕಾಶದ ಮತ್ತು ಪ್ರಜ್ಞೆಯ ಕೇಂದ್ರದ ಹಾಗಿರುತ್ತದೆ, ಅದರಿಂದಾಗಿ ಎಲ್ಲ ವಸ್ತು–ವಿಷಯಗಳನ್ನು ಕೇವಲ ಅವುಗಳ ಸಾರದಲ್ಲಿ ಅಷ್ಟೇ ಅಲ್ಲ ಆದರೆ ಅವುಗಳ ಪ್ರಕಟನೆಯಲ್ಲಿಯೂ ಕೂಡ ಒಂದೇ ವೇಳೆಗೆ ನೋಡಲು ಸಾಧ್ಯವಾಗುವುದು, ಪ್ರಜ್ಞೆಯ ಕೇಂದ್ರ ಒಂದೇ ಆಗಿದ್ದಾಗ್ಯೂ ಕ್ರಿಯೆಯ ಪ್ರಕಟಣೆ ವೈವಿಧ್ಯಮಯ–ವಾಗಿರುವಷ್ಟು ವೈವಿಧ್ಯಮಯವಾಗಿರುತ್ತದೆ. ಅದು ಪ್ರಕಟಣೆಯಲ್ಲಿರುವ ದೈವೀ ಸತ್ಯವನ್ನು ಸಿದ್ಧಿಸಿಕೊಳ್ಳುವುದಾಗಿರುತ್ತದೆ. ಹಾಗಿರದಿದ್ದರೆ ಜಗತ್ತಿನಲ್ಲಿರುವ ಎಲ್ಲ ವೈವಿಧ್ಯವನ್ನು ತೊಡೆದು ಹಾಕುವುದಾಗಿರುತ್ತದೆ ಮತ್ತು ಅದನ್ನು ಅದರ ಸಾರಭೂತ ಪ್ರಕಟವಾಗಿರದ ಏಕತೆಯತ್ತ ಹಿಂದೆ ತರುವುದಾಗಿರುತ್ತದೆ, ಏಕೆಂದರೆ ಕೇವಲ ಪ್ರಕಟವಾಗದೆ ಇದ್ದುದರಲ್ಲಿ ಏಕೈಕವಾದುದು ಏಕೈಕನಾದವನೆಂದಾಗಿ ಪ್ರಕಟವಾಗಿದೆ. ಆದರೆ ಮನುಷ್ಯ ಪ್ರಕಟಣೆಯಲ್ಲಿ ಪ್ರವೇಶಿಸಿದಾಗ ದೈವೀ ಏಕೈಕವಾದುದು ಅನೇಕತೆಯಾಗಿ ಪ್ರಕಟವಾಗುತ್ತದೆ, ಅನೇಕತೆ ಕ್ರಿಯೆಗಳ ಹಾಗೂ ರೀತಿಗಳ ಬಹು ಸಂಖ್ಯೆಯನ್ನು ಒಳಗೊಳ್ಳುತ್ತದೆ.

**CWM, 8/407–08** **– ಶ್ರೀಮಾತೆ**

*

**ಭಗವಂತ ಸೃಷ್ಟಿಯ ವೇದನೆಯನ್ನು ತನ್ನ ಮೇಲೆ ತೆಗೆದುಕೊಳ್ಳುವುದು**

**ಪ್ರಶ್ನೆ:** *ಅಜ್ಞಾನ ಹಾಗೂ ನೋವಿನಿಂದ ವೇದನೆ ಬರುತ್ತದೆ, ಆದರೆ ದೈವೀಮಾತೆ ('ಸಾವಿತ್ರಿ' ಮಹಾಕಾವ್ಯದಲ್ಲಿ ಬರುವ ದೈವೀ ಮಾತೆ) ತನ್ನ ಮಕ್ಕಳಿಗಾಗಿ ಭಾವನೆಗೆ ತಂದುಕೊಳ್ಳುವ ವೇದನೆಯ ಸ್ವಭಾವ ಹೇಗಿರುತ್ತದೆ.*

**ಶ್ರೀಮಾತೆ:** ಅದು ಏಕೆಂದರೆ ಅವಳು ಅವರ ಸ್ವಭಾವದಲ್ಲಿ ಭಾಗವಹಿಸುತ್ತಾಳೆ. ಅವಳು ಅವರ ಸ್ವಭಾವದಲ್ಲಿ ಭಾಗವಹಿಸಲು ಪೃಥ್ವಿಯ ಮೇಲೆ ಅವರೋಹಣ ಮಾಡಿ ಬಂದಿದ್ದಾಳೆ. ಅವರ ಸ್ವಭಾವದಲ್ಲಿ ಭಾಗವಹಿಸದೆ ಇದ್ದರೆ ಅವರನ್ನು

ಮುಂದೆ ದೂರ ಕರೆದೊಯ್ಯಲಾಗುವುದಿಲ್ಲ. ಅವಳು ಯಾವುದೇ ವೇದನೆಯಿಲ್ಲದ ತನ್ನ ಪರಮೋಚ್ಚ ಪ್ರಜ್ಞೆಯಲ್ಲಿ, ಪರಮೋಚ್ಚ ಜ್ಞಾನದಲ್ಲಿ ಹಾಗೂ ಪ್ರಜ್ಞೆಯಲ್ಲಿ ಉಳಿದುಕೊಂಡು ಬಿಟ್ಟರೆ ಅವಳು ಮಾನವರೊಡನೆ ಯಾವುದೇ ಸಂಬಂಧ ಹೊಂದಿರಲು ಸಾಧ್ಯವಾಗುವುದಿಲ್ಲ. ಇದಕ್ಕಾಗಿಯೇ ಮಾನವ ಪ್ರಜ್ಞೆಯನ್ನು ಹಾಗೂ ರೂಪವನ್ನು ಧಾರಣ ಮಾಡುವ ನಿರ್ಬಂಧಕ್ಕೊಳಗಾಗಿದ್ದಾಳೆ. ಕೇವಲ ಅವಳು ಅವರ ಪ್ರಜ್ಞೆಯನ್ನು ಹೊಂದಿರುವುದನ್ನು ಒಪ್ಪಿಕೊಂಡಿದ್ದಾಳೆ ಎಂಬುದನ್ನು ಮರೆಯುವುದಿಲ್ಲ, ತನ್ನದೇ ನಿಜವಾದ ಪರಮೋಚ್ಚ ಪ್ರಜ್ಞೆಯೊಡನೆ ಸಂಬಂಧವನ್ನು ಉಳಿಸಿಕೊಂಡಿರುತ್ತಾಳೆ ಮತ್ತು ಹೀಗೆ ಅವೆರಡನ್ನೂ ಜೊತೆಗೂಡಿಸುವುದರ ಮೂಲಕ ಅವಳು ಬೇರೆ ಪ್ರಜ್ಞೆಯಲ್ಲಿರುವ ಜನರು ಪ್ರಗತಿ ಸಾಧಿಸುವಂತೆ ಮಾಡುತ್ತಾಳೆ. ಆದರೆ ಅವರ ಪ್ರಜ್ಞೆಯನ್ನು ಒಪ್ಪಿಕೊಳ್ಳದಿದ್ದರೆ, ಅವರ ದುಃಖದ ವೇದನೆಯನ್ನು ಅನುಭವಿಸದಿದ್ದರೆ ಅವರಿಗೆ ಸಹಾಯ ಮಾಡಲಾರಳು. ಅವಳ ವೇದನೆ ಅಜ್ಞಾನದಿಂದ ಬಂದದ್ದಲ್ಲ, ಅನನ್ಯತೆಯಿಂದ ಬಂದದ್ದು. ಅದು ಏಕೆಂದರೆ ಅವರಲ್ಲಿರುವ ಕಂಪನಗಳನ್ನೇ ಸ್ವೀಕರಿಸಲು ಒಪ್ಪಿಕೊಂಡಿದ್ದಾಳೆ, ಅದರಿಂದಾಗಿ ಅವರೊಡನೆ ಸಂಪರ್ಕಕ್ಕೆ ಬರಲು ಮತ್ತು ಅವರನ್ನು ಅವರಿರುವ ಸ್ಥಿತಿಯಿಂದ ಹೊರಗೆಳೆದು ತರಲು ಸಾಧ್ಯವಾಗುತ್ತದೆ. ಅವರೊಡನೆ ಸಂಪರ್ಕದಲ್ಲಿ ಪ್ರವೇಶಿಸದಿದ್ದರೆ ಅವಳ ಬಗ್ಗೆ ಭಾವನೆ ತಂದುಕೊಳ್ಳಲಾಗುವುದಿಲ್ಲ ಇಲ್ಲವೆ ಯಾರೂ ಅವಳ ತೇಜಸ್ಸನ್ನು ಸಹಿಸಲಾರರು. ಇದನ್ನು ಹಲವಾರು ರೂಪಗಳಲ್ಲಿ, ಎಲ್ಲ ಬಗೆಯ ಧರ್ಮಗಳಲ್ಲಿ ಹೇಳಲಾಗಿದೆ. ಅದು ಸ್ವಯಂಪ್ರೇರಿತ ಯಜ್ಞಾಹುತಿ, ಆದರೆ ಅದು ಸತ್ಯವಾದದ್ದು: ಪರಿಪೂರ್ಣ ಪ್ರಜ್ಞೆಯ, ಪರಿಪೂರ್ಣ ದಿವ್ಯಾನಂದದ, ಪರಿಪೂರ್ಣ ಸಾಮರ್ಥ್ಯದ ಸ್ಥಿತಿಯನ್ನು ಬಿಟ್ಟುಕೊಟ್ಟು ಬಾಹ್ಯ ಜಗತ್ತಿನ ಅಜ್ಞಾನದ ಸ್ಥಿತಿಯನ್ನು ಒಪ್ಪಿಕೊಳ್ಳುವುದು, ಅದರಿಂದಾಗಿ ಅದನ್ನು ಅಜ್ಞಾನದ ಸ್ಥಿತಿಯಿಂದ ಹೊರಗೆಳೆಯಲು ಸಾಧ್ಯವಾಗುವುದು. ಈ ಸ್ಥಿತಿಯನ್ನು ಒಪ್ಪಿಕೊಳ್ಳಲಾಗದಿದ್ದರೆ ಅದರೊಡನೆ ಯಾವ ಸಂಪರ್ಕವೂ ಉಂಟಾಗುತ್ತಿರಲಿಲ್ಲ. ಯಾವ ಸಂಬಂಧವೂ ಇರುತ್ತಿರಲಿಲ್ಲ. ಅವತಾರ ತಾಳುವಿಕೆಗಳಿಗೆ ಕಾರಣ ಇದೇ ಆಗಿರುತ್ತದೆ. ಹಾಗಿರದಿದ್ದರೆ ಅವರ ಆವಶ್ಯಕತೆ ಇರುತ್ತಿರಲಿಲ್ಲ. ದೈವೀ ಪ್ರಜ್ಞೆ ಹಾಗೂ ದೈವೀ ಸಾಮರ್ಥ್ಯ ಇವು ತಮ್ಮ ಪರಿಪೂರ್ಣ ಸ್ಥಿತಿಯಿಂದ ನೇರವಾಗಿ ಕಾರ್ಯಕೈಕೊಳ್ಳುವುದು ಸಾಧ್ಯವಾಗಿದ್ದರೆ, ಅವು ಭೌತದ್ರವ್ಯದ ಮೇಲೆ ಕಾರ್ಯ ಮಾಡಿ ಅದನ್ನು ಪರಿವರ್ತನೆಗೆ ಒಳಪಡಿಸುವುದು ಸಾಧ್ಯವಾಗಿದ್ದರೆ ಮಾನವ

ದೇಹವಿರುವ ಬಗೆಯ ದೇಹವನ್ನು ಧಾರಣ ಮಾಡುವ ಆವಶ್ಯಕತೆ ಇರುತ್ತಿರಲಿಲ್ಲ, ದೈವೀ ಸತ್ಯವಿರುವ ಲೋಕದಿಂದ ಪರಿಪೂರ್ಣ ಪ್ರಜ್ಞೆ ಸಾಮಾನ್ಯ ಪ್ರಜ್ಞೆಯ ಮೇಲೆ ಕಾರ್ಯ ಕೈಕೊಳ್ಳುವುದು ಸಾಕಾಗುತ್ತಿತ್ತು. ವಾಸ್ತವದಲ್ಲಿ ಅದು ಕಾರ್ಯಮಾಡುತ್ತದೆ, ಬಹುಶಃ ಬಹಳ ನಿಧಾನ ಗತಿಯಿಂದ ಕಾರ್ಯಮಾಡುತ್ತದೆ, ಅದರಿಂದಾಗಿ ಈ ಜಗತ್ತು ಪ್ರಗತಿ ಹೊಂದುವುದು ತೀವ್ರಗತಿಯಲ್ಲಾಗುವಂತೆ ಮಾಡಲು ಪ್ರಯತ್ನವಿದ್ದಾಗ, ಸರಿ, ಮಾನವ ಸ್ವಭಾವವನ್ನು ಧಾರಣ ಮಾಡುವುದು ಅವಶ್ಯವಾಗುತ್ತದೆ. ಮಾನವ ದೇಹವನ್ನು ಧಾರಣ ಮಾಡುವುದರ ಮೂಲಕ ಮಾನವ ಸ್ವಭಾವವನ್ನು ಭಾಗಶಃವಾದರೂ ಏಕೈಕನಾದವನು ಧಾರಣ ಮಾಡುವುದರ ನಿರ್ಬಂಧಕ್ಕೊಳಗಾಗಬೇಕಾಗುತ್ತದೆ. ಕೇವಲ ಏಕೈಕನಾದವನು ದೈವೀ ಪ್ರಜ್ಞೆಯನ್ನು ಹಾಗೂ ದೈವೀಸತ್ಯದೊಡನೆ ಸಂಪರ್ಕವನ್ನು ಕಳೆದುಕೊಳ್ಳುವುದರ ಬದಲಾಗಿ ಈ ಪ್ರಜ್ಞೆಯನ್ನು ಹಾಗೂ ಈ ಸತ್ಯವನ್ನು ಕಾಪಾಡಿಕೊಂಡು ಬರುತ್ತಾನೆ ಮತ್ತು ಅವೆರಡನ್ನೂ ಒಂದುಗೂಡಿಸುವುದರ ಮೂಲಕ ಅವನು ಈ ಬಗೆಯ ಪರಿವರ್ತನೆಯ ರಸವಿದ್ಯೆಯನ್ನು ಸೃಷ್ಟಿಸಬಲ್ಲನು. ಅವನು ಭೌತದ್ರವ್ಯವನ್ನು ಸ್ಪರ್ಶಿಸದಿದ್ದರೆ, ಅದಕ್ಕೆ ಅವನೇನನ್ನೂ ಮಾಡಲಾಗುವುದಿಲ್ಲ.

**CWM, 5/387–88** **– ಶ್ರೀಮಾತೆ**

*

## ದೈವೀ ಕರುಣೆ ಹಾಗೂ ದೈವೀ ಮಧ್ಯಸ್ಥಿಕೆ

ಮಧ್ಯೆ ಪ್ರವೇಶಿಸುವುದು, ಯಾವಾಗಲೂ, ಹೆಚ್ಚು ವಿವೇಕಯುಕ್ತವಾದದ್ದಲ್ಲ. ಜನರು ಯಾವುದೇ ತರ್ಕಪರ್ಕವಿಲ್ಲದೆ ಮಧ್ಯೆ ಪ್ರವೇಶಿಸುತ್ತಾರೆ, ಏಕೆಂದರೆ ಇತರರಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ರೂಢಿಯನ್ನು ಅವರು ಇಟ್ಟುಕೊಂಡಿರುತ್ತಾರೆ.

ನಿಜವಾದ ವಿಷಯದ ಬಗ್ಗೆ ನಿಮ್ಮಲ್ಲಿ ದರ್ಶನವಿದ್ದಾಗಲೂ ಕೂಡ ಮಧ್ಯೆ ಪ್ರವೇಶಿಸುವುದು ಅಪರೂಪಕ್ಕೆ ಜಾಣತನದ್ದಾಗಿರುತ್ತದೆ. ಅವಶ್ಯವಾಗಿ ಅನಾಹುತದತ್ತ ಕರೆದೊಯ್ಯುವ ಏನೋ ಒಂದನ್ನು ಯಾರಾದರೂ ಕೈಕೊಳ್ಳಲು ಬಯಸಿದರೆ ಆಗ ಮಾತ್ರ ಮಧ್ಯೆ ಪ್ರವೇಶಿಸುವುದು ಅವಶ್ಯವಾಗುತ್ತದೆ. ಆಗಲೂ ಕೂಡ ಮಧ್ಯೆ ಪ್ರವೇಶಿಸುವುದು (ನಗು) ಯಾವಾಗಲೂ ಬಹಳ ಪರಿಣಾಮಕಾರಿಯಾಗುವುದಿಲ್ಲ.

ಸತ್ಯದ ದರ್ಶನ ನಿಮಗಾದಾಗ ಅದರ ಬಗ್ಗೆ ಪರಿಪೂರ್ಣ ನಿಶ್ಚಿತತೆ ನಿಮ್ಮಲ್ಲಿದ್ದಾಗ ಮಾತ್ರ. ವಾಸ್ತವದಲ್ಲಿ ಮಧ್ಯೆ ಪ್ರವೇಶಿಸುವುದು ಸಮರ್ಥನೀಯ–ವಾಗಿರುತ್ತದೆ. ಕೇವಲ ಅದಷ್ಟೇ ಅಲ್ಲ, ಆದರೆ ನೀವು ಪರಿಣಾಮಗಳನ್ನು ಕುರಿತು ಸ್ಪಷ್ಟ ದರ್ಶನವನ್ನು ಹೊಂದಿರಬೇಕು. ಯಾರೋ ಒಬ್ಬರ ಕ್ರಿಯೆಗಳಲ್ಲಿ ಮಧ್ಯೆ ಪ್ರವೇಶಿಸುವುದಕ್ಕೆ ಮನುಷ್ಯ ಪ್ರವಾದಿಯಾಗಿರಬೇಕು. ಆ ಪ್ರವಾದಿ ಇಡಿಯಾಗಿ ಒಳ್ಳೆಯತನವನ್ನು, ಕರುಣೆಯನ್ನು ಹೊಂದಿದವನಾಗಿರಬೇಕು. ಪ್ರವಾದಿಯ ಮಧ್ಯಸ್ಥಿಕೆ ಆ ವ್ಯಕ್ತಿಯ ಅದೃಷ್ಟದಲ್ಲಿ ಯಾವ ಪರಿಣಾಮವನ್ನು ಉಂಟು ಮಾಡಬಹುದು ಎಂಬುದರ ದರ್ಶನ ಪ್ರವಾದಿಗಿರಬೇಕು. ಜನರು ಪರಸ್ಪರರಿಗೆ 'ಇದನ್ನು ಮಾಡು, ಅದನ್ನು ಮಾಡಬೇಡ' ಎಂದು ಉಪದೇಶ ನೀಡುತ್ತಾರೆ. ನಾನಿದನ್ನು ನೋಡುತ್ತೇನೆ: ಅವರು ಎಷ್ಟರಮಟ್ಟಿಗೆ ಗೊಂದಲವನ್ನುಂಟು ಮಾಡುತ್ತಾರೆ, ಗೊಂದಲವನ್ನು, ಅವ್ಯವಸ್ಥೆಯನ್ನು ಉಂಟು ಮಾಡುತ್ತಾರೆ ಎಂಬುದರ ಬಗ್ಗೆ ವಿಚಾರವಿರುವುದಿಲ್ಲ ಮತ್ತು ಕೆಲವೊಮ್ಮೆ ಅವರು ಸಾಮಾನ್ಯ ಅಭಿವೃದ್ಧಿಯನ್ನು ಹಾಳು ಮಾಡುತ್ತಾರೆ.

ನನ್ನ ಪರಿಗಣನೆಯಲ್ಲಿ ಅಭಿಪ್ರಾಯಗಳು, ಯಾವಾಗಲೂ, ಅಪಾಯಕಾರಿ–ಯಾಗಿರುತ್ತವೆ ಮತ್ತು ಬಹಳಷ್ಟು ಸಲ ಪರಿಪೂರ್ಣವಾಗಿ ನಿಷ್ಪ್ರಯೋಜಕ–ವಾಗಿರುತ್ತವೆ. ಇತರರ ವ್ಯವಹಾರಗಳಲ್ಲಿ ನೀವು ತಲೆ ಹಾಕಬಾರದು, ತಲೆ ಹಾಕುವುದಕ್ಕೆ ಮೊಟ್ಟಮೊದಲಿಗೆ ನೀವು ಅವರಿಗಿಂತ ಅನಂತಪಟ್ಟು ಜಾಣರಾಗಿ–ರಬೇಕು– ಸಹಜವಾಗಿ ಮನುಷ್ಯ ತಾನು ಹೆಚ್ಚು ಜಾಣನಾಗಿದ್ದೇನೆ ಎಂದು ಯೋಚಿಸುತ್ತಾನೆ; ಹಾಗೆ ಜಾಣನಾಗಿರುವುದು ವಸ್ತುನಿಷ್ಠವಾಗಿರಬೇಕು, ನಿಮ್ಮದೇ ಅಭಿಪ್ರಾಯಕ್ಕೆ ಅನುಗುಣವಾಗಿ ಅಲ್ಲ, ಎಂದರೆ ನೀವು ದೂರದೃಷ್ಟಿಯುಳ್ಳವರು, ಹೆಚ್ಚು ಒಳ್ಳೆಯದಾದುದನ್ನು ನೋಡುವವರು ಮತ್ತು ನೀವೇ ಸ್ವತಃ ಎಲ್ಲ ಭಾವೋದ್ರೇಕಗಳು, ಆಸೆಗಳು ಮತ್ತು ಕುರುಡು ಪ್ರತಿಕ್ರಿಯೆಗಳು ಇವೆಲ್ಲವುಗಳ ಮೇಲ್ಗಡೆಗಿದ್ದವರು ಆಗಿರಬೇಕು. ಇನ್ನೊಬ್ಬರ ಜೀವನದಲ್ಲಿ ಮಧ್ಯೆ ಪ್ರವೇಶಿಸುವುದಕ್ಕೆ ಹಕ್ಕು ಪಡೆಯುವುದಕ್ಕೆ– ಆ ಇನ್ನೊಬ್ಬ ನಿಮ್ಮನ್ನು ಕೇಳಿದಾಗಲೂ ಕೂಡ– ನೀವೇ ಸ್ವತಃ ಈ ಎಲ್ಲ ವಿಷಯಗಳ ಮೇಲ್ಗಡೆಗಿರಬೇಕು. ಅವನು ಕೇಳದೆ ಇದ್ದಾಗ ಅದು ಸರಳವಾಗಿ ನಿಮ್ಮದಲ್ಲದ ವ್ಯವಹಾರದಲ್ಲಿ ತಲೆಹಾಕಿದ ಹಾಗಾಗುತ್ತದೆ.

**CWM, 10/235–36** **– ಶ್ರೀಮಾತೆ**

*

## ದೈವೀ ಕರುಣೆ ಮತ್ತು ವಸ್ತು–ವಿಷಯಗಳನ್ನು ಕುರಿತು ಭಗವಂತನ ದೃಷ್ಟಿ

ಬುದ್ಧಿಮತ್ತೆಯ ಉಚ್ಚತರ ಪ್ರಾಂತಗಳನ್ನು ತಲುಪಿದವರು, ಆದರೆ ತಮ್ಮಲ್ಲಿರುವ ಮಾನಸಿಕ ಕಾರ್ಯನಿರ್ವಾಹಕ ಶಕ್ತಿಗಳ ಮೇಲೆ ಪ್ರಾಬಲ್ಯ ಸಾಧಿಸದೆ ಇದ್ದವರು ತಮ್ಮಲ್ಲಿ ಮುಗ್ಧ ಆವಶ್ಯಕತೆಯೊಂದನ್ನು ಇರಿಸಿಕೊಂಡಿರುತ್ತಾರೆ: ಅದು ಪ್ರತಿಯೊಬ್ಬರು ತಮ್ಮ ಹಾಗೆ ಯೋಚಿಸಲು ಶಕ್ತರಾಗಬೇಕು, ತಾವು ತಿಳಿದುಕೊಳ್ಳುವ ರೀತಿಯಲ್ಲಿ ತಿಳಿದುಕೊಳ್ಳಬೇಕು ಎಂಬುದಾಗಿರುತ್ತದೆ ಮತ್ತು ತಮ್ಮ ಹಾಗೆ ಯೋಚಿಸದ, ಯೋಚಿಸಲು ಶಕ್ತರಾಗದ ಜನರನ್ನು ಅವರು ನೋಡಿದಾಗ ಅವರ ಮೊದಲ ಪ್ರತಿಕ್ರಿಯೆ ಭಯಾನಕವಾಗಿ ಆಘಾತಕ್ಕೊಳಗಾಗುವುದಾಗಿರುತ್ತದೆ; ಅವರು ಉದ್ಗರಿಸುತ್ತಾರೆ: "ಏನು, ಎಂತಹ ಹೆಡ್ಡರು". ಆದರೆ ಅವರೆಲ್ಲ ಹೆಡ್ಡರಾಗಿರುವುದಿಲ್ಲ– ಅವರು ಭಿನ್ನರಾಗಿರುತ್ತಾರೆ, ಅವರು ಇನ್ನೊಂದು ಪ್ರಾಂತದಲ್ಲಿರುತ್ತಾರೆ. ನೀವು ಪಶುವೊಂದರ ಬಳಿ ಹೋಗಿ "ನೀನು ಹೆಡ್ಡನಾಗಿರುವಿ" ಎಂದು ಹೇಳುವುದಿಲ್ಲ, "ಅದೊಂದು ಪಶು" ಎಂದು ನೀವು ಹೇಳುತ್ತೀರಿ. ಸರಿ, "ಅವನೊಬ್ಬ ಮನುಷ್ಯ" ಎಂದು ಹೇಳುತ್ತೀರಿ. ಅದು ಮನುಷ್ಯ, ಇನ್ನು ಮುಂದೆ ಮನುಷ್ಯರಾಗಿರದ, ಆದಾಗ್ಯೂ ದೇವರಾಗಿರದ ಜನರಿರುತ್ತಾರೆ, ಅವರು ಒಂದು ಸನ್ನಿವೇಶದಲ್ಲಿರುತ್ತಾರೆ, ಅದು ಹೆಚ್ಚಾಗಿ ನಾಜೂಕಿಲ್ಲದ್ದಾಗಿರುತ್ತದೆ. ಆದರೆ ಅದು ಎಷ್ಟೊಂದು ಸಮಾಧಾನಪಡಿಸು–ವಂತಹದು, ಮಧುರವಾದದ್ದು, ಅದ್ಭುತವಾದದ್ದು ಆಗಿತ್ತು, ಈ ದರ್ಶನದಲ್ಲಿ– ಪ್ರತಿಯೊಂದು ವಸ್ತು–ವಿಷಯ ತನ್ನ ಬಗೆಯನ್ನು ಬಹಳ ಸ್ವಾಭಾವಿಕವಾಗಿ ಅಭಿವ್ಯಕ್ತ–ಗೊಳಿಸುತ್ತಿತ್ತು ಮತ್ತು ಬಹಳ ಸ್ಪಷ್ಟವಾದುದೇನೆಂದರೆ ಈ ದರ್ಶನದ ವೈಶಾಲ್ಯ ಮತ್ತು ಇಡಿಯಾಗಿರುವಿಕೆ ಇವುಗಳೊಂದಿಗೆ ಅಲ್ಲಿ ಅರ್ಥಮಾಡಿಕೊಳ್ಳುವ ಕರುಣೆಯೊಂದು ಬರುತ್ತದೆ– ಅದು ಕೆಳಮಟ್ಟದ್ದನ್ನು ಕುರಿತು ಉಚ್ಚಮಟ್ಟದ್ದು ತೋರಿಸುವ ಮರುಕವಲ್ಲ, ನಿಜವಾದ ದೈವೀ ಕರುಣೆ, ಅದು ಪ್ರತಿಯೊಬ್ಬನೂ ಅವನೇನಾಗಿರಬೇಕಾಗಿದ್ದಾನೋ ಅದಾಗಿದ್ದಾನೆ ಎಂದು ಅರಿತುಕೊಳ್ಳುವ ಇಡಿಯಾದ ಗ್ರಹಣಶಕ್ತಿ.

**CWM, 11/29** **– ಶ್ರೀಮಾತೆ**

*

## ದೈವೀ ಕರುಣೆ ಹಾಗೂ ದೈವೀ ಪ್ರೇಮ

ಆದರೆ ಆಗ, ಹಠಾತ್ತಾಗಿ, ದೈವೀ ಪ್ರೇಮದ ಈ ನಿಜವಾದ ದೈವೀ ಕರುಣೆ ಬಂದಾಗ ಮತ್ತು ಮನುಷ್ಯ ಅಷ್ಟೊಂದು ಭಯಹುಟ್ಟಿಸುವ, ವಿಪರೀತವಾಗಿರುವ,

ಅಸಂಬದ್ಧವಾಗಿರುವ ಈ ಎಲ್ಲ ವಸ್ತು–ವಿಷಯಗಳನ್ನು ನೋಡಿದಾಗ, ಎಲ್ಲ ಸತ್ತೆಗಳ ಮೇಲೆ, ವಸ್ತು–ವಿಷಯಗಳ ಮೇಲೆಯೂ ಕೂಡ ಇರುವ ಈ ದೊಡ್ಡ ನೋವನ್ನು ನೋಡಿದಾಗ, ಈ ಭೌತಿಕ ಸತ್ತೆಯಲ್ಲಿ ಸಮಾಧಾನಪಡಿಸಲು, ಚಿಕಿತ್ಸೆ ನೀಡಲು ಮತ್ತು ಅದನ್ನು ತೆಗೆದು ಹಾಕಲು ಅಭೀಪ್ಸೆ ಜನ್ಮ ತಾಳುತ್ತದೆ. ದೈವೀ ಪ್ರೇಮದಲ್ಲಿ, ಅದರ ದೈವೀ ಮೂಲದಲ್ಲಿ ಸತತ ದೈವೀ ಕೃಪೆಯ ಮಧ್ಯಸ್ಥಿಕೆ ಎಂದು ತರ್ಜುಮೆಗೊಳ್ಳುವ ಏನೋ ಒಂದಿದೆ: ಒಂದು ಶಕ್ತಿ, ಮಾಧುರ್ಯ, ಎಲ್ಲೆಡೆಯಲ್ಲಿ ಹರಡಿಕೊಂಡ ಸಾಂತ್ವನದ ಒಂದು ಕಂಪನ, ಇವುಗಳ ರೂಪದಲ್ಲಿರುತ್ತದೆ, ಆದರೆ ಜ್ಞಾನೋದಯ ಪಡೆದ ಪ್ರಜ್ಞೆ ಅದನ್ನು ನಿರ್ದೇಶಿಸಬಹುದು, ಕೆಲವು ಅಂಶಗಳ ಮೇಲೆ ಕೇಂದ್ರೀಕರಿಸಬಹುದು ಮತ್ತು ಅಲ್ಲಿಯೇ ಸ್ವತಃ ಮನುಷ್ಯ ಮಾಡಬಹುದಾದ ಯೋಚನೆಯ ನಿಜವಾದ ಉಪಯೋಗವನ್ನು ನೋಡಿದೆ: ಯೋಚನೆ ಈ ಕಂಪನವನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅವಶ್ಯವಿರುವಲ್ಲಿ ಕೊಂಡೊಯ್ಯುವುದಕ್ಕೆ ಒಂದು ವಾಹಿನಿಯಾಗುತ್ತದೆ. ಈ ಶಕ್ತಿ, ಮಾಧುರ್ಯದ ಈ ಕಂಪನ ನಿಶ್ಚಲ ರೂಪದಲ್ಲಿ ಇಡೀ ಜಗತ್ತಿನ ಮೇಲಿದೆ, ತನ್ನನ್ನು ಸ್ವೀಕರಿಸಲೆಂದು ಒತ್ತಡ ತರುತ್ತದೆ, ಆದರೆ ಅದು ಅವೈಯಕ್ತಿಕ ಕ್ರಿಯೆ ಮತ್ತು ಯೋಚನೆ, ಜ್ಞಾನೋದಯ ಪಡೆದ ಯೋಚನೆ, ಶರಣಾಗತವಾಗಿರುವ ಯೋಚನೆ, ಕೇವಲ ಉಪಕರಣ ರೂಪದ್ದಾಗಿರುವ ಯೋಚನೆ, ಅದು ಇನ್ನು ಮುಂದೆ ವಿಷಯಗಳನ್ನು ಪ್ರಾರಂಭಿಸುವ ಪ್ರಯತ್ನ ಮಾಡುವುದಿಲ್ಲ, ಅದು ಉಚ್ಚತರ ದೈವೀ ಪ್ರಜ್ಞೆಯಿಂದ ಚಲನೆಗೊಳಗಾಗುವುದರಲ್ಲಿ ತೃಪ್ತಿ ಕಂಡುಕೊಳ್ಳುತ್ತದೆ– ಸಂಪರ್ಕವೊಂದನ್ನು, ಸಂಬಂಧವೊಂದನ್ನು ಸ್ಥಾಪಿಸುವುದಕ್ಕೆ ಯೋಚನೆ ಮಧ್ಯಸ್ಥಿಕೆಯಾಗಿ ಸೇವೆ ಸಲ್ಲಿಸುತ್ತದೆ ಮತ್ತು ಅವಶ್ಯವಾದಲ್ಲೆಲ್ಲ, ನಿಶ್ಚಿತ ಅಂಶಗಳ ಮೇಲೆ ಈ ಅವೈಯಕ್ತಿಕ ದೈವೀ ಶಕ್ತಿ ಕಾರ್ಯ ಕೈಕೊಳ್ಳಲು ಶಕ್ತವಾಗುವಂತೆ ಮಾಡುತ್ತದೆ.

**CWM, 11/42–43** **– ಶ್ರೀಮಾತೆ**

*

## ದೈವೀ ಕರುಣೆ ಮತ್ತು ನ್ಯಾಯಕ್ರಮ (justice)

**ಪ್ರಶ್ನೆ:** *ಅನ್ಯಾಯವಿರುವಲ್ಲಿ ಭಗವಂತ ಶಿಕ್ಷೆ ನೀಡುತ್ತಾನೆಯೆ? ಯಾರನ್ನಾದರೂ ಶಿಕ್ಷೆಗೊಳಪಡಿಸುವುದು ಅವನಿಗೆ ಸಾಧ್ಯವಿದೆಯೆ?*

**ಶ್ರೀಮಾತೆ:** ಭಗವಂತ ವಿಷಯಗಳನ್ನು ಮನುಷ್ಯರು ನೋಡುವಂತೆ ನೋಡುವುದಿಲ್ಲ, ಯಾರಿಗಾದರೂ ಶಿಕ್ಷೆ ಕೊಡುವ ಇಲ್ಲವೆ ಬಹುಮಾನ ನೀಡುವ ಆವಶ್ಯಕತೆ ಅವನಿಗಿರುವುದಿಲ್ಲ. ಪ್ರತಿಯೊಂದು ಮತ್ತು ಎಲ್ಲ ಕ್ರಿಯೆ ತನ್ನಲ್ಲಿಯೇ ಅದರ ಫಲಗಳನ್ನು ಹಾಗೂ ಪರಿಣಾಮಗಳನ್ನು ಕೊಂಡೊಯ್ಯುತ್ತದೆ.

ಕ್ರಿಯೆಯ ಸ್ವಭಾವದ ಪ್ರಕಾರ ಅದು ಭಗವಂತನ ಹತ್ತಿರ ತರುತ್ತದೆ ಇಲ್ಲವೆ ಅವನಿಂದ ದೂರ ಕರೆದೊಯ್ಯುತ್ತದೆ ಮತ್ತು ಅದೇ ಪರಮೋಚ್ಚ ಪರಿಣಾಮ.

*

ಮನುಷ್ಯನ ನಿಯಮದ ಪ್ರಕಾರ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು, ಆದರೆ ಮಾನವ ನಿಯಮಕ್ಕಿಂತ ಹೆಚ್ಚು ವಿಧಿಬದ್ಧ (imperative) ನಿಯಮವಿದೆ ಅದು ಕರುಣೆ ಹಾಗೂ ದಯೆ ಇವುಗಳಿರುವ ದೈವೀ ನಿಯಮ. ಈ ನಿಯಮದ ಕಾರಣದಿಂದಾಗಿ ಜಗತ್ತು ತಾಳಿಕೊಳ್ಳಲು ಹಾಗೂ ದೈವೀ ಸತ್ಯ, ದೈವೀ ಪ್ರೇಮಗಳತ್ತ ಪ್ರಗತಿ ಸಾಧಿಸಲು ಶಕ್ತವಾಗಿದೆ.

**CWM, 14/24** **– ಶ್ರೀಮಾತೆ**

*

ದೈವೀ ಕರುಣೆ ತಿಂದು ಹಾಕಲ್ಪಟ್ಟವನನ್ನು ತಲುಪುತ್ತದೆಯಷ್ಟೇ ಅಲ್ಲ, ತಿಂದು ಹಾಕಿದವನನ್ನೂ ತಲುಪುತ್ತದೆ, ಪೀಡೆಗೊಳಗಾದವನನ್ನು ತಲುಪುತ್ತದೆಯಷ್ಟೇ ಅಲ್ಲ, ಆದರೆ ಪೀಡಕನನ್ನೂ ತಲುಪುತ್ತದೆ.

**CWM, 14/131** **– ಶ್ರೀಮಾತೆ**

*

. . . ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆಂದು ಜನರು ನಂಬುತ್ತಾರೆ, ಅದು ತೊಂದರೆಯಿಂದ ಹೊರಗೆ ಬರುವ ಒಂದು ರೀತಿ, ಆದರೆ ನಿಜವಾದ ರೀತಿ ಕರುಣೆ ಹಾಗೂ ದಯೆ ಇವುಗಳನ್ನು ತೋರಿಸುವುದಾಗಿದೆ. ಅದರರ್ಥ ನಿಜವಾದ ಹಾಗೂ ಮಿಥ್ಯೆಯದಾದ ಚಲನೆಗಳ ಬಗ್ಗೆ ಅಜ್ಞಾನಿಗಳಾಗಿರುತ್ತೀರಿ ಎಂದಲ್ಲ, ಆದರೆ ನಿಮ್ಮಲ್ಲಿ ಸ್ವಯಂಪ್ರೇರಿತ ದಯೆಯಿರುತ್ತದೆ, ಸ್ವಯಂಪ್ರೇರಿತವಾಗಿ, ಪ್ರಯತ್ನರಹಿತವಾಗಿ– ಎಲ್ಲ ಕಾಲದಲ್ಲಿ ಬಂದಿರುತ್ತದೆ, ಈ ರೀತಿಯಲ್ಲಿ ಪ್ರಗತಿ

ಸಾಧ್ಯವಾಗುತ್ತದೆಂಬ ದರ್ಶನ ಬಹಳ ಸ್ಪಷ್ಟವಾಗಿತ್ತು– ದೋಷಿಗಳನ್ನು ಯಾವಾಗಲೂ ಶಿಕ್ಷಿಸುತ್ತಿದ್ದರೆ, ಪ್ರಗತಿ ಸಾಧಿಸಲು ಯಾರೂ ಉಳಿದುಕೊಳ್ಳುತ್ತಿರಲಿಲ್ಲ.

**ಅನುಯಾಯಿಯೊಡನೆ ಮಾತುಕತೆ, ನವ್ಹೆಂಬರ 19, 1966** **– ಶ್ರೀಮಾತೆ**

*



ಸ್ವರ್ಗವನು ಕೆಳಗೆ ತರಲಿರುವ ಅವನು
ಮಣ್ಣಿನಲಿ ತಾನೇ ಕೆಳಗಿಳಿದು ಬರಬೇಕು
ಭೂತಲದ ಸ್ವಭಾವದ ಹೊರೆಯನವ ಹೊರಬೇಕು
ಸಂಕಟದ ಮಾರ್ಗದಲಿ ಹೆಜ್ಜೆ ಇರಿಸಬೇಕು.

ನನ್ನ ದೈವತ್ವಕ್ಕೆ ಒತ್ತಾಯತಂದು ನಾ ಕೆಳಗಿಳಿದು ಬಂದಿರುವೆ
ಈ ಕೊಳಕು ಭೂತಲದ ಮೇಲೆ,
ಜನ್ಮ ಮೃತ್ಯುಗಳ ದ್ವಾರಗಳ ನಡುವೆ
ಶ್ರಮಿಸುತಿಹ ಅಜ್ಞಾನಿ ಮಾನವನಾಗಿ ಬೆಳೆದು.

**CWSA, 2/534** **– ಶ್ರೀ ಅರವಿಂದರು**

*

**ಇಡಿಯಾದುದರ ಮೇಲೆ ಕಾರ್ಯಕೈಕೊಳ್ಳುವ ಪರಮೋಚ್ಚ ದೈವೀ ಕರುಣೆ**

ಕಳೆದ ಮೂರು ದಿನಗಳಲ್ಲಿ ನನಗೆ ಒಂದು ದರ್ಶನವಾಗಿತ್ತು, ಪ್ರತಿಯೊಂದು ನಿಮಿಷ ಮೂರ್ತರೂಪದ ದರ್ಶನ, ಅದರಲ್ಲಿ ಪರಮೋಚ್ಚ ದೈವೀ ಕರುಣೆ (ಅದನ್ನು ನಾನು ವೈಯಕ್ತಿಕವಾಗಿ ಪರಮೋಚ್ಚ ಪ್ರಭು ಎಂದು ಕರೆಯುವುದು ನನಗೆ ಹೆಚ್ಚು ಅನುಕೂಲವಾದದ್ದೆನಿಸುತ್ತದೆ ಎಂದು ಕಂಡುಕೊಂಡಿದ್ದೇನೆ), ಹೇಗೆ ಪ್ರತಿಯೊಂದು ಕ್ಷಣ ಅದು ನೀವು ಕೈಕೊಳ್ಳುವಂತೆ ಇಲ್ಲವೆ ಹೇಳುವಂತೆ ಇಲ್ಲವೆ ನೋಡುವಂತೆ ಇಲ್ಲವೆ ಪ್ರತಿಯೊಂದು ಈ ರೀತಿಯಲ್ಲಿ ಚಲಿಸುವಂತೆ ಮಾಡಲು ಅವಶ್ಯವಾದದ್ದು ಏನು ಎಂಬುದನ್ನು ನಿಖರವಾಗಿ ತಿಳಿದುಕೊಳ್ಳುವಂತೆ, ಮುಂದೆ ಚಲಿಸುವಂತೆ ಮಾಡುತ್ತದೆ. ವಿಶ್ವಂಭರ ಶಕ್ತಿಗಳನ್ನು ಅಸಂಖ್ಯಾತವಾದ ಶಾಖೋಪಶಾಖೆಗಳನ್ನಾಗಿ ಮಾಡಿ (ಸುತ್ತು ಹೊಡೆಸುತ್ತಿರುವುದರ ಸಂಜ್ಞೆ) ಅದಿನ್ನೂ ನೇರವಾದ, ಸರ್ವಸಾಮರ್ಥ್ಯವುಳ್ಳ, ಚೂರು ಚೂರು ಮಾಡುವ ನೇರ ದೈವೀ ಶಕ್ತಿಗಳ ಚಲನೆಯಲ್ಲ (ಪ್ರಕಾಶದ ಖಡ್ಗ ಮೇಲ್ಗಡೆಯಿಂದ ಕೆಳಗೆ ಬರುತ್ತಿರುವುದರ ಸಂಜ್ಞೆ), ಅದು ಹೀಗಿರುವ ಚಲನೆ (ಅದೇ ಸುತ್ತು ಹೊಡೆಯುವ ಸಂಜ್ಞೆ), ಆದರೆ ಅದ್ಭುತವಾದದ್ದು, ಅದ್ಭುತವಾಗಿ ಸೂಕ್ಷ್ಮವಾದದ್ದು, ಕೌಶಲ್ಯವುಳ್ಳದ್ದು, ಪ್ರತಿಯೊಂದನ್ನು ಗೌರವದಿಂದ ನೋಡುವಂತಹದು, ಆದರೆ ಪ್ರತಿಯೊಂದನ್ನು; ಗುರಿಯತ್ತ ಕರೆದೊಯ್ಯುವುದಕ್ಕಾಗಿ ಎಲ್ಲವನ್ನೂ ಉಪಯೋಗ ಮಾಡುವ ಚಲನೆ, ತಿಳಿಯಿತೆ, ದೋಷಗಳನ್ನೂ ಕೂಡ– ಅವು ದೋಷಗಳಲ್ಲ. ಏಕೆಂದರೆ ದೈವೀ ಪ್ರಜ್ಞೆ ಇರುವಾಗ ದೋಷವೊಂದನ್ನು ಅಜ್ಞಾನದಿಂದ ಮಾಡಲಾಗಿರುವುದಿಲ್ಲ, ಒಂದು ವಿಷಯವನ್ನು ಹೇಳಲಾಗಿರುತ್ತದೆ ಇಲ್ಲವೆ ಕೈಕೊಳ್ಳಲಾಗಿರುತ್ತದೆ, ಏಕೆಂದರೆ ಅದನ್ನು ಹೇಳಬೇಕಾದ ಇಲ್ಲವೆ ಕೈಕೊಳ್ಳಬೇಕಾದ ಆವಶ್ಯಕತೆ ಇರುತ್ತದೆ– ಅದು ತೋರಿಕೆಯಲ್ಲಿ ಒಂದು ಪ್ರಮಾದವಾಗಿರಬಹುದು, ಆದಾಗ್ಯೂ ಪ್ರತಿಯೊಂದೂ ಮುಂದೆ ಚಲಿಸುವಂತೆ

ಮಾಡುವುದಕ್ಕೆ ಅದು ನಿಖರವಾಗಿ ಅವಶ್ಯವಾದದ್ದಾಗಿರುತ್ತದೆ (ಅದೇ ಅಸಂಖ್ಯಾತ ಸುತ್ತಿನ ಸಂಜ್ಞೆ) ಅದು ಬಯಸಿದ ಗುರಿಯತ್ತ ಪ್ರಕಾಶಮಯವಾಗಿ ಚಲಿಸುವಂತೆ ಮಾಡುವುದಿರುತ್ತದೆ. ಅದು ಪರಿಪೂರ್ಣವಾಗಿ ಅದ್ಭುತವಾದದ್ದು! ಅದನ್ನು ಚಿಕ್ಕಪುಟ್ಟ ವಿವರಗಳಲ್ಲಿ ಮತ್ತು ಇಡಿಯಾದುದರಲ್ಲಿ ನೋಡಲಾಗುತ್ತದೆ. ದೈವೀ ಪ್ರಜ್ಞೆಯ ಈ ಅದ್ಭುತ ಕೈಕೊಳ್ಳಬೇಕಾದುದನ್ನು ಪ್ರತಿಯೊಬ್ಬನು ಕೈಕೊಳ್ಳುವಂತೆ ಮಾಡುತ್ತದೆ, ಪ್ರತಿಯೊಂದನ್ನು ಅದರದರ ಸ್ಥಾನದಲ್ಲಿರಿಸುತ್ತದೆ, ಪ್ರತಿಯೊಂದರ ಗೋಜಲನ್ನು ಬಿಡಿಸುತ್ತದೆ; ನಮ್ಮ ಮಂದಬುದ್ಧಿ, ಪರಿಪೂರ್ಣವಾದ ಅಜ್ಞಾನ ಹಾಗೂ ಹೆಡ್ಡತನ ಇವು ತಪ್ಪುಗಳನ್ನು ಹಾಗೂ ದೋಷಗಳನ್ನು ನಾವು ನಂಬುವಂತೆ ಮಾಡುತ್ತವೆ. ಪ್ರತಿಯೊಬ್ಬನೂ ಪರಿಹರಿಸಬೇಕಾದ ಸಮಸ್ಯೆಯಾಗಿರುತ್ತಾನೆ, ಹಾಗಾಗಿ ಆ ಎಲ್ಲ ಸಮಸ್ಯೆಗಳು ಒಂದರೊಳಗೊಂದು ನುಗ್ಗುತ್ತವೆ ಮತ್ತು ಈ ಪ್ರಸಿದ್ಧ ದೈವೀ ಸತ್ಯದತ್ತ, ನಿಖರವಾಗಿ, ಇಡಿಯಾದುದನ್ನು ಕರೆದೊಯ್ಯಬೇಕು. ನಿಮ್ಮ ಸುತ್ತ ಎಲ್ಲ ಚಿಕ್ಕ ಪುಟ್ಟ ವಸ್ತು–ವಿಷಯಗಳಿರುವ, ಎಲ್ಲ ಚಿಕ್ಕ ಜನರಿರುವ, ಎಲ್ಲ ಚಿಕ್ಕ ಪರಿಸ್ಥಿತಿಗಳಿರುವ ಈ ಅದ್ಭುತ ಸಂಘಟನೆಯೊಡನೆ ದಿವ್ಯಾನಂದವಿರುವ ಮೆಚ್ಚುಗೆಯಿಂದ ಹಲವಾರು ಗಂಟೆಗಳನ್ನು ಕಳೆದಿದ್ದೇನೆ. ಅದು ನಿಜವಾಗಿಯೂ ಅದ್ಭುತವಾದದ್ದು.

ಮತ್ತು ನಂತರ, ಈ ಏನನ್ನೂ ತಿಳಿದುಕೊಳ್ಳದ, ವಿಪರೀತ ಅಹಂಕಾರಿಯಾದ ಮನಸ್ಸು ತನ್ನ ಸರ್ವಸಮರ್ಥವಾದ ಜ್ಞಾನದಿಂದ ದೃಢೀಕರಿಸುತ್ತದೆ, ಓಹ್, ಅದು ಎಷ್ಟೊಂದು ಹಾಸ್ಯಮಯ (comical)ವಾದದ್ದು!

ಅದು ಎಲ್ಲ ಸಾಧ್ಯತೆಗಳ ಹಾಗೂ ಅಸಾಧ್ಯತೆಗಳ, ಎಲ್ಲ ಕ್ಷಮತೆಗಳ ಹಾಗೂ ಕ್ಷಮತೆಯಿಲ್ಲದವುಗಳ ಗರಿಷ್ಠ ಮಟ್ಟದ ಉಪಯೋಗ, ಗರಿಷ್ಠ ಸಾಮರ್ಥ್ಯ ಹಾಗೂ ದೈವೀ ಕರುಣೆ ಇವುಗಳಲ್ಲಿ ಗರಿಷ್ಠ ಮಟ್ಟದ ಉಪಯೋಗ ಮತ್ತು ಹಾಗೆಯೇ ಒಂದು ಮುಗುಳ್ನಗು. ವಿನೋದದ ಭಾವವಿರುವ ಮುಗುಳ್ನಗು, ಓಹ್! ಅದೆಂತಹ ಉಪಕಾರಿ ಬುದ್ಧಿಯ ವ್ಯಂಗ್ಯ, ಎಷ್ಟೊಂದು ಕರುಣೆಯಿಂದ ತುಂಬಿಕೊಂಡದ್ದು, ಎಷ್ಟೊಂದು ಅದ್ಭುತವಾದದ್ದು ಮತ್ತು ಈ ವಿಪರೀತ ಅಹಂಕಾರಿಯಾದ ಮನಸ್ಸು. ನಿಜವಾಗಿ ಕಲ್ಪನಾತಿರೇಕದ ಗೋಚರ ಸಂಗತಿಯಾಗಿರುತ್ತದೆ, ಅದು ತನಗೆ ತಿಳಿಯದೆ ಇದ್ದುದರ ಮೇಲೆ ತೀರ್ಮಾನಕೊಡುತ್ತ, ತನಗೆ ನೋಡಲು ಸಾಧ್ಯವಿಲ್ಲದುದನ್ನು ಕುರಿತು ನಿರ್ಣಯ ಕೈಕೊಳ್ಳುತ್ತ ಕಾಲ ಕಳೆಯುತ್ತದೆ!

ನಂತರ ಇತರ ವಿಷಯಗಳ ದರ್ಶನವಿತ್ತು ಮತ್ತು ಆ ಸಂಗತಿಗಳಿಗೆ ಹೆಚ್ಚಿನ ಮಹತ್ವವಿದ್ದು, ಕಾಲದ ಮತ್ತು ಗಂಭೀರ ಮನೋವೃತ್ತಿಯಿಂದ ಅವುಗಳನ್ನು ಗಂಭೀರವಾಗಿ ತೆಗೆದುಕೊಳ್ಳಲಾಗುತ್ತಿದ್ದ ಕಾಲದ ಸ್ಮರಣೆಯಿತ್ತು– ಅದು ಇಡಿಯಾದ ನೈತಿಕ ಮನೋವೃತ್ತಿ. ಅದೂ ಕೂಡ ಮೋಜಿನದಾಗಿತ್ತು.

**ಅನುಯಾಯಿಯೊಡನೆ ಮಾತುಕತೆ, ಮಾರ್ಚ 22, 1967 – ಶ್ರೀಮಾತೆ**

*

## ದೈವೀ ಕರುಣೆ ಮತ್ತು ವಿನಾಶ

ದೈವೀ ಕರುಣೆ ಭಿನ್ನವಾದ ಏನೋ ಒಂದು ವಿಷಯ. ಅದು ಮೇಲ್ಗಡೆಯಿಂದ ಬರುತ್ತದೆ. ಅದು ಮನುಷ್ಯನ ವೇದನೆ ಹಾಗೂ ಪೃಥ್ವಿಯ ಮೇಲಿರುವ ವೇದನೆ ಇವುಗಳನ್ನು ಕುರಿತು ಇರುವ ಸಹಾನುಭೂತಿಯ ಸ್ಥಿತಿ ಮತ್ತು ಮನುಷ್ಯನಿಗೆ ಸಾಧ್ಯವಿದ್ದಷ್ಟು ಹಾಗೂ ತನ್ನದೇ ರೀತಿಯಲ್ಲಿ ಸಹಾಯ ಸಲ್ಲಿಸುವ ವಿಚಾರ ಅದಕ್ಕೆ ಇದೆ, ಅದು ಮರುಕದ ಹಾಗಿರುವುದಿಲ್ಲ. ಅದು ಮೇಲ್ಗಡೆಯಿಂದ ಮಾನವ ವೇದನೆಯ ಮೇಲೆ ವಿಚಲಿತರಾಗದೆ ದೃಷ್ಟಿ ಹರಿಸುವ ದೇವತೆಗಳ ಹಾಗಿರುತ್ತದೆ. ದೈವೀ ಕರುಣೆ ನಾಶವನ್ನೂ ಕೂಡ ಮಾಡಬಲ್ಲದು, ಅದು ದಯೆಯಿಂದ ದುರ್ಗೆ ವಿರೋಧೀ ಸತ್ತೆಗಳಾದ ರಾಕ್ಷಸರನ್ನು ನಾಶ ಮಾಡುವ ರೀತಿಯದಾಗಿರುತ್ತದೆ. ಅಲ್ಲಿ ಮರುಕದ ಪ್ರಶ್ನೆ ಇರುವುದಿಲ್ಲ. ಬಹಳಷ್ಟು ಸಲ ಆ ರಾಕ್ಷಸ ನಿಮ್ಮ ಬಳಿ ಬಂದು ತನ್ನನ್ನು ರಕ್ಷಿಸೆಂದು ನಿಮ್ಮನ್ನು ಕೇಳಬಹುದು, ತನ್ನನ್ನು ಸಾಮರ್ಥ್ಯದಿಂದ ನಿಮ್ಮ ಆಧ್ಯಾತ್ಮಿಕ ಪರಿವರ್ತನೆಗೊಳಪಡಿಸೆಂದೂ ಕೂಡ ಕೇಳಬಹುದು– ಇದು ಶ್ರೀಮಾತೆಯವರನ್ನು ಕೆಲವು ಸತ್ತೆಗಳು ಕೇಳಿಕೊಂಡ ರೀತಿಯದಾಗಿರುತ್ತದೆ– ನೀವು ಅದನ್ನು ಕೈಕೊಳ್ಳಲು ಪ್ರಯತ್ನಿಸಿದರೆ, ಎಲ್ಲ ಸಾಮರ್ಥ್ಯ ರಾಕ್ಷಸನತ್ತ ಹೋಗುತ್ತದೆ ಮತ್ತು ನೀವು ಸಾಮರ್ಥ್ಯಹೀನರಾಗಬಹುದು. ಈ ಪ್ರಾಣಿಕ ಸತ್ತೆಗಳು ಮನುಷ್ಯರಲ್ಲಿ ಅವತಾರ ತಾಳಿದಾಗ ಅವರನ್ನು ಹತ್ಯೆ ಮಾಡದಂತೆ ಕರುಣೆ ನಿಮ್ಮನ್ನು ತಡೆಯಲಾರದು.

**ಶ್ರೀ ಅರವಿಂದರೊಡನೆ ಸಾಯಂಕಾಲದ ಮಾತುಕತೆಗಳು – ಶ್ರೀ ಅರವಿಂದರು**

*

# ಎಂದೆಂದಿಗೂ ಕರುಣೆ ತೋರುವ ದೈವೀ ಪ್ರಭು

## ನೀನು ತಿಳಿದುಕೊಳ್ಳಬೇಕಾದುದೆಲ್ಲವೂ ಇದೇ ಆಗಿದೆ

ಯಾರಾದರೂ ಎಂದಾದರೂ ಅರ್ಹರಾಗಿದ್ದಾರೆಯೆ, ಆ ವಿಷಯ ಕುರಿತು ಹೇಳುವುದಾದರೆ ಅರ್ಹತೆ ಮತ್ತು ಅನರ್ಹತೆ ಇವು ಕೇವಲ ಮಾತನಾಡುವ ರೀತಿ, (ಆಧ್ಯಾತ್ಮಿಕ ವಿಷಯಗಳಿಗೆ ಸಂಬಂಧಿಸಿದ ಹಾಗೆ) ಮನುಷ್ಯ ಅವನ ಬಾಹ್ಯ ಸ್ವಭಾವದಲ್ಲಿ ಸರಿ ಹೊಂದದೆ ಇರುವವನು ಮತ್ತು ಅನರ್ಹನು ಆಗಿರುತ್ತಾನೆ, ಆದರೆ ಅಂತರಂಗದಲ್ಲಿ ಆತ್ಮವಿದೆ ಮತ್ತು ಮೇಲ್ಗಡೆ ದೈವೀ ಕೃಪೆಯಿದೆ.

"ನಿನಗೆ ತಿಳಿದಿರುವ ಹಾಗೂ ಅವಶ್ಯವಾಗಿ ತಿಳಿದುಕೊಳ್ಳಬೇಕಾದ ಎಲ್ಲವೂ ಇದಿಷ್ಟೇ ಆಗಿದೆ", ಮತ್ತು ನಿನಗೆ ತಿಳಿದಿರದಿದ್ದರೆ ಸರಿ, ಆಗಲೂ ಕೂಡ ಯಾವುದೋ ರೀತಿಯಲ್ಲಿ ಮಾರ್ಗದ ಮೇಲೆ ಎಡವಿ ಬಂದಿರುವಿ, ಅಲ್ಲಿ ಜ್ಞಾನಕ್ಕಾಗಿ ಎಚ್ಚತ್ತುಕೊಳ್ಳುವವರೆಗೆ ಆ ಮಾರ್ಗದೊಂದಿಗೆ ಸಾಕಷ್ಟು ದೂರ ಸಾಗಿ ಬಂದಿಳಿಯುವುದಕ್ಕೆ ಅಲ್ಲಿ ಉಳಿದುಕೊಳ್ಳಬೇಕು. ತಥಾಸ್ತು.

**ನಿರೋದಬರಣನೊಂದಿಗೆ ಪತ್ರವ್ಯವಹಾರ, P.461** **– ಶ್ರೀ ಅರವಿಂದರು**

*

**ಪ್ರಶ್ನೆ:** *ನೀವು ವಿರೋಧಾಭಾಸಗಳೊಂದಿಗೆ ಹಾಗೂ ಪರಸ್ಪರ ವಿರೋಧೀ ಹೇಳಿಕೆಗಳೊಂದಿಗೆ ಬಹಳಷ್ಟು ವ್ಯವಹರಿಸುತ್ತೀರಿ, ಅದನ್ನು ತಿಳಿದುಕೊಳ್ಳುವುದು ನನ್ನ ಚಿಕ್ಕ ಮಿದುಳಿಗೆ ಕಷ್ಟವಾಗಿದೆ. ಈ ಎರಡು ಹೇಳಿಕೆಗಳನ್ನು ಹೋಲಿಸಿ ನೋಡಿರಿ, "ಅಂತರಂಗದಲ್ಲಿ ಆತ್ಮವಿದೆ, ಮೇಲ್ಗಡೆ ದೈವೀ ಕೃಪೆ ಇದೆ"* ಮತ್ತು *"ನೀವು ವಿಷಯಗಳು ಸಂಭವಿಸಲಿ ಎಂದು ಬಯಸಿದರೆ, ಅವು ಸಂಭವಿಸಲೇ–ಬೇಕೆಂಬುದಕ್ಕೆ ಕಾರಣವಿರುವುದಿಲ್ಲ."* ಇವು *ಪರಸ್ಪರ ವಿರುದ್ಧವಾಗಿರುವುದಿಲ್ಲವೆ?*

**ಶ್ರೀ ಅ:** ಅದು ಹೇಗೆ ಪರಸ್ಪರ ವಿರುದ್ಧವಾದ ವಿಚಾರ ಎಂಬುದು ನನಗೆ ಕಂಡುಬರುತ್ತಿಲ್ಲ. ಸ್ವಾಭಾವಿಕವಾಗಿ ಆತ್ಮ ಮತ್ತು ದೈವೀ ಕೃಪೆ ಇವು ಎರಡು ತುದಿಗಳು. ಆದರೆ ಅದರರ್ಥ ಅವೆರಡರ ನಡುವೆ ಏನೂ ಇರಬಾರದು ಎಂದು ಅರ್ಥ ಮಾಡಬಾರದು. ನೀನು ಆ ವಾಕ್ಯವನ್ನು ವಿವರಿಸಿ ನೋಡಿರುವ ರೀತಿ ಹೀಗಿದೆ: "ಅಂತರಂಗದಲ್ಲಿ ಕಾಲಹರಣ ಮಾಡುವ ಆತ್ಮವಿದೆ ಮತ್ತು ಮೇಲ್ಗಡೆ

ನಿದ್ರೆ ಮಾಡುವ ದೈವೀ ಕೃಪೆ ಇದೆ. ದೈವೀ ಕೃಪೆ ಎಚ್ಚತ್ತುಕೊಂಡಾಗ ಆತ್ಮ ಇನ್ನು ಮುಂದೆ ಕಾಲಹರಣ ಮಾಡುವುದಿಲ್ಲ ಏಕೆಂದರೆ ಅದನ್ನು ಅಪರಿಸಲಾಗುವುದು." ಸಹಜವಾಗಿ ಅದು ಆ ರೀತಿ ಸಂಭವಿಸಬಹುದು, ಆದರೆ ನಾನು ಹೇಳಿದ ಹಾಗೆ ಅದಾಗುವುದಕ್ಕೆ ಕಾರಣವಿರುವುದಿಲ್ಲ. ಸಾಧಾರಣವಾಗಿ ಆತ್ಮ ಎಚ್ಚತ್ತುಕೊಳ್ಳುತ್ತದೆ, ಕಣ್ಣುಗಳನ್ನು ತಿಕ್ಕಿ ನೋಡಿ ಹೇಳುತ್ತದೆ, "ಹಲೋ ಆ ದೈವೀ ಕೃಪೆ ಎಲ್ಲಿದೆ?" ಮತ್ತು ಅದಕ್ಕಾಗಿ ಸುತ್ತಮುತ್ತ ತಡಕಾಡಲು ಮತ್ತು ದೈವೀ ಕೃಪೆ ಕುರಿತು ಹೇಳಲಾದ ವಿಷಯಗಳ ಇನ್ನೊಂದು ತುದಿಯತ್ತ ದೈವೀ ಕೃಪೆ ಇದೆ ಎಂಬ ಭರವಸೆಯಿಂದ ವಿಷಯಗಳನ್ನು ಎಳೆದಾಡಲು ಪ್ರಾರಂಭಿಸುತ್ತದೆ. ಕೊನೆಗೆ ಆಕಸ್ಮಿಕವಾಗಿ ಯಾವುದನ್ನೋ ಎಳೆಯುತ್ತದೆ ಮತ್ತು ದೈವೀ ಕೃಪೆ ಪೂರ್ತಿ ಓರೆಯಾಗಿ ಕೆಳಗೆ ಉರುಳುತ್ತ ಬರುತ್ತದೆ, ಎಲ್ಲಿಂದ ಎಂಬುದು ದೇವರಿಗೇ ಗೊತ್ತು. ಅದು ರೂಢಿಯಲ್ಲಿರುವ ಶೈಲಿ– ಆದರೆ ಬೇರೆ ರೀತಿಯವೂ ಇವೆ.

**ನಿರೋದಬರಣನೊಂದಿಗೆ ಪತ್ರವ್ಯವಹಾರ, P.579** **– ಶ್ರೀ ಅರವಿಂದರು**

*

**ಅತಿ ಹೆಚ್ಚು ಉತ್ತೇಜನ ನೀಡುವ ಸೂತ್ರ**

**ಪ್ರಶ್ನೆ:** *ನಿಮ್ಮ ಪತ್ರದಲ್ಲಿ ನಾನು ಕಂಡುಕೊಂಡ ಅತಿ ಹೆಚ್ಚು ಉತ್ತೇಜನ ನೀಡುವ ಸೂತ್ರ: "ಅಂತರಂಗದಲ್ಲಿ ಆತ್ಮವಿದೆ, ಮೇಲ್ಗಡೆ ದೈವೀಕೃಪೆಯಿದೆ"– ಅದನ್ನು ಕುರಿತು ನೀವು ಹೇಳುವುದೇನೆಂದರೆ "ನೀನು ತಿಳಿದುಕೊಂಡ ಹಾಗೂ ತಿಳಿದುಕೊಳ್ಳಬೇಕಾದ ಎಲ್ಲವೂ ಇದಿಷ್ಟೇ ಆಗಿದೆ." ನಿಜವಾಗಿ ಅದಷ್ಟೇ ಆಗಿದೆಯೆ?*

**ಶ್ರೀ ಅ:** ಹೌದು, ಆಧ್ಯಾತ್ಮಿಕ ಜೀವನವನ್ನು ಬಯಸುವವರಿಗೆ ಅದು ಸಾಕಷ್ಟಾಗುತ್ತದೆ.

**ಪ್ರಶ್ನೆ:** *"ದೈವೀ ಕೃಪೆಯಿರುವ ಸ್ಥಿತಿ" ಎಂದು ಕರೆಯಲಾದುದರತ್ತ ಕೇವಲ ಅಂಟಿ–ಕೊಳ್ಳುವುದರಿಂದ ಇಲ್ಲವೆ ಅಂತರಂಗದಲ್ಲಿ ಆತ್ಮವಿದೆ ಎಂಬ ಕಾರಣದಿಂದ ಯಾರಾದರೂ ಅದನ್ನು ತಲುಪುವುದು ಸಾಧ್ಯವಿದೆಯೆ?*

**ಶ್ರೀ ಅ:** ಮನುಷ್ಯನಿಗೆ ಅದು ಸಾಧ್ಯವಿದೆ, ಅದನ್ನು ಬಹಳಷ್ಟು ಜನರು ಕೈಕೊಂಡಿದ್ದಾರೆ.

**ಪ್ರಶ್ನೆ:** *ಆದರೆ ಪ್ರತಿಯೊಬ್ಬನಲ್ಲಿ ಆತ್ಮವಿದೆ, ಪ್ರತಿಯೊಬ್ಬನ ಮೇಲೆ ದೈವೀಕೃಪೆ ಇದೆ. ಜನರು ಭಗವಂತನತ್ತ ತಮ್ಮ ಬೆನ್ನನ್ನು ತಿರುಗಿಸಿರುವುದೇಕೆ?*

**ಶ್ರೀ ಅ:** ರಜೋಗುಣದ ಅಹಂಕಾರ, ಮಹತ್ವಾಕಾಂಕ್ಷೆ, ಜಂಬ ಇವು ಅದಕ್ಕೆ ಕಾರಣಗಳಾಗಿದ್ದವು. ಅವರು ತಮ್ಮದೇ ಪ್ರಯತ್ನಗಳನ್ನು ನಂಬಿಕೊಂಡಿದ್ದರು, ದೈವೀಕೃಪೆಯನ್ನಲ್ಲ.

**ಪ್ರಶ್ನೆ:** *ದೈವೀಕೃಪೆಯೇ ಎಲ್ಲವನ್ನೂ ಕೈಕೊಂಡಿತು ಎಂಬುದನ್ನು ನಾನು ಕೇಳಿಲ್ಲ, ಮತ್ತು ಅದು ಹಾಗೆ ಮಾಡುತ್ತದೆಂದು ತೋರಿಬರುವುದಿಲ್ಲ. ಅದು ಹಾಗೆ ಮಾಡಿದಲ್ಲಿ ಯಾರಾದರೂ ಹಿಂದಿನ ಜನ್ಮದಲ್ಲಿ ಸಾಧನೆಯನ್ನು ಮಾಡಿರಲಿಲ್ಲ ಎಂಬುದನ್ನು ಹೇಗೆ ತಿಳಿಯಲಾದೀತು. ಇದನ್ನು ನಿರಾಕರಿಸಲಾರಿರಿ.*

**ಶ್ರೀ ಅ:** ಆಧ್ಯಾತ್ಮಿಕ ಇತಿಹಾಸದಲ್ಲಿ ಹಲವಾರು ಉದಾಹರಣೆಗಳಿರುವುದನ್ನು ನಾನು ಎತ್ತಿ ತೋರಿಸಬಹುದು, ಅದನ್ನು ಪ್ರಸಿದ್ಧರಾದ ಜಗಾಯಿ ಮತ್ತು ಮಧಾಯಿ ಅವರ ಕತೆಯಿಂದ ಪ್ರಾರಂಭಿಸಬಹುದು. ಆದರೆ 2+2=4 ಎಂದು ಒಪ್ಪಿಕೊಳ್ಳಲಾರದ ಮಿದುಳಿಗೆ ಅದನ್ನು ಹೇಳಿ ಪ್ರಯೋಜನವಿಲ್ಲ. ನೀನು ಅದನ್ನು ದೃಢೀಕರಿಸಲಾರೆ, ಅದನ್ನು ಮಾಡಲು ನಿನಗೆ ಸಾಧ್ಯವಿದೆಯೇ?

**ಪ್ರಶ್ನೆ:** *ಸರಳವಾಗಿ ಅಂಟಿಕೊಳ್ಳುವುದು ಸಾಕಾಗದು. ಅದು ಹಾಗಿದ್ದರೆ ಆಶ್ರಮದ ಬೆಕ್ಕು ಬುಶಿ (Bushy)ಗೂ ಒಂದು ಅವಕಾಶವಿರುತ್ತಿತ್ತು.*

**ಶ್ರೀ ಅ:** ಸಹಜವಾಗಿ ಅದಕ್ಕಿದೆ– ಮುಂದಿನ ಜೀವನದಲ್ಲಿ ಎಲ್ಲವೂ ಅದರ ಪರವಾಗಿರುವ ಹೊಸ ಜನ್ಮದ ದರ್ಜೆಗೇರುವ ಅವಕಾಶವಿದೆ.

**ಪ್ರಶ್ನೆ:** *ನಾವು ಸಾಧನೆಯಲ್ಲಿ ಅತ್ಯಂತ ಶ್ರಮ ಸಾಧ್ಯವಾದ **(Herculean)** ಪ್ರಯತ್ನ ಮಾಡಬೇಕಾದುದರಿಂದ ನಾನು ಹೆಚ್ಚಾಗಿ ದೈವೀಕೃಪೆಯನ್ನು ನಂಬುವುದಕ್ಕೆ ಹಿಂದು ಮುಂದು ನೋಡುತ್ತಿದ್ದೇನೆ. ದೈವೀಕೃಪೆ ಯಾವ ಷರತ್ತು ಇಲ್ಲದೆ ಕೆಳಗಿಳಿದು ಬರುವ ಏನೋ ಒಂದಲ್ಲವೆ?*

**ಶ್ರೀ ಅ:** ಅದು ಷರತ್ತುಗಳ ಮೇಲೆ ಅವಲಂಬಿಸಿರುವುದಿಲ್ಲ– ಅದು ಯಾವ ಷರತ್ತೂ ಇಲ್ಲದೆ ಯಾವುದೇ ಇಲ್ಲವೆ ಪ್ರತಿಯೊಬ್ಬ ಸಾಧಕನಿಗೆ ಶರಣಾಗುವುದು ಹೆಚ್ಚಾಗಿ ಭಿನ್ನ ವಿಷಯವಾಗಿರುತ್ತದೆ.

**ಪ್ರಶ್ನೆ:** *ಶ್ರೀ ರಾಮಕೃಷ್ಣರ ಬೆಕ್ಕಿನ ಮರಿ ರೀತಿಯ ಸಾಧಕ ಶರಣಾಗತಿಯ ನಿರ್ಧಾರಕ ಚಲನೆಯನ್ನು ಮಾಡಬೇಕು ಮತ್ತು ತನ್ನ ಸತ್ತೆಯ ಉಳಿದ ಭಾಗ*

*ವಿಧೇಯವಾಗಿರುವಂತೆ ಒತ್ತಾಯ ಪಡಿಸಬೇಕು. ಸ್ವಾಮಿ, ಅದು ನನಗೆ ಪೃಥ್ವಿಯ ಮೇಲೆ ಅತ್ಯಂತ ಕಠಿಣವಾದದ್ದು ಎಂದು ಹೇಳಲು ಬಯಸುತ್ತೇನೆ.*

**ಶ್ರೀ ಅ:** ಬೆಕ್ಕಿನ ಮರಿ ಹಾಗಿತ್ತೆಂದು ನಾನೆಂದೂ ಕೇಳಿರಲಿಲ್ಲ– ಅದು ಹಾಗಿದ್ದರೆ ಅದು ಬೆಕ್ಕಿನ ಮರಿಯಾಗಿರುವುದಿಲ್ಲ. (ಅದನ್ನು ಕೈಕೊಳ್ಳುವ ಬೆಕ್ಕಿನ ಮರಿಯಂತಾಗಲು ಪ್ರಯತ್ನಿಸುವ ಮಂಗನ ಮರಿ ಅದಾಗಿರುತ್ತದೆ.) ಆದರೆ ಸ್ಪಷ್ಟವಾಗಿ ನಿನ್ನಲ್ಲಿ ಆಧ್ಯಾತ್ಮಿಕ ವಿಷಯಗಳನ್ನು ಕುರಿತು ಎಷ್ಟೊಂದು ಶ್ರೇಷ್ಠ ಜ್ಞಾನವಿದೆಯೆಂದರೆ (ನನ್ನದನ್ನೂ, ಶ್ರೀ ರಾಮಕೃಷ್ಣರದನ್ನೂ ಮೀರಿ ಹೋಗುವ) ನಾನು ಕೇವಲ ತಲೆಬಾಗಬೇಕು ಮತ್ತು ವಿನಯಪೂರ್ವಕವಾಗಿ ಕಡಿಮೆ ಜ್ಞಾನವಿದ್ದವರತ್ತ ಸಾಗಿ ಹೋಗಬೇಕು.

**ಪ್ರಶ್ನೆ:** *ನಿಜವಾಗಿ ನಿಮ್ಮ ಯೋಗ ಒಂದು ಒಗಟಿನಂತಿದೆ ಮತ್ತು ನಾನು ಅದರ ತಲೆಬುಡಗಳನ್ನು ಹಿಡಿದುಕೊಳ್ಳಲು ಶಕ್ತನಾಗಿಲ್ಲ., ಬಹುಶಃ ಅದು ಎಂದಿಗೂ ಸಾಧ್ಯವಾಗಲಿಕ್ಕಿಲ್ಲ.*

**ಶ್ರೀ ಅ:** ನೀನು ಅದರ ತಲೆಯನ್ನಾಗಲಿ, ಬುಡವನ್ನಾಗಲಿ ಹಿಡಿದುಕೊಳ್ಳುವ ಆವಶ್ಯಕತೆ ಇಲ್ಲ. ಅದು ನಿನ್ನ ತಲೆಯನ್ನಾಗಲಿ ಇಲ್ಲವೆ ಬುಡವನ್ನಾಗಲಿ ಇಲ್ಲವೆ ಅವರೆಡನ್ನೂ ಹಿಡಿದುಕೊಳ್ಳಲು ಅನುವು ಮಾಡಿಕೊಟ್ಟರೆ ಅದು ಸಾಕಾಗುತ್ತದೆ.

**ನಿರೋದಬರಣ ಅವರೊಂದಿಗೆ ಪತ್ರವ್ಯವಹಾರ, ಪು:464–66 – ಶ್ರೀ ಅರವಿಂದರು**

*

## ದೈವೀ ಮಾತೆಯ ದೈವೀಕರುಣೆ ಮತ್ತು ಅತ್ಯಂತ ಒಳ್ಳೆಯ ಮನೋಭಾವ

ಇದೆಲ್ಲ (ಜಗತ್ತು, ಆಶ್ರಮ) ವನ್ನು ನನ್ನ ಪ್ರಜ್ಞೆಯಲ್ಲಿ ಒಂದು ಸಾರಭೂತ ಕರುಣೆಯಿಂದ ಹಿಡಿದುಕೊಳ್ಳಲಾಗಿರುತ್ತದೆ, ಅದನ್ನು ಎಲ್ಲ ವಿಷಯಗಳಿಗೆ, ಎಲ್ಲ ತೊಂದರೆಗಳಿಗೆ, ಎಲ್ಲ ಅಡೆತಡೆಗಳಿಗೆ ಸಮನಾಗಿ ಅನ್ವಯಿಸಲಾಗಿರುತ್ತದೆ. ನಿಮಗೆ ತಿಳಿದ ಹಾಗೆ ನನಗೆ ಡಝನ್‌ಗಟ್ಟಲೆ ಪತ್ರಗಳು ಬರುತ್ತವೆ ಮತ್ತು ಪ್ರತಿಯೊಬ್ಬ ವ್ಯಕ್ತಿ ತನ್ನದೇ ದುಃಖ ಇಲ್ಲವೆ ಸಮಸ್ಯೆಯೊಂದಿಗೆ ಬರುತ್ತಾನೆ– ಅವು ಆಂತರಿಕ–ವಾಗಿರಬಹುದು ಇಲ್ಲವೆ ಬಾಹ್ಯದಲ್ಲಿರಬಹುದು (ಚಿಕ್ಕ ಮೊಡವೆ ಪರ್ವತಾಕಾರ ತಾಳುತ್ತದೆ.) ಜನರು ನನ್ನೆಡೆಗೆ ಬಂದಾಗ ನನ್ನ ಆಂತರಿಕ ಪ್ರಜ್ಞೆ ಯಾವಾಗಲೂ ಒಂದೇ ರೀತಿಯಲ್ಲಿ, ಎಲ್ಲರಿಗೂ ಒಂದು ಬಗೆಯ ಸಮತೆ ಹಾಗೂ

ಕರುಣೆಯೊಂದಿಗೆ ಪ್ರತಿಸ್ಪಂದಿಸುತ್ತದೆ. ಆದರೆ ಜನರು ನನ್ನ ಬಳಿ ಮಾತನಾಡುತ್ತಿದ್ದಾಗ ಇಲ್ಲವೆ ನಾನೊಂದು ಪತ್ರವನ್ನು ಓದುತ್ತಿದ್ದಾಗ ಮತ್ತು ಅವರು ತಮ್ಮ ದುಃಖಗಳ ಮೇಲೆ ಕಾರ್ಯ ಮಾಡುವುದಕ್ಕಾಗಿ ನನ್ನ ದೇಹಕ್ಕೆ ಕರೆಕೊಟ್ಟಾಗ "ಜನರು ವಿಷಯಗಳನ್ನು ಹಾಗೇಕೆ ತೆಗೆದುಕೊಳ್ಳುತ್ತಾರೆ!" ಅವರು ವಿಷಯಗಳು ಅತಿ ಹೆಚ್ಚಿನ ರೀತಿಯಲ್ಲಿ ಕಠಿಣವಾದವುಗಳನ್ನಾಗಿ ಮಾಡುತ್ತಾರೆ ಎನ್ನುವ ರೀತಿಯ ಭಾವನೆ ತಂದುಕೊಳ್ಳುತ್ತದೆ. ದೇಹ ಅರ್ಥಮಾಡಿಕೊಳ್ಳುತ್ತದೆ. ಅವರು ಅತಿ ಕನಿಷ್ಠ ಮಟ್ಟದ ತೊಂದರೆಯನ್ನು ತೆಗೆದುಕೊಳ್ಳುವ ರೀತಿ ಅಷ್ಟೊಂದು ಕುರುಡುತನದಿಂದ, ಅಹಂಮನ್ಯತೆಯಿಂದ, ಸ್ವ–ಕೇಂದ್ರೀಕೃತ ರೀತಿಯಲ್ಲಿ ಇರುವುದರಿಂದ, ತೊಂದರೆಗಳನ್ನು ರೋಷಾವೇಶದಿಂದ ಹೆಚ್ಚಿಸುತ್ತದೆ.

ಅದು ಹೆಚ್ಚಾಗಿ ಮೋಜಿನ ಸಂವೇದನೆ, ಸಂವೇದನೆಯ ಹಾಗೂ ಭಾವನೆಯ ಸಂಯೋಜನೆ, ವಿಷಯಗಳನ್ನು ಕುರಿತು ಸಾಮಾನ್ಯ ಮಾನವನ ಮನೋಭಾವನೆ ಕಲ್ಪನಾತಿರೇಕವಾದ ಪ್ರಮಾಣಗಳವರೆಗೆ ಹೆಚ್ಚಿಸುತ್ತದೆ ಮತ್ತು ದೊಡ್ಡದಾಗಿ ಕಾಣುವಂತೆ ಮಾಡುತ್ತದೆ; ಅದು ಹಾಗಿರುವಾಗ ಅವರಲ್ಲಿ ಸರಳವಾಗಿ ನಿಜವಾದ ಮನೋಭಾವವಿದ್ದರೆ– ಸಾಮಾನ್ಯ ಮನೋಭಾವ, ಬಹಳ ಸರಳವಾದದ್ದು. ಸಂಕೀರ್ಣವಾಗಿರದೆ ಇರುವಂತಹದು– ಅಹಾ, ಎಲ್ಲ ಜೀವನ ಬಹಳ ಸುಲಭವಾಗುವುದು. ಏಕೆಂದರೆ ದೇಹ ಕಂಪನಗಳ ಭಾವನೆ ತಂದುಕೊಳ್ಳುತ್ತದೆ (ದೇಹವೊಂದನ್ನು ರೂಪಿಸಲು ಏಕಾಗ್ರತೆ ಕೈಕೊಳ್ಳುವ ಅವೇ ಕಂಪನಗಳು), ಅದು ಅವುಗಳ ಭಾವನೆ ತಂದುಕೊಳ್ಳುತ್ತದೆ, ಮತ್ತು ಅದು ಸಾಮಾನ್ಯ ಪ್ರತಿಕ್ರಿಯೆ ಎಂಬುದನ್ನು ನೋಡುತ್ತದೆ, ವಿಷಯಗಳನ್ನು ಎಷ್ಟೊಂದು ಸುಲಭವಾದವುಗಳನ್ನಾಗಿ ಮಾಡುತ್ತದೆ! ಆದರೆ ತಳಮಳ, ಭಯ, ಅತೃಪ್ತಿ ಇವುಗಳ ಅಲುಗಾಟ ಒಳಗೆ ಬಂದ ಕೂಡಲೆ, ಅದರದಾವುದೂ ಬೇಡ ಎನ್ನುವ ಸಂಕಲ್ಪದ ಪ್ರತಿಕ್ರಿಯೆ, ಓಹ್ ಕೂಡಲೆ ಅದು ಕುದಿಯುವ ನೀರಿನ ಹಾಗಾಗುತ್ತದೆ, ಯಂತ್ರದ ರೀತಿಯದಾಗುತ್ತದೆ. ಅದು ಹಾಗಿರುವಾಗ ತೊಂದರೆಯನ್ನು ಗಾಢ ನಂಬಿಕೆಯಿಂದ ಹಾಗೂ ಸರಳವಾಗಿ ಸ್ವೀಕರಿಸಿದರೆ, ಅದು ಕನಿಷ್ಠ ಮಟ್ಟಕ್ಕೆ ಕುಗ್ಗುತ್ತದೆ, ಕೇವಲ ಪ್ರಾಪಂಚಿಕ ಅರ್ಥದಲ್ಲಿ, ಭೌತಿಕ ಕಂಪನದಲ್ಲಿಯೇ ಎಂಬ ಅರ್ಥದಲ್ಲಿ ನಾನು ಹೇಳುತ್ತಿದ್ದೇನೆ.

**ಅನುಯಾಯಿಯೊಡನೆ ಮಾತುಕತೆ, ಫೆಬ್ರವರಿ 25, 1961** **– ಶ್ರೀಮಾತೆ**

*

## ದೈವೀ ಕರುಣೆ ಮತ್ತು ನ್ಯಾಯ ನೀಡುವ ನ್ಯಾಯಮಂಡಲಿ


ಅದು ದೋಷ ಇಲ್ಲವೆ ಶಿಕ್ಷೆ ಇವುಗಳ ಪ್ರಶ್ನೆಯಲ್ಲವೇ ಅಲ್ಲ. ಜನರನ್ನು ಅವರ ದೋಷಗಳಿಗಾಗಿ ಶಿಕ್ಷಿಸಬೇಕಾದರೆ ಮತ್ತು ಸಾಧಕರೊಡನೆ ನ್ಯಾಯ ನೀಡುವ ನ್ಯಾಯ ಮಂಡಲಿಯ ಹಾಗೆ ನಡೆದುಕೊಂಡರೆ ಯಾವ ಸಾಧನೆಯನ್ನೂ ಕೈಕೊಳ್ಳಲಾಗುವುದಿಲ್ಲ. ನಮ್ಮ ವಿರುದ್ಧ ನಿನ್ನ ದೂಷಣೆ ಹೇಗೆ ಸಮರ್ಥನೀಯವಾಗಿದೆ ಎಂಬುದು ನನಗೆ ಕಂಡುಬರುತ್ತಿಲ್ಲ. ಸಾಧಕರಿಗಾಗಿ ನಮ್ಮ ಏಕೈಕ ಕರ್ತವ್ಯ ಅವರನ್ನು ಅವರ ಆಧ್ಯಾತ್ಮಿಕ ಸಿದ್ಧಿಯತ್ತ ಕರೆದೊಯ್ಯುವುದಾಗಿರುತ್ತದೆ– ಮನೆಯಲ್ಲಿಯ ಜಗಳಗಳಲ್ಲಿ ಮಧ್ಯೆ ಪ್ರವೇಶಿಸುವ ಕುಟುಂಬದ ಮುಖ್ಯಸ್ಥನ ಹಾಗೆ ನಾವು ನಡೆದುಕೊಳ್ಳಲಾಗುವುದಿಲ್ಲ, ಒಬ್ಬನನ್ನು ಎತ್ತಿಹಿಡಿದು ಇನ್ನೊಬ್ಬನ ವಿರುದ್ಧ ನಮ್ಮ ಭಾರವನ್ನು ಹೊರಿಸಲಾಗುವುದಿಲ್ಲ! **X** ಎಷ್ಟೇ ಸಲ ಎಡವಿದ್ದರೂ, ಅವನನ್ನು ನಾವು ಕೈಹಿಡಿದು ಕರೆದೊಯ್ಯಬೇಕಾಗುತ್ತದೆ, ಮೇಲಕ್ಕೆತ್ತಬೇಕಾಗುತ್ತದೆ, ಮತ್ತೊಮ್ಮೆ ಭಗವಂತನತ್ತ ಅವನು ಚಲಿಸುವಂತೆ ಮಾಡಬೇಕಾಗುತ್ತದೆ. ನಾವು ಯಾವಾಗಲೂ ಅದನ್ನೇ ನಿನ್ನೊಡನೆಯೂ ಕೂಡ ಕೈಕೊಂಡಿದ್ದೇವೆ. ಆದರೆ ಅವನ ಮೇಲಿರುವ ನಿನ್ನ ಒತ್ತಾಯದ ಬೇಡಿಕೆಯನ್ನು ಎತ್ತಿ ಹಿಡಿದಿಲ್ಲ. ಅದು ಅವನು ಹಾಗೂ ಭಗವಂತ ಇವರ ನಡುವಿರುವ ಏನೋ ಒಂದು ಎನ್ನುವ ರೀತಿಯಲ್ಲಿ ನಡೆದುಕೊಂಡು ಬಂದಿದ್ದೇವೆ. ನಿನಗಾಗಿ ನಾವು ಒತ್ತುಕೊಟ್ಟು ಹೇಳಿದ್ದೇನೆಂದರೆ, ಮತ್ತು ನಿನ್ನ ಪೂರ್ತಿ ಒಪ್ಪಿಗೆ ಹಾಗೂ ನಮ್ಮತ್ತ ನಿನ್ನ ಪ್ರಾರ್ಥನೆಯೊಂದಿಗೆ ಅದನ್ನು ಕೈಕೊಳ್ಳುವುದಕ್ಕೆ ಸಹಾಯ ಮಾಡುವುದಕ್ಕಾಗಿ ಇದ್ದ ವಿಷಯವೆಂದರೆ ಅವನೊಡನಿರುವ ನಿನ್ನ ಎಲ್ಲ ಪ್ರಾಣಿಕ ಸಂಬಂಧವನ್ನು ಒಟ್ಟಿನಲ್ಲಿ ಕಡಿದು ಹಾಕಬೇಕು ಮತ್ತು ಅದನ್ನು ಇನ್ನೆಂದಿಗೂ ಆಧಾರವನ್ನಾಗಿ ಮಾಡಿಕೊಳ್ಳಬಾರದು. ಆದಾಗ್ಯೂ ಈಗ ನೀನು ಅದನ್ನು ನಮಗೆ ಬರೆದು ತಿಳಿಸುತ್ತಿರುವಿ, ಏಕೆಂದರೆ ನಾವು ನಿನ್ನ ಕ್ರಿಯೆಯನ್ನು ಸಮರ್ಥಿಸಿಲ್ಲ, ಆ ಕ್ರಿಯೆ ನೀನು **Y** ನಿಗೆ ಏನು ಹೇಳಿದ್ದೀ ಎಂಬುದು, ಅದರ ವಿಷಯ ಏನೇ ಇರಲಿ– ನೀನು ನಮ್ಮೊಡನೆ ಎಲ್ಲ ಕಾಲಕ್ಕೂ ಸಂಬಂಧ ಕಡಿದುಕೊಂಡಿರುತ್ತೀ.

ನಿನ್ನ ಹೆಚ್ಚು ಒಳ್ಳೆಯ ಆತ್ಮದತ್ತ ಮತ್ತು ನಿನ್ನ ನಿಜವಾದ ಪ್ರಜ್ಞೆಯತ್ತ, ಮರಳಿ ಹೋಗು ಹಾಗೂ ಈ ಎಲ್ಲ ಪ್ರಾಣಿಕ ಭಾವೋದ್ರೇಕದ ಚಿತ್ತಸ್ಥಿತಿಗಳನ್ನು ದೂರ ಚೆಲ್ಲಿ ಕೊಡು, ಅವು ನಿನ್ನ ಆತ್ಮಕ್ಕೆ ಯೋಗ್ಯವಾಗಿರುವುದಿಲ್ಲ ಎಂದು ನಾನು ನಿನಗೆ

ಹೇಳಲೇಬೇಕು. ಶ್ರೀಮಾತೆಯವರಿಗಾಗಿ ಇರುವ ನಿನ್ನ ಪ್ರೀತಿ ಕುರಿತು, ಅವರಿಂದ ಸ್ವೀಕರಿಸಿದ ಆನಂದ ಕುರಿತು, ಆಧ್ಯಾತ್ಮಿಕ ಅನುಭವಗಳನ್ನು ಕುರಿತು ಮೇಲಿಂದ ಮೇಲೆ ಬರೆದು ತಿಳಿಸಿರುವಿ. ಅದನ್ನು ನೆನಪಿಸಿಕೋ, ಮತ್ತು ಅದು ನಿನ್ನ ನಿಜವಾದ ಮಾರ್ಗ ಹಾಗೂ ನಿಜವಾದ ಸತ್ತೆ ಮತ್ತು ಉಳಿದದ್ದಾವುದೂ ಮಹತ್ವದ್ದಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೋ. ನಿನ್ನ ಸಮಸ್ಥಾಯಿತ್ವವನ್ನು ಮರಳಿ ಪಡೆ, ಮತ್ತು ನಿಮ್ನ ಸ್ವಭಾವ ಮತ್ತು ಅದರ ಅಂಧಕಾರ ಹಾಗೂ ಅಜ್ಞಾನವನ್ನು ದೂರ ಚೆಲ್ಲಿಕೊಡು.

**CWSA, 28/864–65** – ಶ್ರೀ ಅರವಿಂದರು

*



ನಾನು ಯಾವಾಗಲೂ ಮೇಲ್ಗಡೆಯತ್ತ ನೋಡುತ್ತೇನೆ. ದೈವೀ ಸೌಂದರ್ಯ, ಶಾಂತಿ, ಪ್ರಕಾಶ ಇವು ಅಲ್ಲಿವೆ, ಅವು ಕೆಳಗಿಳಿದು ಬರಲು ತಯಾರಾಗಿವೆ.

ಹಾಗಾಗಿ ಯಾವಾಗಲೂ ಅಭೀಪ್ಸೆ ಪಡು, ಮೇಲ್ಗಡೆ ನೋಡು, ಅದರಿಂದಾಗಿ ಅವು ಪೃಥ್ವಿಯ ಮೇಲೆ ಪ್ರಕಟವಾಗುವಂತಾಗುವುದು.

ಜಗತ್ತಿನಲ್ಲಿರುವ ಕುರೂಪದ ವಿಷಯಗಳತ್ತ. ಕೆಳಮುಖ ಮಾಡಿ ನೋಡಬೇಡ. ನಿನಗೆ ವಿಷಣ್ಣತೆಯ ಭಾವನೆ ಬಂದಾಗೆಲ್ಲ ನನ್ನೊಡನೆ ಯಾವಾಗಲೂ ಮೇಲ್ಗಡೆಯತ್ತ ನೋಡುತ್ತಿರು.

**CWM, 13/69** **– ಶ್ರೀಮಾತೆ**

*

**ಮಾರ್ಗದಲ್ಲಿ ಸಹಾಯಕರು**

ಈ ರೀತಿಯದು ನಿನಗೆ ಹಾಗೂ ನಿನ್ನಂತಹರಿಗೆ ಬಹಳ ಕಷ್ಟದಾಯಕವಾದದ್ದು. ಕೇವಲ ನಾನು ಹಾಗೂ ಶ್ರೀಮಾತೆಯವರಂತಹ ಅವತಾರ ವ್ಯಕ್ತಿಗಳು ಅದನ್ನು ಕೈಕೊಳ್ಳಬಹುದು ಎಂದು ಹೇಳುತ್ತೀ. ಅದು ವಿಚಿತ್ರ ತಪ್ಪು ಕಲ್ಪನೆ, ಏಕೆಂದರೆ ತದ್ವಿರುದ್ಧವಾಗಿ ಅದು ಅತ್ಯಂತ ಸುಲಭ, ಸರಳ ಹಾಗೂ ನೇರವಾದ ರೀತಿಯದಾಗಿದೆ, ಅದನ್ನು ಯಾರು ಬೇಕಾದರೂ ಕೈಕೊಳ್ಳಬಹುದು, ಅವರು ತಮ್ಮ ಮನಸ್ಸು ಹಾಗೂ ಪ್ರಾಣಿಕಗಳಲ್ಲಿ ಅಚಂಚಲರಾಗಿರಬೇಕು. ನಿನಗಿಂತ 1/10 ಕ್ಷಮತೆಯುಳ್ಳವರೂ ಅದನ್ನು ಕೈಕೊಳ್ಳಬಹುದು. ಶ್ರೀಮಾತೆ–ಯವರನ್ನು ಮತ್ತು ನನ್ನನ್ನು ಕುರಿತು ಹೇಳುವುದಾದರೆ ನಾವು ಎಲ್ಲ ರೀತಿಗಳಲ್ಲಿ ಪ್ರಯತ್ನಿಸಬೇಕಾಗಿತ್ತು, ಎಲ್ಲ ವಿಧಾನಗಳನ್ನು ಅನುಸರಿಸಬೇಕಾಗಿತ್ತು, ಪರ್ವತಪ್ರಾಯ ತೊಂದರೆಗಳ ಮೇಲೆ ಜಯ ಸಾಧಿಸಬೇಕಾಗಿತ್ತು, ಈ ಆಶ್ರಮದಲ್ಲಿ ಇಲ್ಲವೆ ಆಶ್ರಮದ ಹೊರಗಡೆ ನೀನು ಇಲ್ಲವೆ ಬೇರೆ ಯಾರಾದರೂ ಹೊರಬಹುದಾದ ಭಾರಕ್ಕಿಂತ ಹೆಚ್ಚಿನ ಭಾರವನ್ನು ಹೊರಬೇಕಾಗಿತ್ತು, ಅತಿ ಹೆಚ್ಚು ಕಠಿಣವಾದ ಪರಿಸ್ಥಿತಿಗಳಿದ್ದವು. ಹೋರಾಡಬೇಕಾದ ಸಮರಗಳಿದ್ದವು, ತಾಳಿಕೊಳ್ಳಬೇಕಾದ ಗಾಯಗಳಿದ್ದವು, ಜವುಗು ಪ್ರದೇಶ ಹಾಗೂ ಮರಳು ಭೂಮಿ ಹಾಗೂ ಅರಣ್ಯ ಪ್ರದೇಶ ಇವುಗಳನ್ನು ಸೀಳಿಕೊಂಡು ಹೋಗಬೇಕಾದ ಮಾರ್ಗಗಳಿದ್ದವು, ಜಯಿಸಬೇಕಾದ ವಿರೋಧಿ ಮೊತ್ತಗಳಿದ್ದವು. ಈ ಬಗೆಯ ಕಾರ್ಯವನ್ನು ನಮಗಿಂತ ಮೊದಲು ಬೇರೆ ಯಾರೂ ಕೈಕೊಂಡಿಲ್ಲ ಎಂಬುದರ ಬಗ್ಗೆ ನನಗೆ

ನಿಶ್ಚಿತತೆ ಇದೆ. ಏಕೆಂದರೆ ನಮ್ಮ ಕಾರ್ಯದಂತಹದರಲ್ಲಿರುವ ನೇತಾರ ಭಗವಂತನನ್ನು ಕೆಳಗಿಳಿಸಿ ತಂದು ಅವನನ್ನು ಮೈವೆತ್ತಬೇಕಾಗಿರುತ್ತದೆಯಷ್ಟೇ ಅಲ್ಲ ಆದರೆ ಮನುಕುಲದಲ್ಲಿರುವ ಆರೋಹಣದ ಅಂಶವನ್ನು ಪ್ರತಿನಿಧಿಸಬೇಕಾಗಿರುತ್ತದೆ ಮತ್ತು ಪೂರ್ತಿ ಪ್ರಮಾಣದಲ್ಲಿ ಮನುಕುಲದ ಭಾರವನ್ನು ಹೊತ್ತುಕೊಂಡಿರಬೇಕಾಗುತ್ತದೆ, ಕೇವಲ ಲೀಲೆಯ ರೂಪದಲ್ಲಿ ಅನುಭವಕ್ಕೆ ತಂದುಕೊಳ್ಳುವುದಷ್ಟೇ ಅಲ್ಲ, ಆದರೆ ಎಲ್ಲ ಅಡೆತಡೆಯನ್ನು ಕಠಿಣ ಶ್ರದ್ಧೆಯಿಂದ ಕೂಡಿಕೊಂಡು ಎಲ್ಲ ಅಡೆತಡೆಯನ್ನು, ತೊಂದರೆಯನ್ನು, ವಿರೋಧವನ್ನು, ಭಗ್ನಗೊಂಡು ತಲೆಯೊಡ್ಡುವುದನ್ನು ಎದುರಿಸಿ ಮತ್ತು ಕೇವಲ ನಿಧಾನ ಗತಿಯಲ್ಲಿ ವಿಜಯ ತಂದುಕೊಡುವ ಅನುಭವವನ್ನೂ ಪಡೆಯಬೇಕಾಗುತ್ತದೆ, ಇವೆಲ್ಲವೂ ದೈವೀ ಮಾರ್ಗದಲ್ಲಿ ಸಾಧ್ಯವಾಗುವಂತಹ–ವಾಗಿರುತ್ತವೆ. ಆದರೆ ಇದೆಲ್ಲವೂ ಇತರರ ಅನುಭವದಲ್ಲಿ ಪೂರ್ತಿಯಾಗಿ ಪುನರಾವರ್ತನೆಗೊಳ್ಳಬೇಕೆಂಬುದು ಅವಶ್ಯವಾಗಿಲ್ಲ, ಸಹಿಸಿಕೊಳ್ಳಲು ಸಾಧ್ಯವಿಲ್ಲ. ನಮಗೆ ಅದರ ಪೂರ್ತಿ ಅನುಭವವಿದೆ ಎಂಬ ಕಾರಣದಿಂದ ನಾವು ಇತರರಿಗಾಗಿ ಹೆಚ್ಚು ನೇರವಾದ, ಹೆಚ್ಚು ಸುಲಭವಾದ ಮಾರ್ಗವನ್ನು ತೋರಿಸಿಕೊಡಬಲ್ಲೆವು– ಅದನ್ನು ಅವರು ಕೈಗೆತ್ತಿಕೊಳ್ಳಲು ಒಪ್ಪಿಗೆ ನೀಡಬೇಕು. ನಾವು ಅತ್ಯಮೋಘ ಬೆಲೆ ತೆತ್ತು ಗಳಿಸಿದ ಅನುಭವದಿಂದಾಗಿ ನಿನಗೂ ಮತ್ತು ಇತರರಿಗೂ ಪ್ರೋತ್ಸಾಹ ನೀಡಬಲ್ಲೆವು: "ಚೈತ್ಯಾತ್ಮಿಕ ಮನೋಭಾವವನ್ನು ಹೊಂದಿರಿ, ನೇರವಾದ ರವಿ ಪ್ರಕಾಶಿತ ಮಾರ್ಗವನ್ನು ಅನುಸರಿಸಿರಿ, ಭಗವಂತ ನಿಮ್ಮನ್ನು ಬಹಿರಂಗದಲ್ಲಿ ಇಲ್ಲವೆ ರಹಸ್ಯವಾಗಿ ನಿಮ್ಮನ್ನು ಮೇಲಕ್ಕೆತ್ತಿ ಹಿಡಿದಿರುತ್ತಾನೆ,–ರಹಸ್ಯವಾಗಿದ್ದರೆ ಸಕಾಲದಲ್ಲಿ ಅವನು ತನ್ನನ್ನು ತೋರಿಸಿಕೊಡುತ್ತಾನೆ, ಕಠಿಣ ತಡೆಯೊಡ್ಡಲಾದ ಸುತ್ತು ಬಳಸಿದ ಮತ್ತು ಕಠಿಣ ಪ್ರಯಾಣದ ಮೇಲೆ ಒತ್ತುಕೊಡುವುದು ಬೇಡ."

*

ಅನಾರೋಗ್ಯದ ಪ್ರಶ್ನೆಯನ್ನು ಕುರಿತು ಹೇಳುವುದಾದರೆ ಭೌತಿಕ ಸ್ತರದಲ್ಲಿ ಪರಿಪೂರ್ಣತೆ ನಿಜವಾಗಿ ಯೋಗದ ಆದರ್ಶದಲ್ಲಿ ಒಂದು ಭಾಗವಾಗಿದೆ, ಆದರೆ ಅದು ಕೊನೆಯ ವಿಷಯ (item). ದೇಹ ಸೇರಿಕೊಂಡಿರುವ ಭೌತಿಕ ಪ್ರಜ್ಞೆಯಲ್ಲಿ ಎಲ್ಲಿಯವರೆಗೆ ಮೂಲಭೂತ ಬದಲಾವಣೆಯನ್ನು ಮಾಡಲಾಗಿರುವುದಿಲ್ಲವೋ

ಆಗ ಮನುಷ್ಯ ದೇಹದಲ್ಲಿ ಪ್ರತಿರಕ್ಷೆ (immunity) ಇಲ್ಲದೆ ಇತರ ಸ್ತರಗಳಲ್ಲಿ ಒಂದು ಬಗೆಯ ಪರಿಪೂರ್ಣತೆಯನ್ನು ಹೊಂದಬಹುದು. ಪ್ರತ್ಯೇಕವಾಗಿ ನಮಗಾಗಿ ಪರಿಪೂರ್ಣತೆಯನ್ನು ಅರಸಿಲ್ಲ, ಆದರೆ ಸಾರ್ವತ್ರಿಕ ಬದಲಾವಣೆಯ ಒಂದು ಭಾಗವೆಂದು ಇತರರಿಗಾಗಿ ಪರಿಪೂರ್ಣತೆಯ ಸಾಧ್ಯತೆಯನ್ನು ಸೃಷ್ಟಿಸುವುದನ್ನು ಅರಸಿದ್ದೇವೆ. ನಾವು ಆ ಸಿದ್ಧಿಗಾಗಿ ಹಾಗೂ ಪರಿವರ್ತನೆಗಾಗಿ ಇರುವ ತೊಂದರೆಗಳನ್ನು ಒಪ್ಪಿಕೊಂಡು ಹಾಗೂ ಎದುರಿಸಿ ನಮಗಾಗಿ ಅವುಗಳ ಮೇಲೆ ಜಯ ಸಾಧಿಸದೆ ಅದನ್ನು ಕೈಕೊಳ್ಳಲಾಗುತ್ತಿರಲಿಲ್ಲ. ಅದನ್ನು ಇತರ ಸ್ತರಗಳ ಮೇಲೆ ಸಾಕಷ್ಟು ಮಟ್ಟದವರೆಗೆ ಕೈಕೊಳ್ಳಲಾಗಿದೆ,– ಆದಾಗ್ಯೂ ಭೌತಿಕ ಸ್ತರದ ಅತ್ಯಂತ ಭೌತಿಕ ಭಾಗದ ಮೇಲೆ ಅದನ್ನು ಕೈಕೊಳ್ಳಲಾಗಿಲ್ಲ. ಅದನ್ನು ಕೈಕೊಳ್ಳುವವರೆಗೆ ಅಲ್ಲಿ ಹೋರಾಟ ಮುಂದುವರಿಯುತ್ತದೆ. ಯೌಗಿಕ ಕ್ರಿಯೆಯ ಹಾಗೂ ರಕ್ಷಣೆಯ ಶಕ್ತಿಯೊಂದು ಅಲ್ಲಿ ಇರಬಹುದಾದರೂ ಅಲ್ಲಿ ಪ್ರತಿರಕ್ಷೆ (immunity) ಇರುವುದಿಲ್ಲ. ಶ್ರೀಮಾತೆಯವರ ತೊಂದರೆಗಳು ಅವರವೇ ಅಲ್ಲ, ಇತರರ ತೊಂದರೆಗಳನ್ನು ಕೂಡ ಮತ್ತು ಸಾರ್ವತ್ರಿಕ ಕ್ರಿಯೆಯಲ್ಲಿ ಹಾಗೂ ಪರಿವರ್ತನೆಗಾಗಿ ಕಾರ್ಯ ಕೈಕೊಳ್ಳುವುದರಲ್ಲಿ ಅಂತರ್ನಿಹಿತರಾದವರ ತೊಂದರೆಗಳನ್ನು ತಮ್ಮ ಮೇಲೆ ಹೊತ್ತುಕೊಳ್ಳುತ್ತಾರೆ. ಅದು ಹಾಗಿರದಿದ್ದರೆ ಅದು ಬಹಳ ಭಿನ್ನವಾದ ವಿಷಯವಾಗುತ್ತಿತ್ತು.

**CWSA, 32/94–95** **– ಶ್ರೀ ಅರವಿಂದರು**

*

ಅದು ನಾನೇ ಸ್ವತಃ ರವಿಪ್ರಕಾಶಿತ ಮಾರ್ಗದ ಮೇಲೆ ಹೆಜ್ಜೆ ಇರಿಸಿದೆ ಎಂಬ ಕಾರಣದಿಂದಾಗಲಿ ಇಲ್ಲವೆ ತೊಂದರೆ, ವೇದನೆ ಹಾಗೂ ಅಪಾಯಗಳಿಂದ ಹಿಂಜರಿದೆನೆಂದಾಗಲಿ ಅಲ್ಲ. ಈ ವಿಷಯಗಳನ್ನು ಕುರಿತು ನನ್ನ ಪೂರ್ತಿ ಪಾಲಿತ್ತು, ಮತ್ತೆ ಶ್ರೀಮಾತೆಯವರಿಗೆ ಅವರ ಪೂರ್ತಿಪಾಲಿನ ಹತ್ತು ಪಟ್ಟಿನಷ್ಟು ಇತ್ತು. ಆದರೆ ಅದು ಹಾಗೇಕಿತ್ತೆಂದರೆ ದೈವೀ ಮಾರ್ಗವನ್ನು ಕಂಡು ಹಿಡಿಯುವವರು ಜಯಿಸುವುದಕ್ಕಾಗಿ ಈ ವಿಷಯಗಳನ್ನು ಎದುರಿಸಬೇಕಾಗಿತ್ತು. ಮಾರ್ಗದಲ್ಲಿ ನಮಗೆ ಎದುರಾಗದ ಯಾವ ತೊಂದರೆಯೂ ಸಾಧಕನ ಮೇಲೆ ಬರಲಾರದು. ಹಲವಾರು ತೊಂದರೆಗಳನ್ನು ಜಯಿಸುವುದಕ್ಕಾಗಿ ನಾವು ಅವುಗಳ ವಿರುದ್ಧ ನೂರಾರು ಸಲ ಹೋರಾಡಬೇಕಾಗಿತ್ತು (ವಾಸ್ತವದಲ್ಲಿ ಕಡಿಮೆ ಮಾಡಿ

ಹೇಳಿದ ಮಾತು.) ಪರಿಪೂರ್ಣ ಪರಿಪೂರ್ಣತೆ ಅಲ್ಲಿ ಇರುವವರೆಗೆ ಅವುಗಳಿಗೆ ಇರಲು ಹಕ್ಕಿದೆ ಎಂಬ ರೀತಿಯಲ್ಲಿ ವಿರೋಧ ವ್ಯಕ್ತಪಡಿಸುತ್ತ ಇರುತ್ತವೆ. ಇತರರಿಗಾಗಿ ಅವುಗಳ ಅನಿವಾರ್ಯವಾದ ಆವಶ್ಯಕತೆಯನ್ನು ಕುರಿತು ನಾವು ಎಂದಿಗೂ ಒಪ್ಪಿಗೆ ನೀಡಿಲ್ಲ. ಅದು ಈ ನಂತರ ವಾಸ್ತವದಲ್ಲಿ ಇತರರಿಗೆ ಒಂದು ಹೆಚ್ಚು ಸುಲಭವಾದ ಮಾರ್ಗವನ್ನು ಅನುಸರಿಸಲು ಭರವಸೆ ನೀಡುವುದಕ್ಕಾಗಿ ನಾವು ಆ ಭಾರವನ್ನು ಹೊತ್ತಿದ್ದೇವೆ. ಈ ಉದ್ದೇಶದೊಂದಿಗೆ ಶ್ರೀಮಾತೆಯವರು ಯಾವುದೇ ತೊಂದರೆಗಳು, ಅಪಾಯಗಳು, ವೇದನೆಗಳು ಮಾರ್ಗದಲ್ಲಿ ಅವಶ್ಯವಾಗಿರುವವೋ ಅವೆಲ್ಲವನ್ನು ಇತರರ ಮೇಲೆ ಹೇರದೆ ತಮ್ಮ ಮೇಲೆ ಹೇರಲಾಗಲಿ ಎಂದು ಒಮ್ಮೆ ಭಗವಂತನಲ್ಲಿ ಪ್ರಾರ್ಥಿಸಿದ್ದರು. ಇಲ್ಲಿಯವರೆಗೆ ಕೇಳಿ ಬಂದುದೆಂದರೆ ದೈನಂದಿನ ಮತ್ತು ವರ್ಷಗಳ ಕಾಲ ನಡೆಸಿದ ಹೋರಾಟದ ಪರಿಣಾಮವಾಗಿ ಯಾರು ಇಡಿಯಾದ ಮತ್ತು ನಿಷ್ಕಪಟವಾದ ಗಾಢ ನಂಬಿಕೆಯನ್ನು ಅವರಲ್ಲಿರಿಸಿದ್ದರೋ ಅವರು ರವಿಪ್ರಕಾಶಿತ ಮಾರ್ಗವನ್ನು ಅನುಸರಿಸಲು ಶಕ್ತರಾಗಿದ್ದಾರೆ, ಮತ್ತು ಯಾರಿಗೆ ಅದು ಸಾಧ್ಯವಾಗಲಿಲ್ಲವೋ, ಆದಾಗ್ಯೂ ಅವರು ತಮ್ಮ ವಿಶ್ವಾಸವನ್ನಿರಿಸಿದಾಗ ಅವರ ಮಾರ್ಗ ಹಠಾತ್ತನೆ ಸುಲಭವಾಗುವುದನ್ನು ಕಂಡುಕೊಂಡಿದ್ದಾರೆ, ಅದು ಮತ್ತೆ ಕಠಿಣವಾದರೆ ಅದು ಅಪನಂಬಿಕೆ, ಬಂಡಾಯ, ಅಭಿಮಾನ ಇಲ್ಲವೆ ಇತರ ಅಂಧಕಾರಗಳು ಇವು ಅವರನ್ನು ಆವರಿಸಿಕೊಂಡಾಗ. ರವಿಪ್ರಕಾಶಿತ ಮಾರ್ಗ ಒಟ್ಟಿನಲ್ಲಿ ಒಂದು ಕಟ್ಟುಕತೆಯಲ್ಲ.

**CWSA, 32/96** **– ಶ್ರೀ ಅರವಿಂದರು**

*

ನಮ್ಮನ್ನು ತ್ಯಜಿಸಿ ಹೋಗಿಬಿಡಲು ಬಯಸುವುದಕ್ಕೆ ನೀನು ಕೊಡುತ್ತಿರುವ ಕಾರಣಗಳು ಒಳ್ಳೆಯವಲ್ಲ. ನೀನು ಭಗವಂತನ ಶ್ರೀಮಂತಿಕೆಯನ್ನು, ಪರಮ ಶ್ರೇಷ್ಠತೆಯನ್ನು ನೋಡಲು ಬಯಸಿದರೆ, ಅದಕ್ಕಾಗಿ ಕಾದುಕೊಂಡಿದ್ದರೆ ಅದರ ಬಗ್ಗೆ ಹೆಚ್ಚಿನದನ್ನು ನಮ್ಮೊಡನೆ ನೋಡುವಿ, ಎಂದಿಗೂ ಅದನ್ನು ಹೊರಗೆ ಬೇರೆಡೆ ನೋಡಲಾಗುವುದಿಲ್ಲ. ನೀನು ಹಿಮಾಲಯವನ್ನು ನೋಡ ಬಯಸಿದರೆ, ಅದನ್ನು ಈ ನಂತರ ನಿಮ್ಮ ಮಾತೆಯವರನ್ನು ಬದಿಯಲ್ಲಿರಿಸಿಕೊಂಡು ನೋಡಬಹುದು.

ನೀನು ಹೊರಟು ಹೋದರೆ ಆಶ್ರಮದಲ್ಲಿ ಪಿಶಾಚಿ ಉಳಿದುಕೊಳ್ಳುವುದಿಲ್ಲ ಎಂದು ಹೇಳಿದಾಗ ನಿನ್ನದು ಬಹಳ ತಪ್ಪಾದ ವಿಚಾರವಾಗಿರುತ್ತದೆ. ಪಿಶಾಚಿ ನಿನ್ನ ಸಲುವಾಗಿ ಇಲ್ಲ, ಅದು ಇಲ್ಲಿ ಶ್ರೀಮಾತೆಯವರಿಗೆ ತೊಂದರೆ ಕೊಡುವುದಕ್ಕೆ ಮತ್ತು ಅವರ ಕಾರ್ಯವನ್ನು ಕೆಡಿಸುವುದಕ್ಕಾಗಿ ಇದೆ. ಆ ಪಿಶಾಚಿಯ ಮುಖ್ಯ ಬಯಕೆ ಶ್ರೀಮಾತೆಯವರ ಮಕ್ಕಳನ್ನು ಆಶ್ರಮದಿಂದ ಹೊರದೂಡುವುದಾಗಿದೆ ಮತ್ತು ವಿಶೇಷವಾಗಿ ನಿನ್ನ ಹಾಗೆ ಅವರಿಗೆ ಹತ್ತಿರವಿದ್ದವರನ್ನು ಹೊರದೂಡು–ವುದಾಗಿದೆ. ನೀನು ಹೊರಟು ಹೋದರೆ ಅವನು ಉಳಿದುಕೊಳ್ಳುತ್ತಾನೆ, ಅವನು ಉಳಿದುಕೊಳ್ಳುತ್ತಾನಷ್ಟೇ ಅಲ್ಲ, ಅವನು ದೊಡ್ಡ ವಿಜಯ ಸಾಧಿಸಿದ ಭಾವನೆ ತಂದುಕೊಳ್ಳುತ್ತಾನೆ ಮತ್ತು ಅವರನ್ನು ಇತರರ ಮೂಲಕ ಆಕ್ರಮಣ ಮಾಡಲು ದ್ವಿಗುಣ ಉತ್ಸಾಹ ಹೊಂದುತ್ತಾನೆ.

ಶ್ರೀಮಾತೆಯವರಿಗೆ ಹಾಗೂ ನನಗೆ ತೊಂದರೆ ಕೊಡುವುದರಿಂದ ದೂರ ಉಳಿಯುವುದನ್ನು ಕುರಿತು ಹೇಳುತ್ತೀ, ಆದರೆ ನೀನು ದೂರ ಹೊರಟು ಹೋಗುವುದರಿಂದ ನಮಗೆ ಇನ್ನೂ ಹೆಚ್ಚು ಕೆಟ್ಟದ್ದಾಗುವುದು ಎಂಬುದು ನಿನಗೆ ತಿಳಿಯುತ್ತಿಲ್ಲವೆ? ನಿನಗೆ ಬರುವ ಬಂಡಾಯದ ಚಿತ್ತಸ್ಥಿತಿಗಳು ದಾಟಿಕೊಂಡು ಹೋಗುವ ಮೋಡಗಳ ಹಾಗಿರುತ್ತವೆ, ಆದರೆ ನೀನು ಈ ರೀತಿಯಲ್ಲಿ ಹೊರಟು ಹೋಗುವುದನ್ನು ನೋಡುವುದರಿಂದ, ನಮ್ಮ ಪ್ರೇಮವನ್ನು ತಿರಸ್ಕರಿಸಿದ ಮತ್ತು ನಮ್ಮ ಹತ್ತಿರವಿರುವ ನಿನ್ನ ಸ್ಥಾನ ಬರಿದಾಗಿರುವುದರ ಭಾವನೆಯನ್ನು ತಂದುಕೊಳ್ಳುವುದರಿಂದ ನಮಗೆ ನಿಜವಾದ ಒಂದು ತೊಂದರೆಯಾಗುತ್ತದೆ ಮತ್ತು ನೀನು ಮಾಡಬಹುದಾದ ಬೇರೆ ಯಾವುದಕ್ಕಿಂತಲೂ ಆ ತೊಂದರೆಯನ್ನು ಆಳವಾಗಿ ಭಾವನೆಗೆ ತಂದುಕೊಳ್ಳುತ್ತೇವೆ.

ನಿನ್ನ ಏಕೈಕ ಆಸೆ ನಿಜವಾಗಿ ಇಲ್ಲಿಂದ ಹೊರಟು ಹೋಗುವುದಾಗಿಲ್ಲ ಎಂಬುದು ನಿನಗೆ ತಿಳಿದಿದೆ. ನೀನು ಈ ಚಿತ್ತಸ್ಥಿತಿಗಳಲ್ಲಿರುವಾಗ ಮಾತ್ರ ಅದು ಹಾಗಿರುತ್ತದೆ. ಇವು ಸಾಗಿ ಹೋಗುವ ಚಿತ್ತ ಸ್ಥಿತಿಗಳೆಂಬುದು ನಿನಗೆ ತಿಳಿದಿದೆ. ಮತ್ತು ನೀನು ಅವುಗಳನ್ನು ತೆಗೆದು ಹಾಕಲು ಶ್ರೀಮಾತೆಯವರಿಗೆ ಅನುವು ಮಾಡಿಕೊಟ್ಟರೆ ಅವು ಒಮ್ಮೆಗೆ ಹೋಗಿಬಿಡುವವು. ಇರುವ ತೊಂದರೆಯೆಂದರೆ ಅವು ಬಂದಾಗ ಅವುಗಳನ್ನು ಹೆಚ್ಚಿನ ರೀತಿಯಲ್ಲಿ ಹೃದಯಕ್ಕೆ ಹಚ್ಚಿಕೊಳ್ಳುತ್ತೀ

ಮತ್ತು ಇಲ್ಲಿಂದ ಹೊರಟು ಹೋಗುವುದರ ಬದಲಾಗಿ ಬೇರೆ ಯಾವ ಮಾರ್ಗವೂ ಇಲ್ಲ ಎಂದು ಯೋಚಿಸುತ್ತೀ. ಅದು ಪರಿಹಾರವಲ್ಲ. ನಿನ್ನಿಂದ ಪ್ರತ್ಯೇಕಗೊಳ್ಳುವುದಕ್ಕಿಂತ ನಿನ್ನ ಈ ಎಲ್ಲ ಚಿತ್ತಸ್ಥಿಗಳೊಂದಿಗೆ ನೀನು ನಮ್ಮೊಡನಿರುವುದನ್ನು ನಾವು ಹೆಚ್ಚಾಗಿ ಬಯಸುತ್ತೇವೆ ಎಂದು ನಾನು ನಿನಗೆ ಭರವಸೆ ಕೊಡುತ್ತೇನೆ. ಆ ಚಿತ್ತ ಸ್ಥಿತಿಗಳು ನಮಗೆ ಕೊಡುವ ತೊಂದರೆ ತಕ್ಕಡಿಯಲ್ಲಿ ಧೂಳಿದ್ದ ಹಾಗೆ.

**CWSA, 32/102–03** **– ಶ್ರೀ ಅರವಿಂದರು**

*

ಆತ್ಮವೊಂದು ಸುರಕ್ಷಿತತೆಯ ಆಶ್ರಯ, ಭವ್ಯ ಮೆತ್ತಗಿನ ವಿಶ್ರಾಂತಿ
ಸ್ಥಾನಕೆ ಹಾರಿ ಹೋಗುವುದು
ಅವಳ ಮಧು–ಪ್ರಜ್ವಲಿತ ಪ್ರವಾಹಗಳಲಿ ಮಾನವನು ಜೀವನ
ಚೈತನ್ಯವನು ಮರಳಿ ಕುಡಿಯಬಹುದು,
ಕಳೆದು ಹೋದ ಅನಂದದ ಅಭ್ಯಾಸವನು ಮರಳಿ ಪಡೆಯಬಹುದು.
ಅವಳ ಉಜ್ವಲ ಸ್ವಭಾವದ ವೈಭವೋಪೇತ ಪರಿಸರದ ಅನುಭವವನು
ಭಾವನೆಗೆ ತಂದುಕೊಳ್ಳಬಹುದು,
ಮತ್ತವಳ ಹಾರ್ದಿಕ ವರ್ಣಮಯ ಆಳಿಕೆಯಲಿ ಸಂತೋಷದ
ಹೆಮ್ಮೆಪಡಬಹುದು.
ಕರುಣಾಸಾಗರದ ಆಳ ನಿಶ್ಯಬ್ದ ಸುರಕ್ಷಿತ ಸ್ಥಾನದಂತಿರುವ,
ಅವಳ ಆಂತರಿಕ ನೆರವು ಸ್ವರ್ಗದ ದ್ವಾರವನು ತೆರೆದಿರಿಸಿಹುದು;
ಅವಳ ದಿವ್ಯ ಪ್ರೇಮ ವಿಶ್ವಕ್ಕಿಂತಲೂ ವಿಶಾಲವಾಗಿತ್ತು,
ಅವಳ ಹೃದಯ ಮಂದಿರದಲಿ ಸರ್ವ ವಿಶ್ವವೇ ಆಶ್ರಯ
ಪಡೆಯಬಹುದಾಗಿತ್ತು.

**'ಸಾವಿತ್ರಿ' p. 15** **– ಶ್ರೀ ಅರವಿಂದರು**

*



ವಿಧಿಯನು ತನ್ನ ತೊಡೆಗಳ ಮೇಲೆ ತೂಗುವ ಒಂದು ದೈವೀ ಸ್ಥಿರತೆ;
ಒಂದು ವಿಶಾಲ ದೈವೀ ಕರುಣೆ ಪೃಥ್ವಿಯ ನೋವನು ಅಪ್ಪಿಕೊಳ್ಳಲು
ವಾಲಿಕೊಳ್ಳುತ್ತಿಹುದು;
ನಮ್ಮ ರಹಸ್ಯಗಳಲಿ ದೈವೀ ಸಾಕ್ಷಿಯೊಬ್ಬ ವಾಸಿಸುತಿಹನು.
ಅವನು ಮಾನವ ದೇಹದಲಿ ಅವತಾರ ತಾಳಿದ ದೇವ
ಪ್ರಮುಖನಾಗಿಹನು.

**CWSA, 2/607** **– ಶ್ರೀ ಅರವಿಂದರು**

*

# ದೈವೀಕೃಪೆಯ ಕಾಣಿಕೆಗಳು

## ಶ್ರೀ ಅರವಿಂದರ ಬರಹಗಳು

ತಮ್ಮ ಜ್ಞಾನದ ಒಂದಂಶವನ್ನು ಮಾತ್ರ ನಮಗೆ ನೀಡಿದ್ದಾರೆ, ಅದನ್ನೂ ಕೂಡ ಯಾರೂ ಸರಿಯಾಗಿ ಅರ್ಥಮಾಡಿಕೊಳ್ಳಲಾರರು. ಇಲ್ಲಿ (ಆಶ್ರಮದಲ್ಲಿ)–ರುವುದರಲ್ಲಿ ಕಂಡುಬರುವ ವ್ಯತ್ಯಾಸ ಇದೇ ಆಗಿದೆ. ತುಂಬ ರಹಸ್ಯವಾಗಿರುವ ಪೃಥ್ವಿಯ ಮೇಲಿನ ಅಸ್ತಿತ್ವದ ಆನಂದದ ಬಾಗಿಲುಗಳನ್ನು ತೆರೆದಿರಿಸಿದ್ದಾರೆ. ದೈವೀ ಸತ್ಯವನ್ನು ಅದರ ಪರಿಶುದ್ಧತೆಯಲ್ಲಿ ಹಾಗೂ ಸಮಗ್ರತೆಯ ಜೊತೆಗೆ ನಮಗೆ ತೆರೆದು ತೋರಿಸಿದ್ದಾರೆ. ಮಹೋನ್ನತವಾದ ಆನಂದವನ್ನು ಮತ್ತು ಪರಿಶುದ್ಧ–ಗೊಳಿಸುವ ಬೆಳಕನ್ನು ನಮಗಾಗಿ ಶೇಖರಿಸಿದ್ದಾರೆ, ಅದರಿಂದ ವಾತಾವರಣ ವ್ಯಾಪ್ತಿಗೊಳಗಾಗುವಂತೆ ಮಾಡಿದ್ದಾರೆ. ನೀವು ಉಸಿರಾಡಿಸುತ್ತಿರುವುದು ಅದನ್ನೇ ಮತ್ತೆಲ್ಲಿಯೂ ದೊರಕದ ಈ ಅಪರೂಪದ ಹಕ್ಕನ್ನು ಅರಗಿಸಿಕೊಳ್ಳುತ್ತಿದ್ದೀರಿ, ಹೀರಿಕೊಳ್ಳುತ್ತೀದ್ದೀರಿ. ಅದು ನಿಮ್ಮ ಅಸ್ತಿತ್ವದ ಭಾಗ ಕೂಡ ಆಗಿ ಹೋಗಿದೆ. ...

ಒಟ್ಟಿಗೆ ಇಡಿಯಾದುದರಲ್ಲಿ ಉತ್ಕೃಷ್ಟತೆ ಇದೆ, ಅದು ನಮ್ಮ ಅಭಿವ್ಯಕ್ತಿಯ ಸೌಂದರ್ಯವನ್ನು ಮೀರಿ ಹೋಗುತ್ತದೆ ಮತ್ತು ರಚನೆಗೆ ಒಂದು ನಿಖರತೆಯನ್ನು ಕೊಡುತ್ತದೆ, ಆ ರಚನೆ ಸೂಕ್ಷ್ಮತೆಯಿಂದ ತುಂಬಿಕೊಂಡ ರೂಪದಲ್ಲಿರುತ್ತದೆ, ಅದ್ಭುತ ರೀತಿಯಲ್ಲಿ ಶಿಲ್ಪಕಲೆಗೆ ಅಧೀನಪಡಿಸಿದ ಶ್ರೀಮಂತಿಕೆಯನ್ನು ಹೊಂದಿದ ದರ್ಶನದ್ದಾಗಿರುತ್ತದೆ. ಆ ರೂಪ ನಿರೂಪಣೆಯಲ್ಲಿ ಅಡಕವಾದ ಆದರೆ ಎಲ್ಲವನ್ನೂ ಒಳಗೊಂಡಿರುವ (concise), ಸರಳ ಮತ್ತು ಪರಿಪೂರ್ಣವಾದ ಪರಿಶುದ್ಧ ನಿರ್ಮಲತೆಯುಳ್ಳದ್ದು; ಪ್ರತೀಕ ಸುಂದರ, ದ್ರವರೂಪದ್ದು ಮತ್ತು ರಾಜಠೀವಿಯುಳ್ಳದ್ದು; ಧ್ವನಿ ಸಂಗೀತಮಯ, ಲಯಬದ್ಧ, ಅನುರಣನ ಮಾಡುವಂತಹದು, ಪ್ರಕಾಶಮಯ ಪದಗುಚ್ಛಗಳ ರಚನೆಯಲ್ಲಿ ಹರಹನ್ನು ಹೊಂದಿರುವಂತಹದು, ಆ ಪದಗುಚ್ಛಗಳು ಆಳವಾದ ಭಾವನೆಗಳನ್ನು ಆಹ್ವಾನಿಸುತ್ತವೆ ಮತ್ತು ದರ್ಶನ ದೈವೀ ನೈಜತೆಗೆ ದ್ವಾರವನ್ನು ತೆರೆದಿರಿಸುತ್ತದೆ ಮತ್ತು ಅಭಿವ್ಯಕ್ತಿಯ ಕಲೆಯಲ್ಲಿ ಪರಿಪೂರ್ಣತೆಯನ್ನು ಸೂಚಿಸುತ್ತದೆ. ಅವರು ಬರೆದಿರುವುದೆಲ್ಲದರಲ್ಲಿ ಅವರು ತೆರೆದು ತೋರಿಸುವುದು ಇದೇ ಆಗಿದೆ. ಇದಷ್ಟೇ ಅಲ್ಲ, ಅಲ್ಲಿ ಇನ್ನೂ ಅಡಗಿರುವ ರಹಸ್ಯಗಳಿವೆ, ಅಜ್ಞಾತ ವಿಷಯಗಳಿವೆ, ಅಂತರ್ಬೋಧೆಗೆ ಮಾರ್ಗವಿರುವವರಿಗೆ ಮಾತ್ರ ಅವುಗಳನ್ನು ತೆರೆದು ತೋರಿಸಲಾಗುವುದು. ಶಬ್ದ

ಶಕ್ತಿಯಾಗಿದೆ, ಸಾಮರ್ಥ್ಯವಾಗಿದೆ– ಅದು ಸೃಷ್ಟಿಸುತ್ತದೆ. ಶಬ್ದವನ್ನು ಉಚ್ಚರಿಸಿದ ಕೂಡಲೆ ಅದು ಒಂದು ಕಂಪನವನ್ನುಂಟು ಮಾಡುತ್ತದೆ, ಆ ಕಂಪನ ಒಂದು ರೂಪ ತಾಳುತ್ತದೆ ಮತ್ತು ಉಳಿದುಕೊಳ್ಳುತ್ತದೆ, ಹಾಗಾಗುವುದು ಅತಿಮಾನಸ ಜೀವನಕ್ಕಾಗಿರುವ ಪರಿವರ್ತನೆಗಾಗಿ ಶಿಸ್ತುಪಾಲನೆ ಹಾಗೂ ಪ್ರಯತ್ನಗಳ ಮೂಲಕ ಅವರು ನೀಡಿದ ಶಿಕ್ಷಣದ ವ್ಯಾವಹಾರಿಕ ಅರ್ಥವನ್ನು ತಮ್ಮ ಜೀವನದಲ್ಲಿ ಹೀರಿಕೊಳ್ಳುವುದಕ್ಕಾಗಿ ಕೈಗೆತ್ತಿಕೊಂಡವರಿಗೆ ಮಾತ್ರ.

**ದೈವೀಕೃಪೆಯ ಆಶೀರ್ವಾದಗಳು, ಪು. 115–16**

*

**ಸಾವಿತ್ರಿ**

ಶ್ರೀ ಅರವಿಂದರು ಇಲ್ಲಿ ಸತ್ಯವನ್ನು ಕಂಡು ಹಿಡಿಯಲು, ಪ್ರಜ್ಞೆಯನ್ನು ಶೋಧಿಸಲು, ಅಲ್ಲಿ ಏನನ್ನು ಪ್ರಕಾಶ ಒಳನುಗ್ಗಬಹುದು ಹಾಗೂ ಪರಿವರ್ತಿಸಬಹುದು ಎಂಬ ಸಮಸ್ಯೆಯನ್ನು ಪರಿಹರಿಸಲು ನಿಮಗೆ ಬೀಗದ ಕೈ ಕೊಡುತ್ತಾರೆ. ಅಜ್ಞಾನದಿಂದ ಮನುಷ್ಯ ತನ್ನನ್ನು ಬಿಡುಗಡೆಗೊಳಿಸಲು, ಅತಿಚೇತನ ದವರೆಗೆ ಏರಿ ಹೋಗಲು ಮಾರ್ಗವನ್ನು ತೋರಿಸಿದ್ದಾರೆ, ಪ್ರಜ್ಞೆಯ ಪ್ರತಿಯೊಂದು ಹಂತವನ್ನು, ಪ್ರತಿಯೊಂದು ಸ್ತರವನ್ನು ಹೇಗೆ ಆರೋಹಣ ಮಾಡಬೇಕು, ಮೃತ್ಯುವಿನ ಬೇಲಿಯನ್ನೂ ಕೂಡ ಮನುಷ್ಯ ದಾಟಿಕೊಂಡು ಹೋಗಿ ಅಮರತ್ವವನ್ನು ಹೇಗೆ ತಲುಪಬೇಕು ಇವೆಲ್ಲದಕ್ಕೆ ಅವರು ಮಾರ್ಗದರ್ಶನ ಮಾಡಿದ್ದಾರೆ, ನೀವು ಇಡೀ ಪ್ರಯಾಣವನ್ನು ವಿವರಗಳೊಂದಿಗೆ ಕೊಟ್ಟಿದ್ದನ್ನು ಕಂಡುಕೊಳ್ಳುತ್ತೀರಿ, ಅದಕ್ಕಿಂತ ಇನ್ನೂ ಹೆಚ್ಚಿನದಿದೆ. ಸಾವಿತ್ರಿಯನ್ನು ಓದುವುದು ಒಂದು ನಿಜವಾದ ಅನುಭವ. ಮನುಷ್ಯನಲ್ಲಿರುವ ಎಲ್ಲ ರಹಸ್ಯಗಳನ್ನು, ಹಾಗೆಯೇ ಭವಿಷ್ಯತ್ತಿನಲ್ಲಿ ಅವನಿಗಾಗಿ ಕಾದುಕೊಂಡಿರುವುದನ್ನು ಅವರು ತೆರೆದು ತೋರಿಸಿದ್ದಾರೆ. ಹೀಗೆ ಎಲ್ಲವನ್ನೂ 'ಸಾವಿತ್ರಿ'ಯ ಆಳದಲ್ಲಿ ಕಂಡುಕೊಳ್ಳಬಹುದು. ಆದರೆ ಅದೆಲ್ಲವನ್ನೂ ಶೋಧಿಸುವುದಕ್ಕೆ ಮನುಷ್ಯನಲ್ಲಿ ಜ್ಞಾನವಿರಬೇಕು, ಮೃತ್ಯುವಿನ ಮೇಲೆ ಜಯ ಸಾಧಿಸಿದ ಅನುಭವವಿರಬೇಕು. ಅವರು ಎಲ್ಲ ಹಂತಗಳನ್ನು ಗಮನಿಸಿದ್ದಾರೆ, ಸಮಗ್ರ ಯೋಗದಲ್ಲಿ ಸಮಗ್ರವಾಗಿ ಮುನ್ನಡೆ ಸಾಧಿಸುವುದಕ್ಕೆ ಪ್ರತಿಯೊಂದು ಹೆಜ್ಜೆಯನ್ನು ಗುರುತಿಸಿದ್ದಾರೆ.

... ಇವು ಅವರು ಜೀವಂತ ಅನುಭವಕ್ಕೆ ತಂದುಕೊಂಡ ನೈಜತೆಗಳು, ವಿಶ್ವಾತೀತ ಸತ್ಯವಾದವುಗಳು. ಮನುಷ್ಯ ಭೌತಿಕವಾಗಿ ಸುಖದುಃಖಗಳನ್ನು ಅನುಭವಕ್ಕೆ ತಂದುಕೊಳ್ಳುವ ರೀತಿಯಲ್ಲಿ ಇವೆಲ್ಲವನ್ನು ಅನುಭವಕ್ಕೆ ತಂದುಕೊಂಡರು. ಅಚೇತನದ ಅಂಧಕಾರದಲ್ಲಿ, ಸಾವಿನ ಪಕ್ಕದಲ್ಲಿಯೂ ಕೂಡ ನಡೆದು ಹೋಗಿದ್ದರು, ನರಕವಾಸದ ವೇದನೆಗಳನ್ನೂ ತಾಳಿಕೊಂಡಿದ್ದರು, ಸಾರ್ವಭೌಮ ಪೂರ್ಣತೆಯನ್ನು ಉಸಿರಾಡಿಸಲು, ಪರಮೋಚ್ಚ ಆನಂದದಲ್ಲಿ ಪ್ರವೇಶಿಸಲು ಮಣ್ಣಿನೊಳಗಿಂದ, ಜಗತ್ತಿನ ದುಃಖದಿಂದ ಹೊರಬಂದರು, ಅವರು ಈ ಎಲ್ಲ ಲೋಕಗಳನ್ನು ದಾಟಿದರು, ಪರಿಣಾಮಗಳನ್ನು ಅನುಭವಿಸಿದರು, ಮನುಷ್ಯ ಕಲ್ಪನೆ ಮಾಡಿಕೊಳ್ಳಲು ಸಾಧ್ಯವಿಲ್ಲದಷ್ಟು ಭೌತಿಕವಾಗಿ ವೇದನೆಯನ್ನು ಅನುಭವಿಸಿದರು, ಹಾಗೂ ಸಹಿಸಿಕೊಂಡರು. ಇಲ್ಲಿಯವರೆಗೆ ಬೇರೆ ಯಾರೂ ಅವರ ಹಾಗೆ ವೇದನೆಯನ್ನು ಅನುಭವಿಸಿಲ್ಲ. ವೇದನೆಯನ್ನು ಪರಮೋಚ್ಚನೊಂದಿಗೆ ಏಕತೆಯಿಂದಾಗುವ ಸಂತೋಷವನ್ನಾಗಿ ಪರಿವರ್ತಿಸುವುದಕ್ಕಾಗಿ ಅವರು ವೇದನೆಯನ್ನು ಒಪ್ಪಿಕೊಂಡರು. ಅದು ಅನನ್ಯವಾದ ಏನೋ ಒಂದು ಮತ್ತು ಜಗತ್ತಿನ ಇತಿಹಾಸದಲ್ಲಿ ಹೋಲಿಸಲಾಗದಂತಹದು. ಅದು ಹಿಂದೆಂದೂ ಸಂಭವಿಸಿರದ ಏನೋ ಒಂದು. ನಾವು ದೃಢ ವಿಶ್ವಾಸದಿಂದ ಅತಿಮನಸ್ಸಿನತ್ತ ನಡೆದು ಹೋಗಲು ಶಕ್ತರಾಗುವುದಕ್ಕೆ ದೈವೀ ಅಜ್ಞಾತವಾದುದರಲ್ಲಿ ಮಾರ್ಗವನ್ನು ಗುರುತಿಸಿರುವವರಲ್ಲಿ ಅವರೇ ಮೊದಲಿಗರು. ನಮ್ಮ ಸಲುವಾಗಿ ಆ ಕಾರ್ಯವನ್ನು ಸುಲಭಗೊಳಿಸಿದ್ದಾರೆ. ಸಾವಿತ್ರಿ ಅವರ ಇಡೀ ಪರಿವರ್ತನೆಯ ಯೋಗವಾಗಿದೆ. ಈ ಯೋಗ ಪೃಥ್ವಿ ಪ್ರಜ್ಞೆಯಲ್ಲಿ ಮೊಟ್ಟ ಮೊದಲಿಗೆ ತೋರಿ ಬರುತ್ತಿದೆ.

**– ಪ್ರಕಾಶಮಯ ಟಿಪ್ಪಣಿಗಳು ಮೋನಾ ಸರ್ಕಾರ**

*

**ಆಶ್ರಮ**

ಕೇಳು, ಜಪಾನಿನಿಂದ ಬರುತ್ತಿರುವಾಗ ನನಗಾದ ಅನುಭವ ಹೀಗಿತ್ತು: ಸಮುದ್ರದಲ್ಲಿ ನಾನು ಹಡಗಿನಲ್ಲಿದ್ದೆ, ಏನನ್ನೂ ನಿರೀಕ್ಷಿಸುತ್ತಿರಲಿಲ್ಲ (ಸಹಜವಾಗಿ ನನ್ನ ಅಂತರಂಗ ಜೀವನದಲ್ಲಿ ಕಾರ್ಯಮಗ್ನಳಾಗಿದ್ದೆ. ಆದರೆ ದೈಹಿಕವಾಗಿ ಮಾತ್ರ ಹಡಗಿನಲ್ಲಿದ್ದೆ ಆಗ ಹಠಾತ್ತಾಗಿ, ಒಮ್ಮಿಂದೊಮ್ಮೆಗೆ, ಪಾಂಡಿಚೇರಿಯಿಂದ ಎರಡು

ನಾವಿಕರ ಮೈಲು (ಸುಮಾರು 500 ಕಿ.ಮಿ) ದೂರದಲ್ಲಿರುವಾಗ ಗಾಳಿಯ ವಾತಾವರಣದ ಗುಣಧರ್ಮ, ಅದು ಭೌತಿಕ ಗುಣಧರ್ಮವಾಗಿತ್ತೆಂದು ಹೇಳಬಹುದು, ಅದೆಷ್ಟರ ಮಟ್ಟಿಗೆ ಬದಲಾಯಿತೆಂದರೆ ನಾವು ಶ್ರೀ ಅರವಿಂದರ ತೇಜೋವಲಯವನ್ನು ಪ್ರವೇಶಿಸುತ್ತೀದ್ದೇವೆ ಎಂದು ನನಗೆ ತಿಳಿದುಬಂದಿತು. ಅದು ಭೌತಿಕ ಅನುಭವವಾಗಿತ್ತು. ಯಾರಲ್ಲಾದರೂ ಪ್ರಜ್ಞೆ ಸಾಕಷ್ಟು ಜಾಗ್ರತವಾಗಿದ್ದರೆ ಅವರಿಗೂ ಇಂತಹದೇ ಅನುಭವವಾಗುತ್ತದೆಂದು ನಾನು ಭರವಸೆ ನೀಡುತ್ತೇನೆ.

ನನಗೆ ಇದಕ್ಕೆ ವಿರುದ್ಧವಾದ ಅನುಭವ ಕೂಡ ಆಗಿದೆ. ನಾನಿಲ್ಲಿಗೆ ಬಂದು ಅನೇಕ ವರ್ಷಗಳು ಕಳೆದ ನಂತರ ಮೊದಲ ಸಲ ನಾನು ಕಾರಿನಲ್ಲಿ ಹೊರಗೆ ಹೋಗಿದ್ದೆ. ಸರೋವರದ ಆಚೆಗೆ ಸ್ವಲ್ಪ ದೂರ ಹೋಗುತ್ತಿದ್ದಂತೆಯೇ ಹಠಾತ್ತಾಗಿ ವಾತಾವರಣ ಬದಲಾಗುತ್ತಿದೆ ಎಂಬ ಭಾವನೆ ನನಗೆ ಬಂದಿತು. ಮೊದಲಿನ ಪೂರ್ಣತೆ, ಚೈತನ್ಯ, ಪ್ರಕಾಶ ಹಾಗೂ ಶಕ್ತಿ ಇವು ಕುಗ್ಗಿದವು, ನಂತರ ಏನೂ ಇಲ್ಲ. ನಾನು ಮಾನಸಿಕ ಇಲ್ಲವೆ ಪ್ರಾಣಿಕ ಪ್ರಜ್ಞೆಯಲ್ಲಿರಲಿಲ್ಲ, ಆದರೆ ಸಂಪೂರ್ಣವಾಗಿ ಭೌತಿಕ ಪ್ರಜ್ಞೆಯಲ್ಲಿದ್ದೆ. ಸರಿ, ಭೌತಿಕ ಪ್ರಜ್ಞೆಯಲ್ಲಿ ಹೆಚ್ಚು ಸಂವೇದನಾಶೀಲರಾದವರು ಅದನ್ನು ಮೂರ್ತರೂಪದಲ್ಲಿ ಭಾವನೆಗೆ ತಂದುಕೊಳ್ಳಲೇಬೇಕು. ನಾವು ಆಶ್ರಮ ಎಂದು ಕರೆಯುವ ಸ್ಥಳದಲ್ಲಿ ಶಕ್ತಿಯ ಘನೀಕರಣವಿದೆ, ಅದು ಪಟ್ಟಣದಲ್ಲಿ ಇದ್ದ ಹಾಗಿರುವುದಿಲ್ಲ. ಮತ್ತು ಅದಕ್ಕೂ ಕಡಿಮೆ ರೀತಿಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿರುತ್ತದೆ ಎಂದು ನಾನು ದೃಢೀಕರಿಸುತ್ತೇನೆ.

**CWM, 4/224** **– ಶ್ರೀಮಾತೆ**

*

**ದೈವೀ ಸತ್ಯದ ಲೋಕ ತಯಾರಾಗಿದೆ, ಮನುಷ್ಯ ತಯಾರಾಗಿಲ್ಲ**

ನಾನು ಬೇರೊಂದು ಲೋಕದಲ್ಲಿದ್ದುದನ್ನು ಕಂಡುಕೊಂಡೆ, ಆದರೆ ಬಹಳ ದೂರದಲ್ಲಿ ಅಲ್ಲ, (ನಾನು ಸಂಪೂರ್ಣ ಸಮಾಧಿಯಲ್ಲಿರಲಿಲ್ಲ). ಈ ಲೋಕ ಬಹುಮಟ್ಟಿಗೆ ಭೌತಿಕ ಲೋಕದಷ್ಟೇ ವಾಸ್ತವವಾಗಿತ್ತು. ಅಲ್ಲಿ ಕೋಣೆಗಳಿದ್ದವು– ಶ್ರೀ ಅರವಿಂದರು ವಿಶ್ರಾಂತಿ ಪಡೆಯುತ್ತಿದ್ದ ಹಾಸಿಗೆಯಿತ್ತು– ಮತ್ತು ಅವರು ಅಲ್ಲಿ ವಾಸಿಸುತ್ತಿದ್ದರು, ಅವರು ಅಲ್ಲಿ ಸದಾ ಕಾಲಕ್ಕೆ ಇದ್ದರು: ಅದು ಅವರ ನಿವಾಸವಾಗಿತ್ತು. ಅಲ್ಲಿ ನನ್ನ ಕೋಣೆ ಕೂಡ ಇತ್ತು, ಅದರಲ್ಲಿ ಇಲ್ಲಿರುವಂತಹ

ದೊಡ್ಡ ನಿಲುಗನ್ನಡಿಯಿತ್ತು, ಹಣಿಗೆಗಳಿದ್ದವು, ಎಲ್ಲ ಬಗೆಯ ವಸ್ತುಗಳಿದ್ದವು. ಈ ಎಲ್ಲ ವಸ್ತುಗಳಲ್ಲಿ ಇರುವ ದ್ರವ್ಯ ಭೌತಿಕ ಜಗತ್ತಿನಲ್ಲಿರುವಷ್ಟೇ ಘನರೂಪದ್ದಾಗಿತ್ತು. ಆದರೆ ಅವು ತಮ್ಮದೇ ಆದ ಬೆಳಕಿನಿಂದ ಹೊಳೆಯುತ್ತಿದ್ದವು. ಅದು ಅರೆ ಪಾರದರ್ಶಕವಾಗಿರಲಿಲ್ಲ, ತೇಜೋರಾಶಿಯನ್ನು ಹರಡುವಂತಹದಾಗಿರಲಿಲ್ಲ, ಆದರೆ ಸ್ವ–ಪ್ರಕಾಶವುಳ್ಳದ್ದಾಗಿತ್ತು. ಆ ಕೋಣೆಗಳಲ್ಲಿದ್ದ ಅನೇಕ ವಸ್ತುಗಳು, ಸಾಮಾನುಗಳು ಇಲ್ಲಿರುವ ಭೌತಿಕ ವಸ್ತುಗಳ ಹಾಗೆ ಅಪಾರದರ್ಶಕವಾಗಿರಲಿಲ್ಲ, ಅವು ನಮಗೆ ತಿಳಿದ ಹಾಗೆ ಭೌತಿಕ ಜಗತ್ತಿನಲ್ಲಿರುವಂತೆ ಶುಷ್ಕ (ಒಣ) ವಾಗಿರಲಿಲ್ಲ, ಬಿರುಸಾಗಿರಲಿಲ್ಲ.

ಮತ್ತು ಅಲ್ಲಿ ಶ್ರೀ ಅರವಿಂದರಿದ್ದರು, ತಮ್ಮ ಅದೇ ರಾಜ ಗಾಂಭೀರ್ಯ ಹಾಗೂ ಅದ್ಭುತ ಸೌಂದರ್ಯದೊಂದಿಗಿದ್ದರು. ಮೊದಲಿದ್ದಂತೆ ಸುಂದರ ಕೂದಲನ್ನು ಹೊಂದಿದ್ದರು. ಅದು ಎಷ್ಟೊಂದು ಮೂರ್ತ ಸ್ವರೂಪದ್ದಾಗಿತ್ತು, ಎಷ್ಟೊಂದು ವಾಸ್ತವವಾದದ್ದಾಗಿತ್ತು.

ದೈವೀ ಸತ್ಯದ ಈ ಲೋಕವನ್ನು ಏನೂ ಇಲ್ಲದಿರುವ ಸ್ಥಿತಿಯಿಂದ ಸೃಷ್ಟಿಸಬೇಕಾಗಿಲ್ಲ: ಅದು ಪೂರ್ತಿ ತಯಾರಾಗಿದೆ. ನಾವಿರುವ ಈ ಜಗತ್ತಿನ ಒಳ ಉಡುಪಿನಂತೆ ತಯಾರಾಗಿಯೇ ಇದೆ. ಪ್ರತಿಯೊಂದೂ ಅಲ್ಲಿದೆ.

ಎರಡು ದಿನಗಳ ಪೂರ್ತಿ ಕಾಲದಲ್ಲಿ ನಾನು ಆ ಸ್ಥಿತಿಯಲ್ಲಿ ಉಳಿದುಕೊಂಡಿದ್ದೆ. ಎರಡು ದಿನ ಪರಿಪೂರ್ಣ ಆನಂದದಲ್ಲಿದ್ದೆ. ಆ ಇಡೀ ಕಾಲದಲ್ಲಿ ಶ್ರೀ ಅರವಿಂದರು ನನ್ನ ಜೊತೆಗಿದ್ದರು, ನಾನು ನಡೆದಾಡುತ್ತಿದ್ದಾಗ ಅವರೂ ನನ್ನ ಜೊತೆಗೆ ನಡೆದಾಡಿದರು, ನಾನು ಕುಳಿತುಕೊಂಡಾಗ ನನ್ನ ಬಳಿ ಕುಳಿತುಕೊಂಡರು. ಅಗಸ್ಟ 15ರ ದರ್ಶನ ದಿನದಂದು ದರ್ಶನ ಕಾರ್ಯಕ್ರಮ ನಡೆಯುತ್ತಿರುವ ಸಮಯದಲ್ಲಿ ಅವರು ಸತತ ಅಲ್ಲಿದ್ದರು. ಆದರೆ ಅದರ ಬಗ್ಗೆ ಅರಿವು ತಂದುಕೊಂಡವರು ಯಾರು? ಅತಿ ಕಡಿಮೆ ಜನರು, ಒಬ್ಬರು ಇಲ್ಲವೆ ಇಬ್ಬರಿಗೆ ಅದರ ಅರಿವಾಗಿರಬಹುದು. ಆದರೆ ಅವರನ್ನು ನೋಡಿದವರಾರು? ಯಾರೂ ಇಲ್ಲ.

ಈ ಎಲ್ಲ ಜನರನ್ನು, ಇಡೀ ಕಾರ್ಯಕ್ಷೇತ್ರವನ್ನು ನಾನು ಶ್ರೀ ಅರವಿಂದರಿಗೆ ತೋರಿಸಿದೆ, ಅಲ್ಲಿರುವ, ಇಷ್ಟೊಂದು ಹತ್ತಿರವಿರುವ ನಿಜವಾದ ಈ ಲೋಕ

ಮಿಥ್ಯೆಯದಾದ ನಮ್ಮ ಜಗತ್ತಿನ ಸ್ಥಾನವನ್ನು ತೆಗೆದುಕೊಳ್ಳಲು ಯಾವಾಗ ಬರುವುದು ಎಂದು ನಾನವರಿಗೆ ಕೇಳಿದೆ. ಇನ್ನೂ ತಯಾರಾಗಿಲ್ಲ. ಅವರು ಉತ್ತರ ನೀಡಿದ್ದು ಅದಿಷ್ಟೇ ಆಗಿತ್ತು. ಇನ್ನೂ ತಯಾರಾಗಿಲ್ಲ.

ಮತ್ತು ಆದಾಗ್ಯೂ ಈ ಜಗತ್ತಿನಿಂದ ಅ ಲೋಕಕ್ಕೆ ಹೋಗಲು ಇಲ್ಲವೆ ಆ ಲೋಕ ಈ ನಿಜವಾದ ಜಗತ್ತಾಗಲು ಸ್ವಲ್ಪ ಕಾಲ ತೆಗೆದುಕೊಳ್ಳಲು ತತ್ಕ್ಷಣ ಉಂಟಾಗುವ ಸದ್ದು **(click)** ಸಾಕು ಇಲ್ಲವೆ ಆಂತರಿಕ ಮನೋಭಾವದಲ್ಲಿ ಸ್ವಲ್ಪ ಹಿಮ್ಮೊಗವಾಗುವಿಕೆ ಸಾಕು. ನಾನು ಅದನ್ನು ಹೇಗೆ ವಿವರಿಸಲಿ? ಅದು ಸಾಧಾರಣ ಪ್ರಜ್ಞೆಗೆ ಗ್ರಾಹ್ಯವಾಗುವಂತಹದಲ್ಲ; ಬಹಳ ಸ್ವಲ್ಪ ಆಂತರಿಕ ಸ್ಥಾನ ಬದಲಾವಣೆ, ಗುಣಧರ್ಮದಲ್ಲಿ ಬದಲಾವಣೆ ಸಾಕು.

**ಅನುಯಾಯಿಯೊಡನೆ ಮಾತುಕತೆ ಅಕ್ಟೋಬರ 6,1959 – ಶ್ರೀಮಾತೆ**

*

**ಸಮಾಧಿ**

ಏನೋ ಒಂದು ಸರಿಯಾಗಿರದಿದ್ದರೆ, ಅದಕ್ಕೆ ಕಾರಣ ಏನು ಎಂಬುದನ್ನು ನೀವು ತಿಳಿದುಕೊಳ್ಳಬಯಸಿದರೆ ಇಲ್ಲವೆ ದೌರ್ಬಲ್ಯವೊಂದನ್ನು ತೊಡೆದು ಹಾಕಬೇಕೆಂದು ಬಯಸಿದರೆ, ಸಂಪೂರ್ಣ ರೋಗಮುಕ್ತರಾಗಲು ಬಯಸಿದರೆ, ನಿರ್ಮಲರಾಗಬೇಕೆಂದು ಬಯಸಿದರೆ, ಪರಿಶುದ್ಧರಾಗಲು ತೊಂದರೆಯೊಂದನ್ನು ತೆಗೆದು ಹಾಕಲು ಬಯಸಿದರೆ– ಯಾವುದಕ್ಕೂ ಉತ್ತರಕ್ಕಾಗಿ ಸಮಾಧಿಯ ಬಳಿ ಬಂದು ಶ್ರೀ ಅರವಿಂದರನ್ನು ಕೇಳಿಕೊಳ್ಳಿರಿ ಮತ್ತು ನಿಮಗೆ ಉತ್ತರ ದೊರೆಯುವುದು. ಕೇವಲ ಅವರ ಉತ್ತರವಷ್ಟೇ ಅಲ್ಲ, ಅವರ ಆಶೀರ್ವಾದಗಳು, ಕರುಣೆ, ಶಾಂತಿ, ಜ್ಞಾನೋದಯ ಇವೆಲ್ಲ ದೊರಕುತ್ತವೆ. ಸರ್ವ–ಸಮರ್ಥವಾದ ಅವರ ಪ್ರೇಮ ನಿಮ್ಮನ್ನು ಆವರಿಸುವುದು ಹಾಗೂ ಹಿಡಿದುಕೊಳ್ಳುವುದು. ಒಮ್ಮೆ ನೀವು ಅವರಿಗೆ ಕೊಟ್ಟುಕೊಂಡರೆ ಎಲ್ಲ ಅವಘಡಗಳ ವಿರುದ್ಧ ರಕ್ಷಣೆ ಪಡೆಯುವಿರಿ. ಅದಿರುವುದು ಹೀಗೆ– ಅವರ ಪ್ರಭಾವ. ಸರಳರಾದವರು, ಶ್ರದ್ಧಾನ್ವಿತರು ಮತ್ತು ವಿನಮ್ರರು ಆಗಿರುವವರಿಗೆ ಶ್ರೀ ಅರವಿಂದರು ತಮ್ಮನ್ನು ತೆರೆದು ತೋರಿಸುತ್ತಾರೆ. ಅವರು ಅಲ್ಲಿ ಪರಿಪೂರ್ಣ ಪ್ರಜ್ಞೆಯೊಂದಿಗಿದ್ದಾರೆ ಮತ್ತು ಜಗತ್ತಿನ ಎಲ್ಲ ಚಟುವಟಿಕೆಗಳಿಗೆ

ನಿರ್ದೇಶನ ನೀಡುತ್ತಾರೆ. ನಾನು ಏನಾದರೊಂದನ್ನು ತಿಳಿದುಕೊಳ್ಳಬೇಕೆಂದು ಬಯಸಿದಾಗ ಅವರನ್ನು ಕೇಳುತ್ತೇನೆ, ಕೂಡಲೆ ನನಗೆ ಉತ್ತರ ನೀಡುತ್ತಾರೆ.

**Blessings of the Grace, pp.120-21** **– ಶ್ರೀಮಾತೆ**

*

**ಅವರು ತಮ್ಮನ್ನು ವಿಶ್ವಂಭರಗೊಳಿಸಿಕೊಂಡಿದ್ದಾರೆ**

ನಿಮಗೆ ತಿಳಿದ ಹಾಗೆ, ಮೊದಲು ಅವರು ತಮ್ಮ ದೇಹದಲ್ಲಿದ್ದಾಗ ಜನರು ಸಾಮಾನ್ಯವಾಗಿ ಹೇಳುತ್ತಿದ್ದುದು ಹೀಗಿದೆ: "ಅವರು ತುಂಬ ದೂರ ಇದ್ದಾರೆ, ಜನರಿಗೆ ಸಮೀಪಿಸಲಾಗದವರಾಗಿದ್ದರು, ಇಲ್ಲಿರುವ ಸಾಧಕರ ವಿಷಯಗಳ ಬಗ್ಗೆ ಚಿಂತಿಸುತ್ತಿರಲಿಲ್ಲ." ಅದು ಪೂರ್ತಿ ಸರಿಯಾದದ್ದಲ್ಲ, ಏಕೆಂದರೆ ನಿಜವಾಗಿ, ತಮ್ಮ ಕಾರ್ಯವಾಗಿದ್ದುದು ಈ ಜಗತ್ತನ್ನು ಉನ್ನತ ಮಟ್ಟಕ್ಕೆ ಏರುವಂತೆ ಮಾಡಿ ಅದನ್ನು ಅತಿಮಾನಸ ಜಗತ್ತಿನ ಆಗಮನಕ್ಕಾಗಿ ತಯಾರು ಮಾಡುವುದಾಗಿತ್ತು. ಆ ಕಾರ್ಯವನ್ನು ಬದಿಗೊತ್ತಿ ರಾತ್ರಿಯ ನಂತರದ ರಾತ್ರಿಯ ಕಾಲವನ್ನು ಗುಡ್ಡೆಗಟ್ಟಲೆ ಪತ್ರಗಳಿಗೆ ಉತ್ತರ ನೀಡುವುದರಲ್ಲಿ ಕಳೆಯುತ್ತಿದ್ದರು. ಸಾಧನೆಯಲ್ಲಿ ಸಾಧಕರು ಮಾಡುತ್ತಿದ್ದ ಪ್ರಗತಿಯನ್ನು ಅನುಸರಿಸಿಕೊಂಡು ಹೋಗಲು ಅವರು ಪ್ರಯಾಸ ಪಡುತ್ತಿದ್ದರು ಮತ್ತು ಅವರಿಗೆ ಸಂಬಂಧಿಸಿದ ವಿಷಯಗಳಲ್ಲಿ ತೊಡಗಿಕೊಂಡಿ–ರುತ್ತಿದ್ದರು. ಆದರೂ ಅವರು ವಿಷಯಗಳನ್ನು ಹೇಗೆ ಏರ್ಪಡಿಸಿದ್ದರೆಂದರೆ ಸಾಧಕರು ನನಗೆ ನಿವೇದಿಸಬಹುದಾಗಿತ್ತು ಮತ್ತು ವ್ಯಾವಹಾರಿಕವಾಗಿ ಭೌತಿಕ ಸ್ತರದಲ್ಲಿ ಹಾಗೂ ಆಂತರಿಕವಾಗಿ ಸಾಧನೆಗಾಗಿ ನನ್ನ ಆಶೀರ್ವಾದಗಳನ್ನು ಹಾಗೂ ಸಹಾಯವನ್ನು ಪಡೆಯಬಹುದಾಗಿತ್ತು. ನನ್ನ ಮೂಲಕ ಅವರು ಅತಿಮಾನಸದತ್ತ ಪ್ರಜ್ಞೆಯ ಉನ್ನತ ಸ್ತರಗಳನ್ನು ಸಿದ್ಧಿಸಿಕೊಳ್ಳಬಹುದಾಗಿತ್ತು ಇಲ್ಲವೆ ಯಾವುದೇ ತೊಂದರೆಯ ಮೇಲೆ ಜಯ ಸಾಧಿಸಬಹುದಾಗಿತ್ತು. ಅತಿಮಾನಸಕ್ಕಾಗಿ ಇದ್ದ ನಮ್ಮ ಅನ್ವೇಷಣೆಗಾಗಿ ಇದ್ದ ಕಾರ್ಯವನ್ನು ವಿರೋಧಿಸುತ್ತಿದ್ದ ಭಿನ್ನ ಲೋಕಗಳನ್ನು, ವೈವಿಧ್ಯಮಯ ಸಾಮರ್ಥ್ಯಗಳನ್ನು ಪ್ರಜ್ಞೆಯ ಅಸಂಖ್ಯಾತ ಸ್ಥಿತಿಗಳನ್ನು ಕೇವಲ ಜಯಿಸಬೇಕಾಗಿತ್ತು ಅಷ್ಟೇ ಅಲ್ಲ, ಅವುಗಳನ್ನು ಅಧೀನಪಡಿಸಿಕೊಳ್ಳಬೇಕಾಗಿತ್ತು, ಅವುಗಳ ಮೇಲೆ ಪ್ರಭುತ್ವ ಪಡೆಯಬೇಕಾಗಿತ್ತು. ಪ್ರಾಪಂಚಿಕ ವಿಷಯಗಳನ್ನು ಹಾಗೆಯೇ ವ್ಯಕ್ತಿಗಳ ಪ್ರಗತಿಯನ್ನು ಹಾಗೂ

ಸಾಮೂಹಿಕ ಯೋಗವನ್ನು ಕುರಿತು ಇರುವ ಸಮಸ್ಯೆಗಳನ್ನು ಬಗೆಹರಿಸುವುದನ್ನು ನನಗೆ ಬಿಟ್ಟುಕೊಡಲಾಗಿತ್ತು. ಜನರೊಡನೆ ಬೆರೆಯುವುದರಲ್ಲಿ ನಿರತರಾಗುವುದಕ್ಕೆ, ಅವರ ದೂರುಗಳನ್ನು ಕೇಳುವುದಕ್ಕೆ ಅವರಿಗೆ ಸಮಯದ ಅಭಾವವಿರುತ್ತಿತ್ತು. ಈಗ ಅವರು ತಮ್ಮನ್ನು ವಿಶ್ವಂಭರಗೊಳಿಸಿಕೊಂಡಿದ್ದಾರೆ, ವಿಶಾಲವಾಗಿದ್ದಾರೆ, ಸುಪರಿಚಿತರಾಗಿದ್ದಾರೆ ಮತ್ತು ಹತ್ತಿರದವರಾಗಿದ್ದಾರೆ. ಹತ್ತಿರವಿರುವಿಕೆ ಹಾಗೂ ನೇರವಾದ ಪ್ರಭಾವದ ಮೂಲಕ ಅವರು ಪ್ರತಿಯೊಬ್ಬರೊಡನೆ ಸಂಬಂಧ ಹೊಂದಿದ್ದಾರೆ, ಹಾಗಾಗಿ ಪ್ರತಿಯೊಬ್ಬರೂ ಅವರ ಬಳಿ ಸಾಗಿ ಹೋಗಬಹುದು.

ಅದು ಅತ್ಯಂತ ಪ್ರಬಲವಾದದ್ದು. ಅವರ ಸಾನ್ನಿಧ್ಯ ಕಂಪಿಸುತ್ತದೆ, ಮೂರ್ತರೂಪದ್ದಾಗಿದೆ, ಅದು ಸಮಾಧಿಯ ಸುತ್ತಲೂ ಇದೆ. ಮತ್ತು ಅವರ ಪ್ರಭಾವ ಒಳನುಗ್ಗುತ್ತದೆ. ಕೇಂದ್ರ ಸತ್ತೆಯನ್ನು ಸ್ಪರ್ಶಿಸುತ್ತದೆ ಮತ್ತು ಪ್ರಜ್ಞೆಯನ್ನು ಆಧ್ಯಾತ್ಮಿಕ ಜೀವನಕ್ಕಾಗಿ ಜಾಗ್ರತಗೊಳಿಸುತ್ತದೆ. ಅಜ್ಞೇಯತಾವಾದಿಗಳಿರಲಿ, ನಂಬಿಕೆಯಿಲ್ಲದವರಿರಲಿ, ದುರುದ್ದೇಶವಿದ್ದವರಿರಲಿ ಸಮಾಧಿಯನ್ನು ಕುತೂಹಲದಿಂದ ದರ್ಶನ ಮಾಡಿದಾಗಲೂ ರಹಸ್ಯಮಯವಾದ ರಸವಿದ್ಯೆ (**alchemy**) ಯಿಂದ ಆಶ್ಚರ್ಯಚಕಿತರಾಗುತ್ತಾರೆ ಮತ್ತು ಆಂತರಿಕ ಶಾಂತಿಯನ್ನು ಪಡೆಯುತ್ತಾರೆ, ಏಕೆಂದರೆ ಅಲ್ಲಿ ಅವರು ತಮ್ಮ ಶಾಂತಿಯ ಮತ್ತು ಕರುಣೆಯ ಧಾರೆಯನ್ನು ಸತತ ಸುರಿಸುತ್ತಾರೆ. ಇದು ಅವರು ಸಮಾಧಿಯ ಮುಂದೆ ಹಾದು ಹೋದಾಗ ಅವರನ್ನು ಮಿಂದೇಳಿಸುತ್ತದೆ. ಅದು ಅವರ ಶಕ್ತಿಯ ಹಾಗೂ ದೈವೀ ಸಾನ್ನಿಧ್ಯದ ನಂಬಲಾಗದಂತೆ ಹೇರುವ ಚಟವಟಿಕೆಯಾಗಿರುತ್ತದೆ.

**Blessings of the Grace, pp.121-22** **– ಶ್ರೀಮಾತೆ**

*

ನೀನು ಹೇಳುವುದರಲ್ಲಿ ಪ್ರೇಮ ನಿಸ್ವಾರ್ಥದ್ದಾಗಿದೆ, ಮತ್ತು ಕರಾರುರಹಿತವಾಗಿದೆ ಎಂಬುದು ಮಾತ್ರ ಒಂದೇ ಒಂದು ಸತ್ಯ ಸಂಗತಿಯಾಗಿದೆ. ಇಂತಹ ಪ್ರೇಮ ಶ್ರೀ ಅರವಿಂದರದು ಹಾಗೂ ನನ್ನದು ಆಗಿದೆ.

**CWM, 13/69** **– ಶ್ರೀಮಾತೆ**

*

ಶ್ರೀ ಅರವಿಂದರ ತೋರಿಕೆಯನ್ನು ಕೈಗೆತ್ತಿಕೊಳ್ಳುವುದರಲ್ಲಿ ಯಶಸ್ವಿಯಾದ ಆಸುರೀ ಶಕ್ತಿ ಅತಿಮಾನಸ ಸಿದ್ಧಿಯ ಹೆಸರಿನಲ್ಲಿ ಹೊಸ ಧರ್ಮವನ್ನು, ಹೊಸ ಯೋಚನೆಯನ್ನು ಬಹುಶಃ ಕ್ರೂರವಾದ, ನಿರ್ದಯ ರೀತಿಯಲ್ಲಿ ಸೃಷ್ಟಿಸಬಹುದು. ಆದರೆ ಪ್ರತಿಯೊಬ್ಬರು ಅದು ಸತ್ಯವಲ್ಲ ಎಂಬುದನ್ನು ತಿಳಿದಿರಬೇಕು, ಅದು ಶ್ರೀ ಅರವಿಂದರ ಬೋಧನೆಯಲ್ಲ, ಅವರ ಬೋಧನೆಯ ಸತ್ಯವಲ್ಲ ಶ್ರೀ ಅರವಿಂದರ ಸತ್ಯ ಪ್ರೇಮದ, ಪ್ರಕಾಶದ ಮತ್ತು ದಯೆಯ ಒಂದು ಸತ್ಯ. ಅವರು ಒಳ್ಳೆಯವರು, ಶ್ರೇಷ್ಠರಾದವರು, ಮತ್ತು ದಯಾರ್ದ್ರರಾದವರು ಹಾಗೂ ದೈವಿಕರಾದವರು. ಕೊನೆಯ ವಿಜಯವನ್ನು ದೊರಕಿಸುವವರು ಅವರೇ ಆಗಿರುತ್ತಾರೆ.

**CWM, 15/389** **– ಶ್ರೀಮಾತೆ**

*

ಭಗವಂತನ ಪ್ರಕಟಣೆ ಜೈಲಿನಲ್ಲಿ ಗುಡಿಸಲುಗಳಲ್ಲಿ, ಆಶ್ರಮಗಳಲ್ಲಿ, ಬಡವನ ಹೃದಯದಲ್ಲಿ ಆಗಿದೆ, ಅದಕ್ಕೂ ಹೆಚ್ಚಾಗಿ ಸುಖ–ಸೌಲಭ್ಯವಿರುವ ಶ್ರೀಮಂತರ ದೇವಾಲಯಗಳಲ್ಲಿ, ಇಂದ್ರಿಯ ಸುಖ ಬಯಸುವ ಸ್ವಾರ್ಥಿ ಪ್ರಾಪಂಚಿಕ ಜನರ ವಿಶ್ರಾಮದ ಶಯ್ಯೆಯಲ್ಲಿ ಆ ಪ್ರಕಟಣೆಯಾಗಬೇಕೆ? ಭಗವಂತ ಪಾಂಡಿತ್ಯವನ್ನು, ಗೌರವವನ್ನು, ನಾಯಕತ್ವವನ್ನು, ಜನ ಸಾಮಾನ್ಯರ ಜಯಘೋಷವನ್ನು, ಬಾಹ್ಯ ಸೌಲಭ್ಯವನ್ನು ಮತ್ತು ಕುತರ್ಕವನ್ನು ಅರಸುವುದಿಲ್ಲ. ಬಡವರಿಗೆ ತನ್ನನ್ನು ದಯಾರ್ದ್ರ ಹೃದಯದ ದೈವೀ ಮಾತೆಯ ರೂಪದಲ್ಲಿ ತೆರೆದು ತೋರಿಸುತ್ತಾನೆ. ದೈವೀ ಪ್ರಭುವನ್ನು ಎಲ್ಲ ಜನರಲ್ಲಿ, ಎಲ್ಲ ರಾಷ್ಟ್ರಗಳಲ್ಲಿ, ತನ್ನದೇ ದೇಶದಲ್ಲಿ, ದುಃಖಿತರಾದವರಲ್ಲಿ, ಬಡವರಲ್ಲಿ, ಪತಿತರಾದವರಲ್ಲಿ ಮತ್ತು ಪಾಪಿಗಳಲ್ಲಿ ನೋಡುವವನು ಮತ್ತು ದೈವೀ ಪ್ರಭುವಿನ ಸೇವೆಗೆ ತನ್ನ ಜೀವನವನ್ನು ಅರ್ಪಿಸುವವನು ಆದವನ ಹೃದಯದಲ್ಲಿ ದೈವೀ ಪ್ರಭು ಬರುತ್ತಾನೆ.

**ಬಂಗಾಲಿ ಬರಹಗಳು, ಪು. 278** **– ಶ್ರೀ ಅರವಿಂದರು**

*

ನಾನು ಯಾವಾಗಲೂ ಅವರನ್ನು ಪರಿಪೂರ್ಣವಾಗಿ ಶಾಂತವಾಗಿರುವ ಮತ್ತು ಮುಗುಳ್ನಗುತ್ತಿರುವ ಮುಖ ಮುದ್ರೆಯುಳ್ಳವರನ್ನಾಗಿ ನೋಡಿದ್ದೇನೆ, ಮತ್ತು

ಅದೆಲ್ಲದಕ್ಕಿಂತಲೂ ಹೆಚ್ಚಾಗಿದ್ದ ಪ್ರಬಲ ಅಭಿವ್ಯಕ್ತಿ ಕರುಣೆಯದಾಗಿತ್ತು. ಅದು ಅವರಲ್ಲಿ ತೋರಿಬರುವ ಪ್ರಧಾನ ಅಂಶ. ಕರುಣೆಯನ್ನು ಅಭಿವ್ಯಕ್ತಪಡಿಸುವಿಕೆ... ಎಷ್ಟೊಂದು ಶಾಂತಿಯುತವಾಗಿತ್ತು, ಪ್ರಶಾಂತವಾಗಿತ್ತು, ಓಹ್ ಅದು ಮಹಾ ವೈಭವದಿಂದ ಕೂಡಿಕೊಂಡಿತ್ತು.

**ಅನುಯಾಯಿಯೊಂದಿಗೆ ಮಾತುಕತೆ, ಅಕ್ಟೋಬರ 16, 1965 – ಶ್ರೀಮಾತೆ**

*

ಶ್ರೀ ಅರವಿಂದರು ಬದಲಾವಣೆಯನ್ನು ಬಯಸುವ, ಪ್ರಗತಿಗಾಗಿ ಮುಂದೂಡಿಕೊಂಡು ಹೋಗುವ, ಚಲಿಸಲು ಬಯಸುವ, ಗತಕಾಲವನ್ನು ನಿರಾಕರಿಸುವ ಜನರ ವರ್ಗಕ್ಕೆ ಸೇರಿದ್ದರು – ಅದು ಬಹಳಷ್ಟು ಆ ರೀತಿಯದಾಗಿದ್ದಿತು. ವಿಷಯಗಳೊಡನೆ, ಜನರೊಡನೆ ಅವರಿರುವ ಹಾಗೆ ತೃಪ್ತಿಯಿಂದಿರುವುದಕ್ಕಾಗಿ ಅವರು ದೊಡ್ಡ ಪ್ರಯತ್ನ ಮಾಡಬೇಕಾಗುತ್ತಿತ್ತು; ಅವರ ಕರುಣೆ ತಮ್ಮ ಸುತ್ತಲಿದ್ದವರನ್ನು ಅವರಿದ್ದ ಹಾಗೆ ಒಪ್ಪಿಕೊಳ್ಳಲು ಕಾರಣವಾಗಿತ್ತು. ಹಾಗಿರದಿದ್ದರೆ ಅವರು ಹೆಚ್ಚಿನ ರೀತಿಯಲ್ಲಿ ವೇದನೆ ಪಡಬೇಕಾಗುತ್ತಿತ್ತು.

**ಅನುಯಾಯಿಯೊಡನೆ ಮಾತುಕತೆ, ಡಿಸೆಂಬರ 4,1965 – ಶ್ರೀಮಾತೆ**

*

ಯಾರು ತನ್ನದೇ ವೈಯುಕ್ತಿಕ ಮೋಕ್ಷಕ್ಕಾಗಿ ಶ್ರಮಪಡುತ್ತಾನೋ, ಅಥವಾ ಕೆಲವು ಜನರ ಮೋಕ್ಷಕ್ಕಾಗಿ ದುಡಿಯುತ್ತಾನೋ ಅವನು ಯಶಸ್ವಿಯಾದರೂ ಅವನ ಕಾರ್ಯ ಚಿಕ್ಕದಾದದ್ದೇ; ಇಡೀ ಮನುಕುಲದಲ್ಲಿ ಆತ್ಮದ ಶಾಂತಿಯನ್ನು, ಸಂತೋಷವನ್ನು, ಪರಿಶುದ್ಧತೆಯನ್ನು ಮತ್ತು ಪರಿಪೂರ್ಣತೆಯನ್ನು ತರುವುದಕ್ಕಾಗಿ ಜೀವಿಸುವವನು ವಿಫಲನಾದರೂ ಇಲ್ಲವೆ ಒಂದು ಅವಧಿಗಾಗಿ ಯಶಸ್ವಿಯಾದರೂ ಅವನ ಕಾರ್ಯ ಅನಂತಪಟ್ಟು ಶ್ರೇಷ್ಠವಾದದ್ದು.

**CWSA, 13/90-91 - ಶ್ರೀ ಅರವಿಂದರು**

*

# ಸ್ಮರಣೆಗಳು ಹಾಗೂ ಚಿಂತನಗಳು

ಅದೆಲ್ಲದರ ಹಾಗೆ ಅತ್ಯುಚ್ಚ ಸ್ತರಗಳು ಅಷ್ಟೊಂದು ಸರಿ ಹೊಂದಿಸಿಕೊಳ್ಳು–ವಂತಹವಲ್ಲ. ಅವು ಹಾಗಿದ್ದರೆ ಅತಿಮನಸ್ಸನ್ನು ಭೌತಿಕ ಪ್ರಜ್ಞೆಯಲ್ಲಿ ಕೆಳಗಿಳಿಸಿ ತರುವುದಕ್ಕೆ ಹಾಗೂ ಸಂಘಟಿಸುವುದಕ್ಕೆ ಅಷ್ಟೊಂದು ಕಠಿಣ ಏಕಾಗಬೇಕು? ನೀವೆಲ್ಲರೂ ಆದದ್ದಾಗಲಿ ಎಂಬ ಮನೋವೃತ್ತಿಯವರು, ಇಷ್ಟಬಂದಂತೆ ನಡೆಯುವ ಬಲೆ ಹೆಣೆಯುವವರು ಹಾಗೂ ಮೂಢರು ಆಗಿರುವಿರಿ? ನೀವು ನಿಶ್ಚಲನೀರವತೆ, ಪ್ರಜ್ಞೆ, ಅಧಿಮಾನಸ ಅತಿಮಾನಸ ಇತ್ಯಾದಿಗಳನ್ನು ಕುರಿತು ಅವು ಅಷ್ಟೊಂದು ವಿದ್ಯುತ್ ಗುಂಡಿಗಳಾಗಿರುವಂತೆ ಮತ್ತು ನೀವು ಕೇವಲ ಅವುಗಳನ್ನು ಒತ್ತಬೇಕು ಮತ್ತು ನೀವು ಅಲ್ಲಿರುತ್ತೀರಿ ಎನ್ನುವ ಹಾಗೆ ಮಾತನಾಡುತ್ತೀರಿ. ಒಂದು ದಿನ ಅದು ಹಾಗಾಗಬಹುದು. ಆದರೆ ಅಷ್ಟರಲ್ಲಿ ನಾನು ವಿದ್ಯುತ್ ಕಾರ್ಯಕೈಕೊಳ್ಳುವ ಎಲ್ಲ ಸಾಧ್ಯವಿರುವ ವಿಧಾನಗಳನ್ನು, ಎಲ್ಲ ನಿಯಮಗಳನ್ನು, ಸಾಧ್ಯತೆಗಳು, ಅಪಾಯಗಳು ಇವೆಲ್ಲವುಗಳನ್ನು ಕುರಿತು ಪ್ರತಿಯೊಂದನ್ನು ಶೋಧಿಸಬೇಕು, ಸಂಪರ್ಕಕ್ಕಾಗಿ, ಸಾಗಣೆಗಾಗಿ ದಾರಿಗಳನ್ನು, ಇಡಿಯಾದ ತಂತಿವ್ಯವಸ್ಥೆಯನ್ನು, ಅದನ್ನು ತಪ್ಪಾಗಿ ತಿಳಿಯುವುದು ಸಾಧ್ಯವಿಲ್ಲದಂತೆ ಮಾಡುವುದನ್ನು ಕಂಡು ಹಿಡಿಯಬೇಕು, ಇದೆಲ್ಲವನ್ನು ಒಂದು ಜೀವನಾವಧಿಯಲ್ಲಿ ಕೈಕೊಳ್ಳಬೇಕು. ನನ್ನ ಪವಿತ್ರ (blessed) ಅನುಯಾಯಿಗಳು ತಮ್ಮ ಹಗುರಾದ ಇಲ್ಲವೆ ಮಬ್ಬಾದ ಪೂರ್ವಕಲ್ಪಿತ ತರ್ಕಗಳನ್ನು ನನ್ನತ್ತ ಇಡಿಯಾಗಿ ಬೇಜವಾಬ್ದಾರಿ ರೀತಿಯಲ್ಲಿ ಎಸೆಯುತ್ತಿರುವಾಗ ಮತ್ತು ಪ್ರತಿಯೊಂದನ್ನು ಸೂಚನೆಗಳ ರೂಪದಲ್ಲಲ್ಲ, ಆದರೆ ದೀರ್ಘವಾಗಿ ಹೊರಗೆಡಹಬೇಕೆಂದು ನನ್ನಿಂದ ನಿರೀಕ್ಷಿಸುತ್ತಿರುತ್ತಾರೆ, ಹೀಗಿರುವಾಗ ನಾನು ಅದೆಲ್ಲವನ್ನು ಕೈಕೊಳ್ಳಬೇಕಾಗಿದೆ. ಭಗವಂತ ಓಮ್ನಿಬಸ್‌ನಲ್ಲಿದ್ದ ಹಾಗಿದೆ.

*

**ಪಂಗಡದ ಮನಸ್ಸಿನಲ್ಲಿ ಸರ್ವಾನುಮತ**

**ಪ್ರಶ್ನೆ:** *ಇಂದು ನಾನು ಬರೆದುದನ್ನು ಕುರಿತು ಕ್ಷಮಿಸಿರಿ, ಏಕೆಂದರೆ ಎಲ್ಲ ದಿನಗಳು ನಿಮಗೆ ರವಿವಾರಗಳಿದ್ದ ಹಾಗಿರುತ್ತವೆ, ಅದು ಸರಿಯಾದುದೆಂದು ಭಾವಿಸಿದ್ದೇನೆ.*

**ಶ್ರೀ ಅ:** ಇಡೀ ಆಶ್ರಮ ಅದೇ ರೀತಿಯಲ್ಲಿ ತರ್ಕಮಾಡುತ್ತದೆಂದು ತೋರಿಬರುತ್ತದೆ ಮತ್ತು ಮುಂಬರುವ ಪರಿಣಾಮಗಳನ್ನು ಎಳೆದು ತರುವುದಕ್ಕಾಗಿ ಪ್ರತಿಯೊಬ್ಬನಿಗೆ

ತನ್ನ ವಿಶಿಷ್ಟ ಪತ್ರವನ್ನು ನನಗೆ ಬರೆಯುವುದಕ್ಕೆ ಆ ನಿರಂತರ ರವಿವಾರ ಯೋಗ್ಯವಾಗಿರುವಂತೆ ಕಂಡುಬರುತ್ತದೆ. ಪಂಗಡದ ಮನಸ್ಸಿನಲ್ಲಿ ಅದೆಂತಹ ಮನಕರಗಿಸುವ ಸರ್ವಾನುಮತ ಹಾಗೂ ಒಗ್ಗಟ್ಟುಗಳಿವೆ!

**ನಿರೋದಬರಣರೊಂದಿಗೆ ಪತ್ರವ್ಯವಹಾರ, p.138** **–ಶ್ರೀ ಅರವಿಂದರು**

*

**ದಾರಿತಪ್ಪಿದವರಿಗೆ ಆಶ್ರಯ**

ನಿಜವಾಗಿ ನಮ್ಮಲ್ಲಿ ಬಹಳಷ್ಟು ಜನರು ಸಾಮಾನ್ಯರಾಗಿದ್ದರು ಮತ್ತು ಯೋಗದ ಬಗ್ಗೆ ಅತಿ ಕಡಿಮೆ ತಿಳಿದುಕೊಂಡಿದ್ದರು. ಶ್ರೀಮಾತೆಯವರು ಹಾಗೂ ಶ್ರೀ ಅರವಿಂದರು ನಮ್ಮನ್ನು ಕಂಡ ಹಾಗೆ ಕೈಗೆತ್ತಿಕೊಂಡರು. ಅನನುಭವಿ–ಯಾದವರನ್ನು, ಸರಳ ಸ್ವಭಾವದವರನ್ನು, 'ನಯ ನಾಜೂಕಿಲ್ಲದವರು ಹಾಗೂ ರೂಪರಹಿತರಾದವರು ಎಂದು ನೀವು ಕರೆಯಬಹುದಾದವರನ್ನು ಕೈಗೆತ್ತಿಕೊಂಡು ಅವರ ಆತ್ಮಗಳ ಪ್ರತೀಕಗಳಲ್ಲಿ ಅವರಿಗೆ ಎರಕ ಕೊಡುವುದು ಅವರ ಯೋಗದ ಪ್ರಧಾನ ತತ್ವಗಳಲ್ಲಿ ಒಂದಾಗಿತ್ತು. "ಎಂತಹ ಗುರುವಿಗೆ ನಾವೆಂತಹ ಶಿಷ್ಯ–ರಾಗಿದ್ದೇವೆ, ನೀವು ಹೆಚ್ಚು ಒಳ್ಳೆಯವರನ್ನು ಆಯ್ದುಕೊಳ್ಳಬೇಕಾಗಿತ್ತು ಇಲ್ಲವೆ ಅಂತಹರಿಗೆ ಕರೆಕೊಡಬೇಕಾಗಿತ್ತು ಎಂದು ನಾನು ಬಯಸುತ್ತೇನೆ" ಎಂದು ನಾನು ಉದ್ಗರಿಸಿದಾಗ "ಶಿಷ್ಯಂದಿರು ಹಾಗಿದ್ದಾರೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಒಳ್ಳೆಯವರ ಗುಂಪು ಅಸ್ತಿತ್ವದಲ್ಲಿ ಇದೆ ಎಂದು ಒಪ್ಪಿಕೊಂಡಾಗಲೂ ಅದು ಮನುಕುಲದ ಮಾದರಿಯಾಗಬಲ್ಲದೆ? ಅಸಾಧಾರಣರಾದ ಅತಿ ಕಡಿಮೆ ಜನರೊಂದಿಗೆ ವ್ಯವಹರಿಸುವುದರಿಂದ ಸಮಸ್ಯೆಯನ್ನು ಪರಿಹರಿಸುವುದು ಅಸಂಭವ" ಎಂದು ಶ್ರೀ ಅರವಿಂದರು ಉತ್ತರ ನೀಡಿದರು.

ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ಪ್ರತಿಯೊಬ್ಬ ಶಿಷ್ಯನ ತೊಂದರೆಗಳಿಗೆ ಎಷ್ಟೊಂದು ಗಮನಕೊಟ್ಟಿದ್ದಾರೆ ಮತ್ತು ಲಕ್ಷ್ಯವಹಿಸಿದ್ದಾರೆ ಎಂಬುದನ್ನು ಓದುಗರು ನೋಡಿದಾಗ ಅವರು ಆಶ್ಚರ್ಯದಲ್ಲಿ ಹಾಗೂ ಮೆಚ್ಚಿಕೆಯಲ್ಲಿ ತಮ್ಮನ್ನು ಕಳೆದುಕೊಳ್ಳುತ್ತಾರೆ. ಸಾಧಕ–ರೋಗಿಯೊಬ್ಬನ ಚಿಕ್ಕ ಕುರುವಿನತ್ತ ಶ್ರೀ ಅರವಿಂದರು ಗಮನಹರಿಸಿ ವೈದ್ಯನಿಗೆ ಆ ರೋಗಿಯ ಆಧಾರರಹಿತ ದೂರುಗಳಿಗೆ ಲಕ್ಷ್ಯಗೊಡಲು ಹೇಳಿದರು. ಸಾಂಸರ್ಗಿಕ ರೋಗಗಳಿರುವ ಜನರಿಗೆ

ಆಶ್ರಮದ ಸಾಮಾನ್ಯ ಜೀವನದಲ್ಲಿ ಪಾಲುಗೊಳ್ಳಲು ಅನುವು ಮಾಡಿಕೊಡುವುದರ ಬದಲಾಗಿ ಅವರನ್ನು ದೂರ ಕಳಿಸಿಕೊಡಬೇಕೆಂದು ವೈದ್ಯಕೀಯ ಸಹಾಯಕನಾದ ನಾನು ಅವರ ವಿರುದ್ಧ ದೋಷಾರೋಪಣೆ ಮಾಡಿದ್ದೇನೆ. ಒಬ್ಬ ಅಂತಹ ರೋಗಕ್ಕೆ ಬಲಿಯಾದವನನ್ನು ಕುರಿತು ಕರುಣೆಯಿಂದ ತುಂಬಿಕೊಂಡಿದ್ದ ಶ್ರೀ ಅರವಿಂದರು ನನ್ನ ದೋಷಾರೋಪಣೆಗೆ ಕೊಟ್ಟ ಉತ್ತರ: "ಅವನಿಗೆ ಹೋಗಲು ಬೇರಾವ ಸ್ಥಳ ಇರಲಿಲ್ಲ", ನನ್ನ ನೆನಪಿನಲ್ಲಿ ಇನ್ನೂ ಗಂಟೆ ಬಾರಿಸುತ್ತಿದೆ.

**ನಿರೋದಬರಣರೊಂದಿಗೆ ಪತ್ರವ್ಯವಹಾರ xii**

*

**ಎಂದೆಂದಿಗೂ ವಿಚಾರಪೂರ್ಣರಾದ ದೈವೀ ಪ್ರಭು**

ಅಟ್ಟದ ಮೇಲಿನ ಜಗುಲಿಯನ್ನು (verandah) ದೈವೀ ಪ್ರಭು ಪವಿತ್ರ–ಗೊಳಿಸಿದ್ದಾರೆ, ಏಕೆಂದರೆ ಅವರು ಅಲ್ಲಿ ದಿನಾಲು ಪೂರ್ವಾಹ್ನದ ಸಮಯದಲ್ಲಿ ಎರಡು ಗಂಟೆಗಳ ಕಾಲ, ಮಧ್ಯಾಹ್ನದಲ್ಲಿ ಸಾಯಂಕಾಲದ ಮಾತುಕತೆಗಳು ನಡೆಯುತ್ತಿದ್ದಾಗ ಮತ್ತು ಕೆಲವೊಮ್ಮೆ ಸಾಧಕರೊಡನೆ ಯೋಗ್ಯವೆನಿಸಿದಾಗ ಇಲ್ಲವೆ ಅವರಿಗೆ ಕರೆಕೊಟ್ಟಾಗ ಒಂದು ಗಂಟೆಯ ಕಾಲ ಭಾಗವಹಿಸುತ್ತಿದ್ದರು.

ಮಧ್ಯೆ ಇದ್ದ ಬಾಗಿಲಿನ ಹತ್ತಿರ ಪೂರ್ವದಿಕ್ಕಿಗೆ ಮುಖಮಾಡಿ ಒಂದು ಮೇಜನ್ನು ಹಾಗೂ ಒಂದು ಕುರ್ಚಿಯನ್ನು ಇರಿಸಲಾಗಿತ್ತು. ಅಲ್ಲಿ ದೈವೀ ಪ್ರಭು ವಾರ್ತಾಪತ್ರಿಕೆಗಳನ್ನು ಓದುತ್ತ ಇಲ್ಲವೆ ಸಾಧಕರನ್ನು, ಪ್ರಾಸಂಗಿಕವಾಗಿ ದರ್ಶನಕ್ಕಾಗಿ ಬಂದ ಜನರನ್ನು ಸಂಧಿಸುತ್ತ ಕುಳಿತುಕೊಳ್ಳುತ್ತಿದ್ದರು.

ಆದರೆ ಕೆಲವೊಮ್ಮೆ ಅವರು ಬರುವುದಕ್ಕಿಂತ ಮೊದಲು ಮನೆಯ ಬೆಕ್ಕುಗಳಲ್ಲಿ ಒಂದು ಅವರ ಕುರ್ಚಿಯ ಮೇಲೆ, ಅದು ತನ್ನ ಹಕ್ಕೇನೋ ಎಂಬಂತೆ ಒರಗಿಕೊಂಡಿರುವುದು ಅದಕ್ಕೆ ಹಿತಕರವಾಗಿತ್ತು ಮತ್ತು ಅದು ದೈವೀ ಪ್ರಭು ಕುಳಿತುಕೊಳ್ಳುವುದಕ್ಕೆ ತನ್ನ ಸ್ಥಾನವನ್ನು ಬಿಟ್ಟುಕೊಡುತ್ತಿರಲಿಲ್ಲ. ಸೂರ್ಯನಿಂದ ಪ್ರಕಾಶ ಬರುವಂತೆ ಶ್ರೀ ಅರವಿಂದರ ಯೌಗಿಕ ದೇಹದಿಂದ ಸ್ವರ್ಗೀಯ ಬೆಚ್ಚಗಿನ ಸಂತೋಷ ಪಡೆಯಲು ಆ ಬೆಕ್ಕು ಬಯಸುತ್ತಿದ್ದಿರಬಹುದು. ಎಂದೆಂದಿಗೂ ವಿಚಾರಪೂರ್ಣರಾದ ದೈವೀ ಪ್ರಭು ಆ ನೆಚ್ಚಿಕೆಯ ಬೆಕ್ಕನ್ನು ಕ್ಷೋಭೆಗೊಳಪಡಿಸು–ತ್ತಿದ್ದಿಲ್ಲ, ಆದರೆ ಸರಳವಾಗಿ, ಇಲ್ಲ, ಕುರ್ಚಿಯ ತುದಿಯಲ್ಲಿರುವ ಚಿಕ್ಕ ಜಾಗದಲ್ಲಿ,

ಅವರಲ್ಲಿರುವವರೆಗೆ ಅಪಾಯಕ್ಕೊಳಪಟ್ಟು ಕುಳಿತುಕೊಳ್ಳುತ್ತಿದ್ದರು. ಅವರು ಸ್ವಭಾವದಿಂದ ಯಾವುದೇ ಪ್ರಜಾಪ್ರಭುತ್ವವಾದಿಗಿಂತ ಹೆಚ್ಚಿನ ರೀತಿಯಲ್ಲಿ ಪ್ರಜಾಪ್ರಭುತ್ವವನ್ನು ಅನುಮೋದಿಸುವವರಾಗಿದ್ದರು, ಅವರ ಪ್ರಜಾಪ್ರಭುತ್ವವನ್ನು ಅನುಮೋದಿಸುವುದರ ಪ್ರಭಾವ ಕೇವಲ ಮನುಷ್ಯರ ಮೇಲಷ್ಟೇ ಅಲ್ಲ, ಆದರೆ ಪ್ರಾಣಿಗಳ ಜೀವನದ ಮೇಲೂ ವಿಸ್ತರಿಸಿಕೊಂಡಿತ್ತು.

**ಪೂಜಾಲಾಲರ ಸ್ಮರಣೆಗಳು, ಪು.79**

*

**ದೈವೀ ಪ್ರಭುವಿನ ಮುದ್ದಾಟ**

ಗೋಲ್ಡೀ ಹೆಸರಿನ ಒಂದು ಅಸಾಧಾರಣ ನಾಯಿಯಿತ್ತು. ಲಕ್ಷ್ಮೀಬಾಯಿ ಅದನ್ನು ಶ್ರೀಮಾತೆಯವರ ಬಳಿ ಕರೆದೊಯ್ಯುತ್ತಿದ್ದಳು. ಅಲ್ಲಿಂದ ಗೋಲ್ಡೀ ಸ್ವತಃ ಶ್ರೀ ಅರವಿಂದರ ಕೋಣೆಗೆ ಬರುತ್ತಿತ್ತು– ಅದು ನಿಜವಾಗಿ ಅಸಾಧಾರಣ ವಿಷಯವಾಗಿತ್ತು. ನನ್ನ ತೋಳುಗಳಲ್ಲಿ ಎತ್ತಿಕೊಂಡು ಶ್ರೀ ಅರವಿಂದರ ಬಳಿಗೆ ಹೋಗುತ್ತಿದ್ದೆ. ಅವರು ಮುಗುಳ್ನಗುತ್ತ ತಮ್ಮ ಎರಡೂ ಕೈಗಳಿಂದ ಅದರ ಮೈದಡುವುತ್ತಿದ್ದರು.

ಒಂದು ದಿನ ಕುಳಿತುಕೊಂಡಿದ್ದ ಶ್ರೀ ಅರವಿಂದರ ಬಳಿ ಅದು ನೇರವಾಗಿ ಹೋಯಿತು ಮತ್ತು ಅವರ ಪಾದಗಳನ್ನು ಒಂದರ ನಂತರ ಒಂದರಂತೆ ನೆಕ್ಕಲು ಪ್ರಾರಂಭಿಸಿತು. ಶ್ರೀ ಅರವಿಂದರು ಅದಕ್ಕೆ ಅನುವು ಮಾಡಿಕೊಟ್ಟರಲ್ಲದೆ ಮುಂದೆ ಬಾಗಿ ಅದರ ಬೆನ್ನನ್ನು ನೇವರಿಸಿದರು.

**Champaklal Speaks, p.130**

*

**ವಿಶ್ರಾಂತಿ ಪಡೆಯುತ್ತಿದ್ದ ಗುಬ್ಬಿಯ ಬಗ್ಗೆ ಕಾಳಜಿ**

ಅಂದು ಬೆಳಿಗ್ಗೆ ಐದು ಗಂಟೆಯಾಗಿತ್ತು. ಯಥಾಪ್ರಕಾರ ನಾನು ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ವಾಸಿಸುತ್ತಿದ್ದ ಪವಿತ್ರ ಮನೆಗೆ ಹೋಗಿದ್ದೆ. ನನಗೆ ಕೃಪೆ ತೋರಿಸಿ ಆ ಮನೆಯ ಒಂದು ಭಾಗವನ್ನು ಸ್ವಚ್ಛಗೊಳಿಸುವ ಕಾರ್ಯವನ್ನು ಕೊಡಲಾಗಿತ್ತು. ನಾನು ಒಳಗೆ ಪ್ರವೇಶಿಸಲು ಮತ್ತು ನನ್ನ

ಆನಂದದಾಯಕ ಕಾರ್ಯವನ್ನು ಪ್ರಾರಂಭಿಸಲು ಶ್ರೀಮಾತೆಯವರೇ ಸ್ವತಃ ಬಾಗಿಲನ್ನು ತೆರೆಯುತ್ತಿದ್ದರು.

ಆ ದಿನ ಬಾಗಿಲನ್ನು ತೆರೆದ ನಂತರ ಶ್ರೀಮಾತೆಯವರು ಅಲ್ಲಿ ನಿಂತುಕೊಂಡಿದ್ದರು ಮತ್ತು ಶ್ರೀ ಅರವಿಂದರ ಹೆಸರಿನಲ್ಲಿ, ಆ ದಿನ ದೊಡ್ಡ ಮಧ್ಯ ಬಾಗಿಲಿನ ತುದಿಯ ಮೇಲೆ ವಿಶ್ರಾಂತಿ ಪಡೆಯುತ್ತಿದ್ದ ಗುಬ್ಬಿಯನ್ನು ಕ್ಷೋಭೆಗೊಳ–ಪಡಿಸಬಾರದೆಂದು ಹೇಳಿದರು. ಅದು ದೈವಾಜ್ಞೆಯೆಂದು ನಾನು ಭಾವಿಸಿದೆ ಮತ್ತು ಕಾಳಜಿಪೂರ್ವಕ ಇರುವೆನೆಂದು ವಚನ ನೀಡಿದೆ. ನಂತರ ಒಳಗೆ ಹೆಜ್ಜೆ ಇರಿಸಿದೆ ಮತ್ತು ಶ್ರೀಮಾತೆಯವರು ವಿಶ್ರಾಂತಿಯತ್ತ ತೆರಳಿದರು. ಸದ್ದು ಮಾಡದೆ, ಧ್ವನಿ ಹೊರಡಿಸದೆ ನಾನು ಈ ಮೊದಲು ಹೇಳಿದ ಬಾಗಿಲನ್ನು ದಾಟಿ ಹೋದೆ ಮತ್ತು ಆ ಗುಬ್ಬಿ ಅಲುಗಾಡದೆ ಆ ಬಾಗಿಲಿನ ತುತ್ತ ತುದಿಯ ಭಾಗದಲ್ಲಿ ಕುಳಿತದ್ದನ್ನು ನೋಡಿ ಆಶ್ಚರ್ಯವಾಯಿತು ಹಾಗೂ ಆನಂದವಾಯಿತು.

ನನ್ನ ಹೃದಯ ಕರಗಿತು. ನಮ್ಮ ದೈವೀ ಪ್ರಭು ಎಷ್ಟೊಂದು ಕನಿಕರ ತೋರಿಸುವವರಾಗಿದ್ದಾರೆ. ರಾತ್ರಿ ಸಮಯದಲ್ಲಿ ಅವರು ಅಲ್ಲಿದ್ದ ದಿವಾನಖಾನೆಯಲ್ಲಿ ನಡೆದಾಡುತ್ತಿದ್ದರು. ಆಗ ಅವರು ಈ ಚಿಕ್ಕ ಪ್ರಾಣಿ ತನ್ನ ರಾತ್ರಿ ವಿಶ್ರಾಂತಿಯನ್ನು, ಸಾಮಾನ್ಯವಾಗಿ ಇರುತ್ತಿದ್ದ ಆ ಶಾಂತಿಯುತ ವಾತಾವರಣದಲ್ಲಿ, ತೆಗೆದುಕೊಳ್ಳುತ್ತಿ–ರುವುದನ್ನು ನೋಡಿದ್ದರು. ಕಾಳಜಿ ವಹಿಸುವುದಕ್ಕಾಗಿ ಅವರ ಕರುಣೆ ಮಾನವ ಸತ್ತೆಗಳಿಗಷ್ಟೇ ಸೀಮಿತವಾಗಿರಲಿಲ್ಲ, ಅವರ ವಿಶ್ವಂಭರವಾಗಿರುವ ಹೃದಯದಲ್ಲಿ ಚಿಕ್ಕ ಪುಟ್ಟ ಮತ್ತು ದೊಡ್ಡ ಸತ್ತೆಗಳಿಗೆಲ್ಲ ಸ್ಥಾನವಿತ್ತು.

ನಿಜವಾಗಿ ನಾವೆಲ್ಲರೂ ದೈವಾನುಗ್ರಹಕ್ಕೆ ಪಾತ್ರರಾಗಿದ್ದೇವೆ, ದೈವೀ ಪ್ರಭುವಾದ ಅವರನ್ನು ಹೊಂದಿದ ಪೃಥ್ವಿ ದೈವಾನುಗ್ರಹಕ್ಕೆ ಪಾತ್ರವಾಗಿದೆ, ಅವರು ವಿಶ್ವದ ದೈವೀ ಪ್ರಭುವನ್ನು ಮೈವೆತ್ತವರಾಗಿದ್ದಾರೆ, ತಮ್ಮ ಎತ್ತರಗಳಿಂದ ನಮ್ಮ ಮೇಲೆ ಎಲ್ಲ ಕಾಲಕ್ಕೂ ವಾಲಿಕೊಂಡಿದ್ದಾರೆ ಮತ್ತು ತಮ್ಮ ಪ್ರೇಮದ ಆಳಗಳಿರುವ ಮನೆಯಲ್ಲಿ ನಮಗೆ ವಾಸಿಸಲು ಸ್ಥಳ ಮಾಡಿಕೊಟ್ಟಿದ್ದಾರೆ.

**ಪೂಜಾಲಾಲ ಅವರ ಸ್ಮರಣೆಗಳು, ಪು.80**

*

## ಕೊನೆಯ ಎಚ್ಚರಿಕೆ

ಕೊಲ್ಕತ್ತಾದಲ್ಲಿ ಶ್ರೀ ಅರವಿಂದರು ತಮ್ಮ ಕುಟುಂಬದೊಡನೆ ವಾಸಿಸುತ್ತಿದ್ದಾಗ ಅವರ ಕಿರಿಯ ಸಹೋದರಿ ಸರೋಜಿನಿ ತಮ್ಮ ಅಡಿಗೆಯವಳ ಒರಟುತನ ಹಾಗೂ ತಲೆಹರಟೆ ಕುರಿತು ಮೇಲಿಂದ ಮೇಲೆ ದೂರುತ್ತಿದ್ದಳು. ಶ್ರೀ ಅರವಿಂದರು ಅದನ್ನು ಕೇಳಿಸಿಕೊಳ್ಳುತ್ತಿದ್ದರು ಮತ್ತು ನಂತರ ಮರೆತು ಬಿಡುತ್ತಿದ್ದರು. ಕೊನೆಗೆ ಸರೋಜಿನಿ ತಾಳ್ಮೆ ಕಳೆದುಕೊಂಡು ಅಡಿಗೆಯವಳ ಮೇಲೆ ಕಠಿಣ ಕ್ರಮ ಕೈಕೊಳ್ಳಲು ಒತ್ತಾಯಪಡಿಸಿದಳು. ಶ್ರೀ ಅರವಿಂದರು ಅಡಿಗೆಯವಳನ್ನು ಕರೆದು ಗಂಭೀರ ಧ್ವನಿಯಲ್ಲಿ, “ನೀನು ಒರಟಾದ ರೀತಿಯಲ್ಲಿ ನಡೆದುಕೊಳ್ಳುತ್ತಿರುವಿ ಎಂದು ಕೇಳುತ್ತಿದ್ದೇನೆ. ಮತ್ತೆ ಹಾಗೆ ಮಾಡಬೇಡ” ಎಂದು ಕೇಳಿದರು. ಪ್ರತಿಯೊಬ್ಬರಿಗೂ ನಿರಾಶೆಯಾಯಿತು. ನಿರೀಕ್ಷಿಸಿದ್ದಕ್ಕಿಂತ ಹಠಾತ್ತನೆ ಕೆಳಗಿಳಿಯುವಂತಾದುದರಿಂದ ಅವರಿಂದ ಇನ್ನೂ ಹೆಚ್ಚಿನ ಕಟ್ಟುನಿಟ್ಟನ್ನು ನಿರೀಕ್ಷಿಸಲಾಗುವುದಿಲ್ಲ ಎಂಬುದನ್ನು ಅವರು ಅರಿತುಕೊಂಡರು.

ಶ್ರೀಮಾತೆಯವರು ಒಂದು ದೂರನ್ನು ಶ್ರೀ ಅರವಿಂದರ ಬಳಿ ಒಯ್ದಾಗ ಹಾಗೆಯೇ ಆಗಿತ್ತು. ಸಾಧಕನೊಬ್ಬ ಸಿಟ್ಟಿನ ಭರದಲ್ಲಿ ಯಾರನ್ನೋ ಹೊಡೆದಿದ್ದ. “ಇದು ಮೂರನೆಯ ಸಲವಾಗಿದೆ, ದೈವೀ ಪ್ರಭು ಏನನ್ನು ಮಾಡಬೇಕು, ಅದಕ್ಕಾಗಿ ನಿಮ್ಮ ಅನುಮತಿಯನ್ನು ಬಯಸುತ್ತಿದ್ದೇನೆ.” ಎಂದು ಶ್ರೀಮಾತೆ–ಯವರು ಹೇಳಿದ್ದರು. ಶ್ರೀ ಅರವಿಂದರು ಶಾಂತ ರೀತಿಯಲ್ಲಿ “ಅವನಿಗೆ ಕೊನೆಯ ಎಚ್ಚರಿಕೆ ಕೊಡಿರಿ” ಎಂದು ಹೇಳಿದರು. ಈ ಕೊನೆಯ ಎಚ್ಚರಿಕೆ ನಿಜವಾಗಿ ಕೊನೆಯದಾಗದು ಎಂದು ನಾವು ತಿಳಿದಿದ್ದೆವು.

*

## ಅವನನ್ನು ಬಿಟ್ಟುಕೊಡುವುದನ್ನು ಕುರಿತು ನಾನು ಪ್ರಸ್ತಾಪ ಮಾಡುವುದಿಲ್ಲ

ಬಂಡಾಯದ ಮನೋಭಾವದಿಂದ ಯಾರಾದರೂ ಗುರುವನ್ನು ತ್ಯಜಿಸಿ ಹೋದರೆ ಗುರು ಅವನನ್ನು ಬಿಟ್ಟುಕೊಡುವುದಿಲ್ಲ ಎಂಬ ಶ್ರೀಮಾತೆಯವರ ಹೇಳಿಕೆ ಅನುಯಾಯಿಗೆ ಆಳವಾದ ಆಧ್ಯಾತ್ಮಿಕ ಪ್ರಾಮುಖ್ಯತೆಯಿರುವ ಸತ್ಯವಾಗಿದ್ದು ಅದು ತನ್ನೊಡನೆ ಶ್ರೇಷ್ಠ ಸಾಂತ್ವನವನ್ನು ಕೊಂಡೊಯ್ಯುತ್ತದೆ. “ದೈವೀಕೃಪೆ ಹಿಂದೆ

ಸರಿಯುವುದಕ್ಕೆ ಪಾತ್ರರಾದ ಜನ ಬಹಳ ಕಡಿಮೆ ಇರುತ್ತಾರೆ, ಆದರೆ ದೈವೀಕೃಪೆಯಿಂದ ಹಿಂದೆ ಸರಿದುಕೊಳ್ಳುವ ಜನರು ಅನೇಕರಿದ್ದಾರೆ." ಎಂದು ಶ್ರೀ ಅರವಿಂದರು ಹೇಳಿದ್ದಾರೆ. ಶ್ರೀ ಅರವಿಂದರು ಒಬ್ಬ ಅನುಯಾಯಿಗೆ "ನಿನ್ನನ್ನು ಎಂದಿಗೂ ಬಿಟ್ಟುಕೊಡುವುದಿಲ್ಲ" ಎಂದು ಬರೆದಿದ್ದರು. ಆ ಅನುಯಾಯಿ ಆಶ್ರಮ ತ್ಯಜಿಸಿ ಹೋದಾಗ ನಾನು ಶ್ರೀ ಅರವಿಂದರನ್ನು ಕೇಳಿದೆ: "ಅವನು ಹೊರಟು ಹೋಗಿದ್ದಾನೆ. ಅವನಿಗೆ ನೀವು ನಿನ್ನನ್ನು ಬಿಟ್ಟುಕೊಡುವುದಿಲ್ಲ ಎಂದು ಹೇಳಿದ್ದಿರಿ" "ನಾನು ಅವನನ್ನು ಬಿಟ್ಟುಕೊಡುವ ಪ್ರಸ್ತಾಪ ಮಾಡುವುದಿಲ್ಲ" ಎಂದು ಶ್ರೀ ಅರವಿಂದರು ಉತ್ತರ ನೀಡಿದರು. ಕೇವಲ ಅನುಯಾಯಿ ವಂಚನೆಯಂತಹ ಕಾರ್ಯ ಕೈಕೊಂಡು ಗುರುವಿಗೆ ದ್ರೋಹ ಮಾಡಿದಾಗ ಅವನು ತನ್ನನ್ನೇ ಗುರುವಿನ ರಕ್ಷಣೆಯಿಂದ ಕಡಿದುಕೊಳ್ಳುತ್ತಾನೆ, ಆಗಲೂ ಕೂಡ ಗುರುವಿನ ಕೃಪೆಯಿಂದ ಪೂರ್ತಿ ಕಡಿದುಕೊಂಡಿರುವುದಿಲ್ಲ.

**ಶ್ರೀಮಾತೆಯವರೊಡನೆ ಸ್ಮರಣಾರ್ಹ ಸಂಪರ್ಕಗಳು, ನಿರೋದಬರಣ, ಪು: 107–08**

*

## ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 21/7/2017ರಂದು ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯ ವತಿಯಿಂದ **"ಅಂಕುರ–2017"** ಅಂತರ್‌ಶಾಲಾ ಸಾಂಸ್ಕೃತಿಕ ಸಾಹಿತ್ಯಿಕ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. 20ಕ್ಕಿಂತ ಹೆಚ್ಚು ಶಾಲೆಗಳ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದರು. ಶಾಲಾ ಅಧ್ಯಕ್ಷರಾದ ಶ್ರೀ ಅಜಿತ್ ಸಬ್ನೀಸ್‌ರವರ ಅಧ್ಯಕ್ಷತೆಯಲ್ಲಿ ಮಾಜಿ ಲೋಕಾಯುಕ್ತ, ಕರ್ನಾಟಕ ಸರ್ಕಾರ ಮತ್ತು ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಧೀಶರಾದ ಜಸ್ಟೀಸ್ ಎನ್. ಸಂತೋಷ ಹೆಗ್ಡೆ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ನಂತರ ಅವರು ತಮ್ಮ ಭಾಷಣದಲ್ಲಿ ಇಂದಿನ ವಿದ್ಯಾರ್ಥಿಗಳ ಮುಂದಿರುವ ಸವಾಲುಗಳು ಅದನ್ನು ಹೇಗೆ ಸಮರ್ಥವಾಗಿ ಎದುರಿಸಬೇಕು ಮತ್ತು ಜೀವನದಲ್ಲಿ ಮೌಲ್ಯಗಳ

ಅಳವಡಿಕೆ ಎಷ್ಟು ಅಗತ್ಯ ಎಂದು ವಿವರಿಸಿದರು. ಸಮಾರೋಪ ಸಮಾರಂಭದಲ್ಲಿ ಬ್ಯಾಂಕ್ ಆಫ್ ಬರೋಡ ಪ್ರಾದೇಶಿಕ ಕಛೇರಿಯ ಸಹಾಯಕ ಮುಖ್ಯ ಪ್ರಬಂಧಕರಾದ ಶ್ರೀ ಲಲಿತ್ ತ್ಯಾಗಿರವರು ಮುಖ್ಯ ಅತಿಥಿಗಳಾಗಿ ಆಗಮಿಸಿದರು. ಶ್ರೀ ಸಂತೋಷ್ ಪಿ. ಪ್ರಬಂಧಕರು, ಬ್ಯಾಂಕ್ ಆಫ್ ಬರೋಡ ಜೆ.ಪಿ. ನಗರ ಶಾಖೆ ಇವರು ಗೌರವ ಅತಿಥಿಗಳಾಗಿ ಸಮಾರಂಭದಲ್ಲಿ ಭಾಗವಹಿಸಿದ್ದರು. ಅಂಕುರ ಅಂಗವಾಗಿ ಆಯೋಜಿಸಿದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರ ವಿತರಿಸಲಾಯಿತು. ಶಾಲಾ ಆಡಳಿತಾಧಿಕಾರಿ ಮತ್ತು ಶಾಲಾ ಪ್ರಾಂಶುಪಾಲರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ವಿದ್ಯಾರ್ಥಿ ವೃಂದದವರೇ ನಿರ್ವಹಿಸಿದರು. ವಂದೇ ಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು.



*A prayer, a master act, a king idea*
*can link man's strength to a*
*transcendent Force.*

- Sri Aurobindo

**RNI No. 22511/1971**
No. of Pages **60 + 4 (Cov. Page)**
KAR Reg No : RNP/KA/BGS/368/2015-2017
Date of Publication on 7th of Every Month
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.